RAMRAJ©
ಕಾಟನ್
ಭಾರತೀಯ ಸಂಸ್ಕೃತಿ

ಸಂಪುಟ 9 • ಸಂಚಿಕೆ 2 • ಜುಲೈ 2026 • ಬೆಲೆ ರೂ. 18/-

ಬಿಳುಪು

VENMAI ಕನ್ನಡ ಮಾಸಿಕ

ಕನ್ನಡ ಮಾಸಿಕ

ಸದ್ಗುಣಗಳ
ವಿಶೇಷಾಂಕ


RAMRAJ
lagnaa®
PURE SILK DHOTIS • SHIRTS
Think
Wedding
Think Lagnaa

RAMRAJ
ಕಾಟನ್
ಭಾರತೀಯ ಸಂಸ್ಕೃತಿ
ನಮ್ಮ ಮಕ್ಕಳಿಗೆ ಅತ್ಯುತ್ತಮ ಆದರ್ಶ ವ್ಯಕ್ತಿಗಳಾಗಿದ್ದು
ಸದ್ಗುಣಗಳುಳ್ಳವರಾಗಿ ಅವರನ್ನು ಬೆಳೆಸಿ
ಒಳ್ಳೆಯ ತಲೆಮಾರುಗಳನ್ನು ನಾವು ಸೃಷ್ಟಿಸಲು ದಾರಿ ತೋರಿಸುವ
ಸದ್ಗುಣಗಳ
ವಿಶೇಷಾಂಕ
ಎನ್ನುವ ಈ
ಸುಮಧುರ
ಸಂಚಿಕೆಯನ್ನು
ನಿಮಗೆ ನೀಡಲು
ನಾವು ಹೆಮ್ಮೆ
ಪಡುತ್ತೇವೆ.

ಗೌರವಾನ್ವಿತರಿಗೆ...

ನಮಸ್ಕಾರ.

"ಸದ್ಗುಣವಿಲ್ಲದ ಜ್ಞಾನ ಅಪಾಯಕಾರಿ" ಎಂದು ಹೇಳುವುದುಂಟು. ಇದು ಮಾನವರು ಸಾಧನೆಗಳೆಂದು ಪರಿಗಣಿಸುವ ಯಶಸ್ಸು, ಸಂಪತ್ತು, ಖ್ಯಾತಿ, ಪ್ರತಿಭೆ ಇತ್ಯಾದಿಗಳೆಲ್ಲದಕ್ಕೂ ಅನ್ವಯಿಸುತ್ತದೆ, ಸದ್ಗುಣಗಳ ಕೊರತೆಯಿರುವವರ ಬಳಿ ಏನೇ ಇದ್ದರೂ ಅವು ಉತ್ತಮ ಫಲಿತಾಂಶಗಳನ್ನು ನೀಡುವುದಿಲ್ಲ.

ಒಂದು ಕ್ರಿಕೆಟ್ ಪಂದ್ಯದಲ್ಲಿ ಗೆದ್ದ ತಂಡದ ಆಟಗಾರರು ಸೋತ ತಂಡದ ಆಟಗಾರರೊಂದಿಗೆ ಕೈಕುಲುಕಲು ನಿರಾಕರಿಸುವ ಮೂಲಕ ತಮ್ಮ ವಿಜಯವನ್ನು ಆಚರಿಸಿದರು. ಕ್ರೀಡಾ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ಹಿರಿಯ ವ್ಯಕ್ತಿಗಳೂ ಈ ಅಸಭ್ಯ ವರ್ತನೆಯನ್ನು ಖಂಡಿಸಿದರು. ಇದು ಆ ತಂಡದ ಗೆಲುವಿನ ಸೌಂದರ್ಯವನ್ನು ಹಾಳು ಮಾಡಿಬಿಟ್ಟಿತು ಎಂದು ಅವರು ಟೀಕಿಸಿದರು.

ಸದ್ಗುಣವಿಲ್ಲದ ಜನರ ಬಳಿ ಇರುವ ಸಂಪತ್ತು, ಪ್ರತಿಭೆ, ಜ್ಞಾನ ಇತ್ಯಾದಿ ಎಲ್ಲವುಗಳ ಮೌಲ್ಯವೂ ಕಡಿಮೆಯಾಗುತ್ತದೆ. ಅದಕ್ಕಾಗಿಯೇ, 'ಪೋಷಕರು ತಮ್ಮ ಮಗುವಿಗೆ ನೀಡಬಹುದಾದ ಅತ್ಯಂತ ದೊಡ್ಡ ಆಸ್ತಿ ಸದ್ಗುಣ' ಎಂದು ಹಿರಿಯರು ಹೇಳುತ್ತಾರೆ. ಯಶಸ್ಸು ಗಳಿಸಿದ ಮಕ್ಕಳಿಗಿಂತಲೂ ಹೆಚ್ಚಾಗಿ, ಸದ್ಗುಣಶೀಲ ಮಕ್ಕಳು ತಮ್ಮ ಹೆತ್ತವರನ್ನು ಹೆಮ್ಮೆಪಡಿಸುತ್ತಾರೆ. ಸದ್ಗುಣಶೀಲ ಮಕ್ಕಳನ್ನು ಹೊಂದಿರುವವರು ತಮ್ಮ ಜೀವನದುದ್ದಕ್ಕೂ ಸಂತೋಷವನ್ನು ಹೊಂದಿರುತ್ತಾರೆ. ಯಶಸ್ಸು ಸಾಧಿಸುವ ಮಕ್ಕಳು ಆ ಉತ್ಸಾಹದಲ್ಲಿ ತಮ್ಮ ಹೆತ್ತವರನ್ನು ಮತ್ತು ಸಮಾಜವನ್ನು ಮರೆಯುವ ಅಥವಾ ಧಿಕ್ಕರಿಸುವ ಸಾಧ್ಯತೆಗಳಿವೆ. ಆದರೆ ಸದ್ಗುಣಶೀಲ ಮಕ್ಕಳು ಮನೆ ಮತ್ತು ಸಮಾಜಕ್ಕೆ ಉಪಯುಕ್ತರಾಗಿರುತ್ತಾರೆ.

ಪರೀಕ್ಷೆಯಲ್ಲಿ ಹೆಚ್ಚು ಯಶಸ್ಸು ಗಳಿಸುವ ಹಾಗೆ ಮಕ್ಕಳನ್ನು ಬೆಳೆಸುವ ಅಪೇಕ್ಷೆ ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ಆಧುನಿಕ ಜೀವನಶೈಲಿಯಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ. ಒಂದು ಪ್ರಸಿದ್ಧ ಮಕ್ಕಳ ಗೀತೆ ಹೀಗಿದೆ... 'ಚುಟುಪುಟು ಓಡಾಡುವ ಕೋಳಿಯನ್ನೂ ಆಟದಲ್ಲಿ ಸೇರಿಸಿಕೊಂಡು ಆಟವಾಡು... ಕಾದು ಕದಿಯುವ ಕಾಗೆಯ ಮೇಲೂ ಕರುಣೆ ತೋರಿ ಆಟವಾಡು...' ಎಂದು ಆ ಹಾಡಿನ ಸಾಲುಗಳು ಬರುತ್ತವೆ. 'ಬಾಲ ಅಲ್ಲಾಡಿಸುವ ನಾಯಿ, ಬಂಡಿ ಎಳೆಯುವ ಸಮರ್ಥ ಕುದುರೆ, ಭೂಮಿಯನ್ನು ಉಳುಮೆ ಮಾಡುವ ಹಸು, ನಮ್ಮನ್ನೇ ಆಶ್ರಯಿಸಿ ಬದುಕುವ ಮೇಕೆ... ಹೀಗೆ ಎಲ್ಲವನ್ನೂ ಆದರಿಸಬೇಕು' ಎಂದು ಆ ಹಾಡು ಮುಂದುವರೆಯುತ್ತದೆ. ನಮ್ಮ ಬದುಕಿನಲ್ಲಿ ನಮ್ಮೊಂದಿಗೆ ಏನೇನೆಲ್ಲ ಇವೆಯೋ ಅವೆಲ್ಲವನ್ನೂ ಆದರಿಸಿ ಜೀವನ ಮಾಡಬೇಕು ಎಂಬುದನ್ನು ಈ ಹಾಡು ಮಕ್ಕಳಿಗೆ ಮನವರಿಕೆ ಮಾಡಿ ಕೊಡುತ್ತದೆ. ಸ್ವಾರ್ಥವನ್ನು ತ್ಯಜಿಸಿ ನಮ್ಮ ಸುತ್ತಲಿನ ಎಲ್ಲದರೊಂದಿಗೆ ಪ್ರೀತಿಯಿಂದ ಬದುಕುವುದೇ ಸದ್ಗುಣ. ಇದನ್ನು ಬಾಲ್ಯದಿಂದಲೇ ಮಕ್ಕಳು ಕರಗತ ಮಾಡಿಕೊಂಡರೆ, ಅವರು ಖಂಡಿತವಾಗಿಯೂ ತಮ್ಮ ಜೀವನದುದ್ದಕ್ಕೂ ಅದನ್ನು ಅನುಸರಿಸುತ್ತಾರೆ.

ಗುಜರಾತ್‌ನ ಒಂದು ಶಾಲೆಯಲ್ಲಿ ಪರೀಕ್ಷೆಯ ಸಮಯದಲ್ಲಿ, ಎಲ್ಲರೂ ಪಠ್ಯಪುಸ್ತಕವನ್ನು ನೋಡಿಕೊಂಡು ನಕಲು ಮಾಡಿ ಪರೀಕ್ಷೆ ಬರೆಯುತ್ತಿದ್ದರು. ಶಿಕ್ಷಕರು ಅದನ್ನು ಗಮನಿಸಿದರೂ ಗಮನಿಸದಂತೆ ಸುಮ್ಮನಿದ್ದರು. ಮೋಹನದಾಸ್ ಕರಮಚಂದ್ ಗಾಂಧಿ ಎಂಬ ಒಬ್ಬ ವಿದ್ಯಾರ್ಥಿ ಮಾತ್ರ ನಕಲು ಮಾಡದೆ ತನಗೆ ತಿಳಿದದ್ದನ್ನು ಪರೀಕ್ಷೆಯಲ್ಲಿ ಬರೆದು ಕಡಿಮೆ ಅಂಕಗಳನ್ನು ಪಡೆಯುತ್ತಾನೆ. ಶಿಕ್ಷಕರು ಅವನಿಗೆ ಅವಕಾಶ ನೀಡಿದ್ದರೂ, ಅವನು ನಕಲು ಮಾಡಿ ಪರೀಕ್ಷೆ ಬರೆಯುವುದಿಲ್ಲ. ಆ ಹುಡುಗ ತಾನು ಪರೀಕ್ಷೆಯಲ್ಲಿ ಪ್ರಾಮಾಣಿಕವಾಗಿ ಬರೆದುದಕ್ಕಾಗಿ ಸಂತೋಷಪಡುತ್ತಾನೆ. ಮುಂದೆ ಅದೇ ಬಾಲಕ, 'ಮಹಾತ್ಮ' ಎಂಬ ಬಿರುದಿನೊಂದಿಗೆ ಇಡೀ ರಾಷ್ಟ್ರದ ಸಂಕೇತವಾಗಿ ಬದಲಾಗುತ್ತಾನೆ. ಸದ್ಗುಣವುಳ್ಳ ಮಗು ಸಮಾಜದಲ್ಲಿ ಹೇಗೆ ಬದಲಾವಣೆಯನ್ನು ತರಬಹುದು ಎಂಬುದಕ್ಕೆ ಗಾಂಧಿಯವರ ಜೀವನವು ನಮಗೆ ಅತ್ಯುತ್ತಮ ಉದಾಹರಣೆಯಾಗಿದೆ.

ಗಾಂಧಿಯವರು ವೃತ್ತಿಯಲ್ಲಿ ವಕೀಲರಾಗಿದ್ದರು. ನ್ಯಾಯಾಲಯದಲ್ಲಿ ದಾಖಲಾಗುವ ಯಾವುದೇ ಪ್ರಕರಣಕ್ಕೆ ಎರಡು ಬದಿಗಳಿರುತ್ತವೆ. ಎರಡೂ ಕಡೆಯವರು ತಮ್ಮದೇ ಸರಿ ಎಂದು ವಾದಿಸುತ್ತಾರೆ ಮತ್ತು ಸಾಕ್ಷ್ಯಗಳನ್ನು ಸಂಗ್ರಹಿಸುತ್ತಾರೆ. ಇಬ್ಬರಲ್ಲಿ ಯಾರೋ ಒಬ್ಬರು ಖಂಡಿತವಾಗಿಯೂ ನ್ಯಾಯಾಲಯದಲ್ಲಿ ಸತ್ಯವನ್ನು ಮರೆ ಮಾಡುತ್ತಾರೆ ಮತ್ತು ತಮ್ಮದು ತಪ್ಪಲ್ಲ ಎಂದು ವಾದಿಸುತ್ತಾರೆ. ಒಬ್ಬ ಪ್ರಾಮಾಣಿಕನಾದ ವಕೀಲ, ಸಾಮಾನ್ಯವಾಗಿ 'ತನಗೆ ಹಣ ನೀಡುವ ತನ್ನ ಕಕ್ಷಿದಾರನಿಗೆ ಪ್ರಾಮಾಣಿಕವಾಗಿರ ಬೇಕೇ ಅಥವಾ ನ್ಯಾಯಕ್ಕೆ ಬದ್ಧನಾಗಿರಬೇಕೇ' ಎಂಬ ಸಂದಿಗ್ಧತೆಯನ್ನು ಎದುರಿಸುತ್ತಾನೆ.

ದಕ್ಷಿಣ ಆಫ್ರಿಕಾದಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಗಾಂಧಿಯವರು ಕೂಡ ಇಂತಹ ಸಂಧಿಗ್ಧತೆಯನ್ನು ಎದುರಿಸಿದರು. ಅದು ಒಂದು ಕಂಪನಿಯ ಖಾತೆಗಳಿಗೆ ಸಂಬಂಧಿಸಿದ ಪ್ರಕರಣವಾಗಿತ್ತು. ಗಾಂಧಿಯವರ ಕಕ್ಷಿದಾರರು ಒದಗಿಸಿದ ಖಾತೆಗಳನ್ನು ವಿರೋಧ ಪಕ್ಷದವರು ತನಿಖೆ ಮಾಡಿದರು. ಹಾಗೆ ತನಿಖೆ ಮಾಡುವಾಗ, ವಿರೋಧ ಪಕ್ಷದವರು ಗಾಂಧಿಯವರ ಕಕ್ಷಿದಾರರಿಗೆ ಅನುಕೂಲವಾಗುವಂತಹ ಒಂದು ತಪ್ಪನ್ನು ಮಾಡಿಬಿಟ್ಟರು. ಸದ್ದಿಲ್ಲದೆ ಅದನ್ನು ಸುಮ್ಮನೆ ನಿರ್ಲಕ್ಷಿಸಿದ್ದರೆ, ಆ ಪ್ರಕರಣವು ಗಾಂಧಿಯವರ ಕಕ್ಷಿದಾರರ ಪರವಾಗಿಯೇ ಕೊನೆಗೊಳ್ಳುತ್ತಿತ್ತು. ಆದರೆ ಗಾಂಧಿಯವರು ಎದುರು ಪಕ್ಷದವರ ತಪ್ಪನ್ನು ಅವರಿಗೆ ಎತ್ತಿ ತೋರಿಸಿದರೆ, ತನ್ನ ಕಕ್ಷಿದಾರನಿಗೆ ಸೋಲಾಗುವ ಅಪಾಯವಿತ್ತು.

ಅಂತಹ ಪರಿಸ್ಥಿತಿಯಲ್ಲೂ ಕೂಡ ಗಾಂಧಿಯವರಿಗೆ ಇದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಾಗಲೀ ಗೊಂದಲವಾಗಲೀ ಇರಲಿಲ್ಲ. ಎದುರಾಳಿ ಪಕ್ಷದವರು ಮಾಡಿದ ತಪ್ಪುಗಳನ್ನು ಅವರು ನ್ಯಾಯಾಲಯದಲ್ಲಿ ಎತ್ತಿ ತೋರಿಸಿದಾಗ, ನ್ಯಾಯಾಧೀಶರು ಗಾಂಧಿಯವರ ಬಗ್ಗೆ ಅಪಾರ ಗೌರವವನ್ನು ಬೆಳೆಸಿಕೊಂಡರು. ಎದುರಾಳಿ ಪಕ್ಷದವರು ಸಹ

ಗಾಂಧಿಯವರ ಪ್ರಾಮಾಣಿಕತೆಯನ್ನು ಬಹಳವಾಗಿ ಮೆಚ್ಚಿಕೊಂಡರು. ನಿರ್ದಿಷ್ಟ ಪ್ರಕರಣದಲ್ಲಿ ಅವರ ಕಕ್ಷಿದಾರರು ಅಸಮಾಧಾನಗೊಂಡಿದ್ದರೂ, ಅದರ ನಂತರದ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಗಾಂಧಿಯವರ ಪ್ರಾಮಾಣಿಕತೆಯ ಮೇಲಿನ ನಂಬಿಕೆ ತುಂಬ ಬಲವಾಗಿ ಬೆಳೆಯಿತು.

ಸದ್ಗುಣಗಳು ಅಲ್ಪಾವಧಿಯಲ್ಲಿ ಪ್ರಯೋಜನಕಾರಿಗಳಲ್ಲದಿರಬಹುದು. ಆದರೆ ದೀರ್ಘಾವಧಿಯಲ್ಲಿ ನೋಡಿದಾಗ ಅವು ಮಾನವ ಜೀವನವನ್ನು ಅರ್ಥಪೂರ್ಣ ಮತ್ತು ಸಂತೋಷದಾಯಕವಾಗಿಸುತ್ತವೆ. ಗಾಂಧಿಯವರ ಸದ್ಗುಣಗಳು ಲಕ್ಷಾಂತರ ಭಾರತೀಯರನ್ನು ಆಕರ್ಷಿಸಿವೆ. ಆಡುವ ಮಾತು ಮತ್ತು ಜೀವನದ ನಡುವೆ ಯಾವುದೇ ವ್ಯತ್ಯಾಸವಿಲ್ಲದೆ ಬದುಕಿದ ವ್ಯಕ್ತಿಯ ಜೀವನವು ಶತಮಾನಗಳ ನಂತರವೂ ಜೀವಂತವಾಗಿದೆ.

ಗಾಂಧೀಜಿಯವರು ಅಹಿಂಸೆಯ ಹೋರಾಟವನ್ನು ನಡೆಸಿದವರು ಮತ್ತು ನಮ್ಮ ಸಾಂಪ್ರದಾಯಿಕ ಉಡುಗೆಯಾದ ಪಂಚೆಯನ್ನು ತಮ್ಮ ಜೀವನದುದ್ದಕ್ಕೂ ಧರಿಸುತ್ತಿದ್ದರು ಎಂಬ ಕಾರಣದಿಂದಾಗಿಯೇ ಅವರತ್ತ ಆಕರ್ಷಿತನಾಗಿ ನಾನು ಆಗಾಗ ಅವರ ಬಗ್ಗೆ ಓದಲು ಪ್ರಾರಂಭಿಸಿದೆ. ಅವರ ಜೀವನ ಶೈಲಿಯು ನನ್ನಲ್ಲಿ ದೊಡ್ಡ ಬದಲಾವಣೆಯನ್ನು ಉಂಟು ಮಾಡುವ ಶಕ್ತಿಯನ್ನು ಹೊಂದಿತ್ತು. 'ನಮ್ಮ ಸಂಸ್ಕೃತಿಯ ಸಂಕೇತವಾದ ಧೋತಿಯನ್ನು ನಾನು ಎಲ್ಲಿಗೆ ಹೋದರೂ ಧರಿಸುತ್ತೇನೆ ಮತ್ತು ಇತರರು ಕೂಡ ಧರಿಸುವಂತೆ ಮಾಡುತ್ತೇನೆ' ಎಂದು ನಾನು ಪ್ರತಿಜ್ಞೆಮಾಡಿದೆ. ನನ್ನ ಕುಟುಂಬ ಮತ್ತು ಸಂಬಂಧಿಕರು ಪ್ಯಾಂಟ್ ಧರಿಸಲು ಒತ್ತಾಯಿಸಿದಾಗಲೂ, ನಾನು ಪಂಚೆಯನ್ನೇ ಧರಿಸುತ್ತಿದ್ದೆ. ಗಾಂಧೀಜಿಯವರ ಜೀವನ ಶೈಲಿ ಮತ್ತು ಅವರ ಸದ್ಗುಣಗಳು ನನಗೆ ಈ ದೃಢಸಂಕಲ್ಪವನ್ನು ಸುಲಭವಾಗಿ ನೀಡಿದವು.

ಪ್ರಾಮಾಣಿಕವಾಗಿರುವುದರಿಂದ ಕೆಲವೊಮ್ಮೆ ನಷ್ಟವಾಗಬಹುದು. ಆದರೂ ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಪ್ರಾಮಾಣಿಕವಾಗಿ ನಡೆದುಕೊಂಡಾಗ ಸಿಗುವ ಸಂತೋಷವನ್ನು ಯಾವುದೂ ನೀಡಲು ಸಾಧ್ಯವಿಲ್ಲ. ರಾಮರಾಜ್ ಕಾಟನ್ ಕಂಪನಿ ಯಾವಾಗಲೂ ಸಂತೋಷದಿಂದ ಸರ್ಕಾರಕ್ಕೆ ತೆರಿಗೆ ಪಾವತಿಸುತ್ತದೆ. 'ನೀವು ಹೀಗೆ ಮಾಡಿದರೆ ನಿಮ್ಮ ತೆರಿಗೆಯನ್ನು ಕಡಿಮೆ ಮಾಡಿಕೊಳ್ಳಬಹುದು... ಹಾಗೆ ಮಾಡಿದರೆ ನೀವು ತೆರಿಗೆ ಪಾವತಿಸುವುದನ್ನು ತಪ್ಪಿಸಬಹುದು' ಎಂದು ಹಲವರು ಸಲಹೆ ನೀಡುತ್ತಿರುತ್ತಾರೆ. ಸರ್ಕಾರಕ್ಕೆ ತೆರಿಗೆ ತಪ್ಪಿಸಿ, ಹಣವನ್ನು ಉಳಿಸಿ, ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯುವ ಬದಲು, ಸರ್ಕಾರಕ್ಕೆ ಸಲ್ಲಬೇಕಾದ ತೆರಿಗೆಯನ್ನು ಸರಿಯಾಗಿ ಪಾವತಿಸುವುದು ಮತ್ತು



ಶಾಂತಿಯುತವಾಗಿ ಮಲಗುವುದು ನೆಮ್ಮದಿಯನ್ನು ನೀಡುತ್ತದೆ.

ಗ್ರಾಹಕರೊಂದಿಗೆ ಅಪ್ರಾಮಾಣಿಕವಾಗಿ ನಡೆದುಕೊಳ್ಳುವುದು ಮತ್ತು ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಉತ್ಪಾದಿಸುವುದು ರಾಮರಾಜ್ ಕಾಟನ್ ಕಂಪನಿಯ ಸ್ಥಿರ ಬೆಳವಣಿಗೆಗೆ ಅಡಿಪಾಯವಾಗಿದೆ. ಒಬ್ಬ ವ್ಯಕ್ತಿಯಲ್ಲಿರುವ ಸದ್ಗುಣಗಳು ಆತನೊಂದಿಗೇ ಕೊನೆಗೊಳ್ಳುವುದಿಲ್ಲ. ಬದಲಾಗಿ ಅವನ ಸುತ್ತಲಿನ ಎಲ್ಲರಿಗೂ ಅವು ಮಾರ್ಗದರ್ಶನ ನೀಡುತ್ತವೆ. ಮಕ್ಕಳು ತಮ್ಮನ್ನೂ ಉತ್ತಮಪಡಿಸಿಕೊಂಡು, ತಮ್ಮ ಸುತ್ತಮುತ್ತಲೂ ಇರುವವರನ್ನೂ ಉತ್ತಮ ಹಾದಿಯಲ್ಲಿ ಮುನ್ನಡೆಸುವಂತೆ ಸದ್ಗುಣಗಳನ್ನು ಬೆಳೆಸಿಕೊಂಡು, ಅವರು ಬೆಳೆಯಲು ಸಹಾಯ ಮಾಡುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯವಾಗಿದೆ.

The Culturepreneur

ಗುರುಕೃಪೆ
ಬಾಳ್ಗೆ ಭೂಮಂಡಲ –ಬಾಳ್ಗೆ ಸಮೃದ್ಧಿಯೊಂದಿಗೆ
ಕೆ.ಆರ್. ನಾಗರಾಜನ್
ಸಂಸ್ಥಾಪಕರು – ರಾಮ್‌ರಾಜ್ ಕಾಟನ್

ಸದ್ಗುಣಗಳು ನೀಡುತ್ತವೆ ಒಳ್ಳೆಯ ಫಲಗಳನ್ನು!

ಗುಡುಗು, ಮಿಂಚುಗಳೊಂದಿಗೆ ಆಕಾಶವನ್ನೇ ಬೆದರಿಸುತ್ತಾ ಮಳೆ ಸುರಿಯುತ್ತಿದ್ದ ಒಂದು ನಡುರಾತ್ರಿಯಲ್ಲಿ, 135 ವರ್ಷಗಳ ಹಿಂದೆ ಅಮೆರಿಕದ ಒಂದು ಸಣ್ಣ ಪಟ್ಟಣದಲ್ಲಿ, ವೃದ್ಧ ದಂಪತಿಗಳು ಚಳಿಯಲ್ಲಿ ನಡುಗುತ್ತಾ ಹೋಟೆಲ್‌ಗೆ ಪ್ರವೇಶಿಸಿದರು. ಅವರು ಬಂದ ಕೋಚ್ ಗಾಡಿಯಲ್ಲಿ ಹೊರಗೆ ನಿಂತಿತ್ತು. ಬರುವಾಗಲೇ ಅವರು ಅರ್ಧ ನೆಂದು ಹೋಗಿದ್ದರು. ನೋಡಲು ಅವರು ಅನುಕೂಲಸ್ಥರಂತೆಯೇ ಕಾಣುತ್ತಿದ್ದರು.

'ನಾವು ದೂರದ ಊರಿನಿಂದ ಬರುತ್ತಿದ್ದೇವೆ. ನಾಳೆ ಬೆಳಿಗ್ಗೆಯ ತನಕ ಉಳಿದುಕೊಳ್ಳಲು ನಮಗೆ ಇಲ್ಲಿ ಕೊಠಡಿ ದೊರಕುತ್ತದೆಯೇ?' ಎಂದು ಅವರು ಮ್ಯಾನೇಜರ್ ಬಳಿ ಕೇಳಿದರು. ಸ್ವಾಗತ ಕೋಣೆಯಲ್ಲಿದ್ದ ಹೋಟೆಲ್ ಮ್ಯಾನೇಜರ್ ಆತಂಕದಿಂದಲೇ, "ಕ್ಷಮಿಸಿ... ಎಲ್ಲಾ ಕೊಠಡಿಗಳೂ ಪೂರ್ತಿಯಾಗಿವೆ. ಯಾವುದೂ ಖಾಲಿ ಇಲ್ಲ" ಎಂದು ಹೇಳಿದ.

ಅವರು ನಿರಾಶೆಯಿಂದ ಹಿಂದಿರುಗುವಾಗ, ಮ್ಯಾನೇಜರ್ ಅವರನ್ನು ಕರೆದು ಮೆಲುದನಿಯಲ್ಲಿ ಹೇಳಿದ: "ಸರ್! ನಿಮ್ಮನ್ನು ವಾಪಸ್ ಕಳುಹಿಸಲು ನನಗೆ ವಿಷಾದವಾಗುತ್ತಿದೆ. ಈ ಹೋಟೆಲ್‌ನವರು ನಾನು ಉಳಿದುಕೊಳ್ಳಲು ಇಲ್ಲಿ ಒಂದು ಕೊಠಡಿ ನೀಡಿದ್ದಾರೆ. ಆದರೆ ಅದು ನೀವು ನಿರೀಕ್ಷಿಸುವಷ್ಟು ಆರಾಮದಾಯಕವಾಗಿಲ್ಲ. ನಿಮಗೆ ಒಪ್ಪಿಗೆಯಿದ್ದರೆ ಹೇಳಿ ಪರವಾಗಿಲ್ಲ. ನಾನು ಅದನ್ನು ಈಗಲೇ ಸಿದ್ಧಪಡಿಸುತ್ತೇನೆ. ನೀವು ಅದರಲ್ಲಿ ಇರುತ್ತೀರಾ?" ಎಂದು ಕೇಳಿದ.

ದಂಪತಿಗಳು ಹಿಂಜರಿದರು. ಮ್ಯಾನೇಜರ್ ಮತ್ತೆ ಹೇಳಿದ: "ಈ ಮಧ್ಯರಾತ್ರಿ ಮಳೆಗಾಲದಲ್ಲಿ ನಿಮಗೆ ಈ ಊರಿನಲ್ಲಿ ಕೊಠಡಿ ಸಿಗುವುದು ಕಷ್ಟ. ಪಟ್ಟಣದಲ್ಲಿ ಒಂದು ಸಮ್ಮೇಳನ ಬೇರೆ ನಡೆಯುತ್ತಿದೆ. ಆದಕ್ಕಾಗಿ ಎಲ್ಲಾ ಹೋಟೆಲ್‌ಗಳೂ ಮುಂಗಡವಾಗಿ ಬುಕ್ ಆಗಿವೆ. ಇದಕ್ಕಿಂತ ಉತ್ತಮವಾದ ಸ್ಥಳ ನಿಮಗೆ ಸಿಗುವ ಸಾಧ್ಯತೆ ಇಲ್ಲ".

"ಸರಿ, ನಿಮ್ಮ ಕೋಣೆಯನ್ನು ನಮಗೆ ನೀಡಿದ ನಂತರ ನೀವು ಎಲ್ಲಿ ಉಳಿಯುತ್ತೀರಿ?" ಎಂದು ವೃದ್ಧ ಕೇಳಿದ. "ನಾನು ಈ ಸ್ವಾಗತ ಕೋಣೆಯಲ್ಲಿರುವ ಈ ಸೋಫಾದಲ್ಲಿಯೇ ಮಲಗುತ್ತೇನೆ" ಎಂದು ಮ್ಯಾನೇಜರ್ ಹೇಳಿ, ಅವರಿಗಾಗಿ ತನ್ನ ಕೋಣೆಯನ್ನು ಆತುರಾತುರವಾಗಿ ಸ್ವಚ್ಛಗೊಳಿಸಿದ. ಮ್ಯಾನೇಜರ್ ಅಲ್ಲಿನ ಸಿಬ್ಬಂದಿಯೊಂದಿಗೆ ಸ್ನೇಹಪರ ರೀತಿಯಲ್ಲಿ ನಡೆದುಕೊಳ್ಳುವುದನ್ನು ಕೂಡ ವೃದ್ಧ ಗಮನಿಸಿದ.

ಮರುದಿನ ಅಲ್ಲಿಂದ ಹೊರಡುವ ಮುನ್ನ ವೃದ್ಧ, ಆ ಮ್ಯಾನೇಜರ್‌ನನ್ನು ಕರೆದು, 'ನೀವು ಈ ದೇಶದಲ್ಲೇ ಅತ್ಯುತ್ತುಮವಾದ ಹೋಟೆಲ್ ಅನ್ನು ನಿರ್ವಹಣೆ ಮಾಡಬೇಕಾದ ಸಾಮರ್ಥ್ಯವನ್ನು ಹೊಂದಿದ್ದೀರಿ. ಒಂದು ದಿನ ನಾನು ಅಂತಹ ಒಂದು ಹೋಟೆಲ್ ಅನ್ನು ನಿರ್ಮಿಸುತ್ತೇನೆ' ಎಂದು ಹೇಳಿದ. ಮ್ಯಾನೇಜರ್ ಸುಮ್ಮನೆ ಮುಗುಳ್ನಕ್ಕು ಅವರನ್ನು ಕಳಿಸಿಕೊಟ್ಟ. ಕೆಲವು ದಿನಗಳ ನಂತರ ಮ್ಯಾನೇಜರ್‌ಗೆ ಈ ಘಟನೆ ಸಂಪೂರ್ಣ ಮರೆತೇ ಹೋಯಿತು.

ಎರಡು ವರ್ಷಗಳ ನಂತರ, ಮ್ಯಾನೇಜರ್‌ಗೆ ಒಂದು ಪತ್ರ ಬಂದಿತು. ಅದನ್ನು ಆ ವೃದ್ಧ ಕಳುಹಿಸಿದ್ದ. ಪತ್ರದ ಜೊತೆಗೆ ನ್ಯೂಯಾರ್ಕ್‌ಗೆ ಹೋಗುವ ಟಿಕೆಟ್ ಕೂಡ ಲಗತ್ತಿಸಲಾಗಿತ್ತು. ಮುದುಕ ತಕ್ಷಣ ಹೊರಟು ಬರುವಂತೆ ಬರೆದಿದ್ದ.

ಮ್ಯಾನೇಜರ್ ನ್ಯೂಯಾರ್ಕ್‌ಗೆ ಬಂದಾಗ, ಆ ವೃದ್ಧನ ಸಿಬ್ಬಂದಿಗಳು ರೈಲು ನಿಲ್ದಾಣದಲ್ಲಿ ಅವನನ್ನು ಸ್ವಾಗತಿಸಿ ಕರೆದುಕೊಂಡು ಹೋದರು. ನ್ಯೂಯಾರ್ಕ್ ನಗರದ ಹೃದಯಭಾಗದಲ್ಲಿ 12 ಅಂತಸ್ತುಗಳಲ್ಲಿ, ಕೆಂಪು ಇಟ್ಟಿಗೆಯಲ್ಲಿ ನಿರ್ಮಿಸಲಾಗಿದ್ದ ಅರಮನೆಯಂತಹ ಭವ್ಯವಾದ 'ವಾಲ್ಡೋರ್ಫ್–ಆಸ್ಟೋರಿಯಾ ಹೋಟೆಲ್' ಅನ್ನು ವೃದ್ಧ ಆ ಮ್ಯಾನೇಜರ್‌ಗೆ ತೋರಿಸಿ ಹೇಳಿದ: "ನಿಮ್ಮನ್ನು ಮ್ಯಾನೇಜರ್ ಆಗಿ ಮಾಡುವುದಕ್ಕಾಗಿಯೇ ನಾನು ಈ ಹೋಟೆಲ್ ಅನ್ನು ನಿರ್ಮಿಸಿದೆ. ಇದು ಈಗ ದೇಶದ ಅತಿದೊಡ್ಡ ಹೋಟೆಲ್" ಎಂದು ಹೇಳಿ ಅವನ ಕೈಗೆ ನೇಮಕಾತಿ ಪತ್ರವನ್ನು ನೀಡಿದ. ಮ್ಯಾನೇಜರ್ ಇದನ್ನೆಲ್ಲ ನಂಬಲು ಸಾಧ್ಯವಿಲ್ಲದೆ ದಿಗ್ಭ್ರಾಂತನಾದ. ಮ್ಯಾನೇಜರ್ ಇಂತಹ ಪ್ರತಿಫಲವನ್ನು ನಿರೀಕ್ಷಿಸಿ ಅಂದು ರಾತ್ರಿ ಸಹಾಯ ಮಾಡಿರಲಿಲ್ಲ. ಆದರೂ ಅವನ ಸಹಾಯಕ್ಕೆ ತಕ್ಕ ಫಲ ಅವನಿಗೆ ಸಿಕ್ಕಿತ್ತು!

ಒಳ್ಳೆಯ ಗುಣಗಳು ಫಲ ನೀಡುವುದು ಹೀಗೆಯೇ! ನೀವು ಎಷ್ಟೇ ಕಾರ್ಯನಿರತರಾಗಿದ್ದರೂ, ಜೀವನದಲ್ಲಿ ಎಷ್ಟೇ ಸಮಸ್ಯೆಗಳಿದ್ದರೂ, ನೀವು ಯಾವುದೇ ರೀತಿಯ ಸ್ಥಳದಲ್ಲಿದ್ದರೂ, ಒಳ್ಳೆಯ ಗುಣಗಳನ್ನು ಪ್ರದರ್ಶಿಸುವುದು ನಿಮ್ಮ ಸ್ವಭಾವವಾಗಿರಲಿ. ನೀವು ಅದನ್ನು ಹೇಗೆಲ್ಲ ಮಾಡಬಹುದು?

- ಇತರರು ನಿಮ್ಮನ್ನು ಹೇಗೆ ನಡೆಸಿಕೊಳ್ಳಬೇಕೆಂದು ನೀವು ಬಯಸುತ್ತೀರೋ ಹಾಗೆಯೇ ನೀವು ಇತರರನ್ನೂ ನಡೆಸಿಕೊಳ್ಳಿ.
- "ನಾನು ಒಬ್ಬ ಮಹಾನ್ ವ್ಯಕ್ತಿ" ಎಂದು ಹೇಳುವ ಮೂಲಕ ನಿಮ್ಮ ಶ್ರೇಷ್ಠತೆಯನ್ನು ಪ್ರದರ್ಶಿಸುವುದಕ್ಕಾಗಿ, ಇತರರನ್ನು ಕೀಳಾಗಿ ನೋಡಬೇಡಿ. ಒಂದು ಕೆಲಸದಲ್ಲಿ ಪ್ರತಿಯೊಬ್ಬರ ಕೊಡುಗೆಯನ್ನೂ ಎತ್ತಿ ತೋರಿಸಿ ಅವರಿಗೆ ಧನ್ಯವಾದ ಹೇಳಲು ಮರೆಯಬೇಡಿ.
- ನಿಮ್ಮ ಕುಟುಂಬ, ಸಂಬಂಧಗಳು, ಸ್ನೇಹ ಅಥವಾ ಕೆಲಸದ ಸ್ಥಳದಲ್ಲಿ ಎಲ್ಲದರ ಬಗ್ಗೆಯೂ ಮುಕ್ತವಾಗಿರಿ. ನಿಮ್ಮ ನಿರೀಕ್ಷೆಗಳ ಬಗ್ಗೆ ನೀವು ಸ್ಪಷ್ಟವಾಗಿದ್ದರೆ, ಯಾವುದೇ ಗೊಂದಲ ಇರುವುದಿಲ್ಲ.
- ಇತರರಲ್ಲಿ ತಪ್ಪುಗಳನ್ನು ಹುಡುಕಿ ಟೀಕಿಸುವುದರಿಂದ ಅಥವಾ ಕಟುವಾಗಿ ವರ್ತಿಸುವುದರಿಂದ ಒಳ್ಳೆಯ ಫಲಿತಾಂಶ ಸಿಗುವುದಿಲ್ಲ. ಅವರು ಅದನ್ನು ಹೇಗೆ ಸರಿಯಾಗಿ ಮಾಡಬಹುದಿತ್ತು ಎಂಬುದನ್ನು ಎತ್ತಿ ತೋರಿಸಿ.
- ನಿಮ್ಮ ಸಂಬಂಧಗಳಲ್ಲಿ ಎಲ್ಲರನ್ನೂ ಗೌರವಿಸಿ. ಅಗತ್ಯವಿದ್ದಾಗ ಅವರ ಸಾಮರ್ಥ್ಯಗಳನ್ನು ಪ್ರಶಂಸಿಸಿ. ಅಗತ್ಯವಿರುವ ಜನರಿಗೆ ನಿಮ್ಮ ಸಮಯ, ಹಣ, ಪ್ರೀತಿ, ಮೆಚ್ಚುಗೆ, ಪ್ರೋತ್ಸಾಹ ಮತ್ತು ಸಲಹೆಯನ್ನು ನೀಡಿ.
- ಪ್ರತಿದಿನವನ್ನೂ ನಗುವಿನೊಂದಿಗೆ ಎದುರಿಸಿ. ಎಲ್ಲರನ್ನೂ ನಗುವಿನೊಂದಿಗೆ ಸಮೀಪಿಸಿ. ನಗು ನೀವು ಎಲ್ಲರಿಗೂ ನೀಡುವ ಉಡುಗೊರೆ. ಪ್ರೀತಿಯಿಂದ ನಗುತ್ತಿರಿ. ಯಾರನ್ನೂ ನೋಡಿ ಅಪಹಾಸ್ಯ ಮಾಡಿ ನಗಬೇಡಿ ಮತ್ತು ಅವರನ್ನು ಗೇಲಿ ಮಾಡಬೇಡಿ.
- ನೀವು ಸಮಸ್ಯೆ ಅಥವಾ ಹಿನ್ನಡೆಯನ್ನು ಎದುರಿಸಿದಾಗ, "ನಾನು ಯಾವುದರಲ್ಲೂ ನಿಷ್ಣಾತನಲ್ಲ" ಎಂದು ನಿಮ್ಮ ಬಗ್ಗೆ ನೀವೇ ಕೀಳರಿಮೆಯನ್ನು ಹೊಂದಬೇಡಿ. ನಿಮ್ಮ ದೌರ್ಬಲ್ಯಗಳನ್ನು ಅರಿತುಕೊಳ್ಳಿ ಮತ್ತು ಅವುಗಳನ್ನು ಸರಿಪಡಿಸಿ. ಅದು ನಿಮ್ಮ ಜೀವನದ ಮೇಲೆ ಪರಿಣಾಮ ಬೀರಲು ಬಿಡಬೇಡಿ.

- ನಿಮ್ಮ ಯೋಗ್ಯತೆ ನಿಮಗೆ ತಿಳಿಯದಿದ್ದರೆ, ಬೇರೆ ಯಾರಿಗೂ ಅದು ತಿಳಿಯುವುದಿಲ್ಲ. ಆದ್ದರಿಂದ ನಿಮ್ಮ ಕೆಲಸವನ್ನು ಗೌರವಿಸಿ. ನಿಮ್ಮ ಬಗ್ಗೆ ಮತ್ತು ಇತರರ ಬಗ್ಗೆ ದಯೆಯಿಂದಿರಿ.
- ಯಾವಾಗಲೂ ಏನಾದರೂ ಉಪಯುಕ್ತವಾದದ್ದನ್ನು ಮಾಡಿ. ಅದು ಅಂತಿಮವಾಗಿ ನಿಮ್ಮ ಗುರುತಾಗುತ್ತದೆ. ನಿಮ್ಮ ಕಾರ್ಯಗಳಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಇರಲಿ.
- ಕೆಲವರು ನಿಮಗೆ ಅನ್ಯಾಯ ಮಾಡಬಹುದು. ಅವರು ನಿಮ್ಮನ್ನು ಅನಗತ್ಯ ತೊಂದರೆಗೆ ಸಿಲುಕಿಸಬಹುದು. "ನನಗೇ ಯಾಕೆ ಹೀಗೆಲ್ಲ ಆಗುತ್ತಿದೆ?" ಎಂದು ಯೋಚಿಸುತ್ತಾ ದುಃಖಿಸಬೇಡಿ. ನೀರಿನಲ್ಲಿ ಒದ್ದಾಡುತ್ತಿರುವವನು ಮೊದಲು ದಡವನ್ನು ತಲುಪಬೇಕು. ಆ ಪರಿಸ್ಥಿತಿಯಿಂದ ಮೊದಲು ಚೇತರಿಸಿಕೊಳ್ಳಿ.
- ನೀವು ತಪ್ಪು ಮಾಡಿದ್ದರೆ, ಅದಕ್ಕಾಗಿ ಇತರರನ್ನು ದೂಷಿಸಬೇಡಿ ಅಥವಾ ಆಪಾದನೆ ಮಾಡಬೇಡಿ. ನಿಮ್ಮಿಂದ ನಡೆದ ತಪ್ಪಿಗಾಗಿ ಕ್ಷಮೆ ಯಾಚಿಸಿ ಮತ್ತು ಅದನ್ನು ಸರಿಪಡಿಸಲು ಮಾರ್ಗಗಳನ್ನು ಕಂಡುಕೊಳ್ಳಿ.
- ಆರೋಗ್ಯಕರ ಟೀಕೆಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ. ಅವು ನಿಮಗೆ ಹೊಸ ಹಾದಿಯನ್ನು ತೋರಿಸುವ ಕ್ಷಣಗಳಾಗಿರಬಹುದು.
- ಯಾರಾದರೂ ನಿಮ್ಮನ್ನು ಹೊಗಳಿದಾಗ ನಾಚಿಕೆಪಡಬೇಡಿ. ಅವು ನೀವು ಸರಿಯಾದ ಹಾದಿಯಲ್ಲಿದ್ದೀರಿ ಎಂಬುದರ ಸಂಕೇತಗಳಾಗಿರುತ್ತವೆ. ಅವುಗಳನ್ನು ಪೂರ್ಣ ಹೃದಯದಿಂದ ಸ್ವೀಕರಿಸಿ. ಅವು ನಿಮ್ಮ ಉತ್ಸಾಹ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ●

ಎಲ್ಲೆಗಳು ವಿಸ್ತರಿಸಲಿ!

ಒಬ್ಬ ಯುವಕ ಮೋಜಿಗಾಗಿ ನದಿಯಲ್ಲಿ ಮೀನು ಹಿಡಿಯಲು ಹೋದ. ದೊಡ್ಡ ಮೀನುಗಳು ತನ್ನ ಬಲೆಯಲ್ಲಿ ಸಿಕ್ಕಿದರೆ, ಅವನು ತಕ್ಷಣ ಅವುಗಳನ್ನು ಮತ್ತೆ ನದಿಗೆ ಎಸೆಯುತ್ತಿದ್ದ. ಅವನು ಸಣ್ಣ ಮೀನುಗಳನ್ನು ಮಾತ್ರ ಹಿಡಿದು ಬುಟ್ಟಿಯಲ್ಲಿ ಹಾಕುತ್ತಿದ್ದ. ಇದನ್ನು ನೋಡುತ್ತಿದ್ದ ಮೀನುಗಾರನೊಬ್ಬ "ನೀನು ಹೀಗೆ ಏಕೆ ಮಾಡುತ್ತಿರುವೆ?" ಎಂದು ಕೇಳಿದ. "ಏಕೆಂದರೆ ನನ್ನ ಮನೆಯಲ್ಲಿ ಮೀನು ಹುರಿಯಲು ಇರುವ ತವಾ ಚಿಕ್ಕದಾಗಿದೆ. ನಾನು ಅದರಲ್ಲಿ ದೊಡ್ಡ ಮೀನುಗಳನ್ನು ಹುರಿಯಲು ಸಾಧ್ಯವಿಲ್ಲ" ಎಂದು ಯುವಕ ಹೇಳಿದ. "ಮೀನುಗಾರ 'ಮೀನನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ಹುರಿಯಬಹುದಲ್ಲವೇ?' ಎಂದು ಅವನು ಹೇಳಿದಾಗ, ಯುವಕನಿಗೆ ಏನೆಂದು ಉತ್ತರಿಸಬೇಕೆಂದು ತಿಳಿಯದೆ ಕಕ್ಕಾಬಿಕ್ಕಿಯಾಗಿ ಹೋದ!

ಅನೇಕ ಜನರು ಹೀಗೆಯೇ... ಅವರು ಸಣ್ಣ ಗುರಿಗಳ ಬಗ್ಗೆ ಮಾತ್ರ ಯೋಚಿಸುತ್ತಾರೆ. ಅವರು ಸಣ್ಣ ಸಣ್ಣ ಕನಸುಗಳನ್ನು ಮಾತ್ರವೇ ಕಾಣುತ್ತಾರೆ. ಅದಕ್ಕಾಗಿಯೇ ದೊಡ್ಡ ಮೀನುಗಳನ್ನು ಅವರು ಹಿಡಿಯಲು ಬಯಸುವುದಿಲ್ಲ. ನಿಮ್ಮ ಮಹತ್ವಾಕಾಂಕ್ಷೆಗಳ ಎಲ್ಲೆಗಳು ವಿಸ್ತರಿಸಲಿ.

ಪರಿಪೂರ್ಣತೆಯೇ ಗುರಿಯಾಗಿರಲಿ!

ಅಮೆರಿಕದ ಕಂಪ್ಯೂಟರ್ ಕಂಪನಿಯೊಂದು ತನಗೆ ಬೇಕಾದ ಬಿಡಿಭಾಗಗಳನ್ನು ತಯಾರಿಸುವ ಕೆಲಸವನ್ನು ಜಪಾನಿನ ಒಂದು ಕಂಪನಿಗೆ ವಹಿಸಿತು. ಬಿಡಿಭಾಗಗಳನ್ನು ತಯಾರಿಸುವ ಕಂಪನಿಗಳು ಎಷ್ಟೇ ಗುಣಮಟ್ಟದ ನಿಯಂತ್ರಣವನ್ನು ಹೊಂದಿದ್ದರೂ, ಕೆಲವು ಸಲ ತಪ್ಪಾಗಿ ನಿರ್ಮಾಣವಾಗಿ ಬಿಡುತ್ತವೆ. ಆ ವಿಷಯ ಈ ಕಂಪನಿಗೂ ಇದು ತಿಳಿದಿತ್ತು. ಆದ್ದರಿಂದ, ಹತ್ತು ಸಾವಿರ ಬಿಡಿ ಭಾಗಗಳಲ್ಲಿ ಮೂರು ಮಾತ್ರ ದೋಷಯುಕ್ತವಾಗಿರಬಹುದು ಎಂಬ ಷರತ್ತನ್ನು ಅಮೇರಿಕನ್ ಕಂಪನಿ ವಿಧಿಸಿತು.

ಕೆಲವೇ ದಿನಗಳಲ್ಲಿ, ಜಪಾನ್‌ನಿಂದ ಬಿಡಿಭಾಗಗಳು ಇಲ್ಲಿಗೆ ಬಂದವು. ಎಲ್ಲವೂ ಪರಿಪೂರ್ಣವಾಗಿದ್ದವು. ಅದರ ಜೊತೆಗೆ ಒಂದು ಪತ್ರವೂ ಇತ್ತು. ನಿಮ್ಮ ವ್ಯವಹಾರ ನಿಯಮಗಳು ನಮಗೆ ಅರ್ಥವಾಗುತ್ತಿಲ್ಲ. ನಾವು ಹತ್ತು ಸಾವಿರ ಬಿಡಿಭಾಗಗಳನ್ನು ಸಂಪೂರ್ಣವಾಗಿ ತಯಾರಿಸಿದ್ದೇವೆ. ಆದರೆ ನೀವು ಪ್ರತ್ಯೇಕವಾಗಿ ಮೂರು ದೋಷಪೂರಿತವಾದ ಬಿಡಿಭಾಗಗಳನ್ನು ಏಕೆ ಕೇಳಿದ್ದೀರಿ ಎಂದು ನಮಗೆ ತಿಳಿಯುತ್ತಿಲ್ಲ. ನಾವು ಅವುಗಳನ್ನು ಬಹಳ ಕಷ್ಟಪಟ್ಟು ತಯಾರಿಸಿದ್ದೇವೆ ಮತ್ತು ಪ್ರತ್ಯೇಕವಾಗಿ ಕಳುಹಿಸಿದ್ದೇವೆ. ಅವು ಬಳಕೆಗೆ ಯೋಗ್ಯವಾಗಿಲ್ಲ" ಎಂದು ಪತ್ರದಲ್ಲಿ ಬರೆಯಲಾಗಿತ್ತು. "ತಾವು ತಯಾರಿಸುವ ವಸ್ತುಗಳನ್ನು ಪರಿಪೂರ್ಣವಾಗಿ ತಯಾರಿಸಬೇಕು ಎನ್ನುವ ಗುರಿಯೊಂದಿಗೇ ಜೀವನವನ್ನು ನಡೆಸುವ ಜನರೂ ಇದ್ದಾರೆ" ಎಂದು ಅಮೆರಿಕ ಅರ್ಥ ಮಾಡಿಕೊಂಡ ಕ್ಷಣ ಅದು!



ಎಲ್ಲವೂ ಬದಲಾಗುತ್ತವೆ!

ಒಬ್ಬ ವ್ಯಾಪಾರಿ ಇದ್ದ. ಆ ವ್ಯಾಪಾರಿ ಸಮುದ್ರದಾಚೆಗಿನ ಅನೇಕ ದೇಶಗಳಿಗೆ ಸರಕುಗಳನ್ನು ತೆಗೆದುಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದ. ಅವನು ಬಹಳಷ್ಟು ಲಾಭ ಗಳಿಸುತ್ತಿದ್ದ. ಆದುದರಿಂದ ಅವನು ಐಷಾರಾಮಿಯಾಗಿ ಬದುಕುತ್ತಿದ್ದ. ಇದ್ದಕ್ಕಿದ್ದಂತೆ ಒಂದು ದಿನ, ಅವನ ಎರಡೂ ಹಡಗುಗಳೂ ಧ್ವಂಸಗೊಂಡು ಬಿರುಗಾಳಿಗೆ ಸಿಲುಕಿ ಮುಳುಗಿ ಹೋದವು. ಅವನು ಎಲ್ಲವನ್ನೂ ಕಳೆದುಕೊಂಡು ಬಹುತೇಕ ಬೀದಿಗೆ ಬಂದು ನಿಂತಿದ್ದ.

ಅವನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಅವನು ಒಬ್ಬ ಸಂತನನ್ನು ನೋಡಲು ಹೋದ. ಎಲ್ಲವನ್ನೂ ಕೇಳಿದ ನಂತರ ಸಂತ ಏನನ್ನೋ ಬರೆದು ಒಂದು ಲಕೋಟೆಯಲ್ಲಿ ಹಾಕಿ ಕೊಟ್ಟು "ಮನೆಗೆ ಹೋದ ಮೇಲೆ ಇದನ್ನು ತೆರೆದು ನೋಡು!" ಎಂದು ಹೇಳಿದ. ವ್ಯಾಪಾರಿ ಮನೆಗೆ ಬಂದು ಅದನ್ನು ಹೊರತೆಗೆದು ನೋಡಿದ. ಅದರಲ್ಲಿ 'ಇದು ಕೂಡ ಬದಲಾಗುತ್ತದೆ!' ಎಂದು ಬರೆದಿತ್ತು. ವ್ಯಾಪಾರಿ ಉತ್ಸಾಹದಿಂದ ಮತ್ತೆ ವ್ಯಾಪಾರವನ್ನಾರಂಭಿಸಿದ. ಅವನು ಸಾಲ ತೆಗೆದುಕೊಂಡು ವ್ಯವಹಾರದಲ್ಲಿ ಹೂಡಿಕೆ ಮಾಡಿದ. ಹಡಗುಗಳನ್ನು ಬಾಡಿಗೆಗೆ ಪಡೆದು ಮತ್ತೆ ವ್ಯಾಪಾರ ಮಾಡಲು ಪ್ರಾರಂಭಿಸಿದ. ಕೆಲವೇ ವರ್ಷಗಳಲ್ಲಿ ಅವನು ಮತ್ತೆ ದೇಶದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದ.

ಒಂದು ದಿನ, ಅವನು ಮತ್ತೆ ಆ ಸಂತನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿ, "ಇಂದು ನನ್ನ ಬಳಿ ಎಲ್ಲವೂ ಇವೆ. ನಿಮಗೇನು ಬೇಕು ಹೇಳಿ" ಎಂದು ಹೆಮ್ಮೆಯಿಂದ ಕೇಳಿದ. ಸಂತ ಮುಗುಳ್ನಗುತ್ತಾ, "ನಾನು ನಿನಗೆ ಏನೋ ಒಂದನ್ನು ಕೊಡಲು ಬಯಸುತ್ತೇನೆ" ಎಂದ. "ನನ್ನ ಬಳಿ ಈಗ ಎಲ್ಲವೂ ಇದೆ! ನೀವು ನನಗೆ ಏನು ಕೊಡುತ್ತೀರಿ?" ಎಂದ ವ್ಯಾಪಾರಿ. ಸಂತ ಅವನಿಗೆ ಮತ್ತೆ ಹಿಂದಿನಂತೆಯೇ ಒಂದು ಲಕೋಟೆಯನ್ನು ಕೊಟ್ಟು ಮನೆಗೆ ಹೋಗಿ ತೆರೆದು ನೋಡಲು ಹೇಳಿದ. ಅದರಲ್ಲಿಯೂ, ಹಿಂದಿನಂತೆಯೇ "ಇದು ಕೂಡ ಬದಲಾಗುತ್ತದೆ" ಎಂದು ಬರೆಯಲಾಗಿತ್ತು.

ಹಿಂದೆ ವ್ಯಾಪಾರಿಯನ್ನು ಪ್ರೋತ್ಸಾಹಿಸಿದ್ದ ಅದೇ ಮಾತುಗಳು ಈಗ ಅವನನ್ನು ಹೆದರಿಸಿದವು. "ಬದಲಾವಣೆಯೊಂದೇ ಸ್ಥಿರವಾದುದು" ಎಂಬ ಸತ್ಯ ಆಗ ಅವನಿಗೆ ಅರ್ಥವಾಯಿತು. ಅವನ ಹೆಮ್ಮೆ ನಾಶವಾಯಿತು. ಅವನಲ್ಲಿ ಸದ್ಗುಣಗಳು ಮತ್ತೆ ಮೂಡಿದವು.

ಅದು ಇಲ್ಲದಂತೆ ಮಾಡಿ!

ಆ ರಾಜ ಮಾರುವೇಷ ಧರಿಸಿ ದೇಶದಲ್ಲಿ ಸುತ್ತಾಡುತ್ತಿದ್ದ. ಹೆದ್ದಾರಿಯಲ್ಲಿದ್ದ ಒಂದು ಹಳ್ಳಿಗೆ ತಲುಪಿದಾಗ ಅವನಿಗೆ ತುಂಬಾ ಹಸಿವಾಗುತ್ತಿತ್ತು. ಅವನು ಒಬ್ಬ ಪ್ರಯಾಣಿಕನಂತೆ ಹಳ್ಳಿಯ ಹೊರವಲಯದಲ್ಲಿದ್ದ ಒಂದು ಮನೆಗೆ ಹೋದ. ಆ ಮನೆಯವರು ಅಪರಿಚಿತನಾದ ಅವನನ್ನು ಪ್ರೀತಿಯಿಂದ ನೋಡಿಕೊಂಡು ಅವನಿಗೆ ಊಟ ನೀಡಿ ಉಪಚರಿಸಿದರು.

ಆ ಕುಟುಂಬದವರು ಎರಡು ಹಸುಗಳನ್ನು ಇಟ್ಟುಕೊಂಡಿದ್ದರು. ಅವು ನೀಡುವ ಹಾಲಿನಿಂದಲೇ ಆ ಕುಟುಂಬ ಜೀವನ ನಡೆಸುತ್ತಿದೆ ಎಂದು ರಾಜನಿಗೆ ತಿಳಿಯಿತು. ಬಡತನದಲ್ಲಿ ಬದುಕುತ್ತಿದ್ದ ಆ ಕುಟುಂಬಕ್ಕೆ ಘನತೆಯಿಂದ ಸಹಾಯ ಮಾಡಲು ಅವನು ಬಯಸಿದ. ಆದರೆ ತಾನು ಅವರಿಗೆ ಹೇಗೆ ಸಹಾಯ ಮಾಡಬಹುದು ಎಂದು ಅವನಿಗೆ ತಿಳಿಯಲಿಲ್ಲ. ಆ ಊರಿನ ಹೊರಗೆ ಒಬ್ಬ ಸನ್ಯಾಸಿ ಇದ್ದಾನೆ ಎಂದು ಅವನಿಗೆ ತಿಳಿದು ಬಂತು. ಅವನು ಆ ಸನ್ಯಾಸಿಯ ಬಳಿಗೆ ಹೋಗಿ ಸಲಹೆ ಕೇಳಿದ. "ಅವರ ಬಳಿ ಇರುವ ಹಸುಗಳನ್ನು ಕದ್ದು ತೆಗೆದುಕೊಂಡು ಹೋಗಿ ಬಿಡಿ! ನೀವು ಆ ಕುಟುಂಬಕ್ಕೆ ಸಹಾಯ ಮಾಡುವ ಏಕೈಕ ಮಾರ್ಗವೆಂದರೆ ಅವುಗಳನ್ನು ಕಣ್ಮರೆಯಾಗಿಸುವುದೇ" ಎಂದು ಅವನು ಹೇಳಿದ. "ಅದು ಕೃತಜ್ಞತೆಯಿಲ್ಲದ ಕೃತ್ಯವಲ್ಲವೇ?" ರಾಜ ಹಿಂಜರಿದ. "ನಾನು ಹೇಳಿದಂತೆ ಮಾಡು" ಎಂದು ಸನ್ಯಾಸಿ ಅವನಿಗೆ ಆದೇಶಿಸಿದ. ರಾಜ ಸನ್ಯಾಸಿ ಹೇಳಿದ ಹಾಗೆಯೇ ಮಾಡಿದ.

ಒಂದು ವರ್ಷದ ನಂತರ, ರಾಜ ಮತ್ತು ಅವನ ಪರಿವಾರದವರು ಪ್ರವಾಸ ಮಾಡುತ್ತಾ ಆ ಹಳ್ಳಿಗೆ ಬಂದರು. ಅವನಿಗೆ ಅಂದು ಊಟ ಹಾಕಿದ್ದ ಮನೆ ಇದ್ದ ಸ್ಥಳದಲ್ಲಿ, ಈಗ ಒಂದು ದೊಡ್ಡ ಅಂಗಡಿ ಇತ್ತು. ಅಲ್ಲಿ ಎಲ್ಲಾ ರೀತಿಯ ವಸ್ತುಗಳನ್ನೂ ಮಾರುತ್ತಿದ್ದರು. ಪಕ್ಕದಲ್ಲೇ ಒಂದು ರೆಸ್ಟೋರೆಂಟ್ ಇತ್ತು. ಈ ಎಲ್ಲಾ ವ್ಯವಹಾರಗಳನ್ನೂ ನೋಡಿಕೊಳ್ಳುತ್ತಿದ್ದುದು ಅಂದು ಅವನಿಗೆ ಊಟ ನೀಡಿದ್ದ ಮನೆಯ ಯಜಮಾನ. ರಾಜ ಅವನನ್ನು ಕರೆದು ಏನಾಯಿತು ಎಂದು ವಿಚಾರಿಸಿದ.

"ನಾವು ಎರಡು ಹಸುಗಳನ್ನು ಇಟ್ಟುಕೊಂಡು ತುಂಬಾ ಕಷ್ಟದಿಂದ ಜೀವನ ನಡೆಸುತ್ತಿದ್ದೆವು. ಇದ್ದಕ್ಕಿದ್ದಂತೆ ಒಂದು ದಿನ, ನಮ್ಮ ಎರಡೂ ಹಸುಗಳೂ ಕಳ್ಳತನವಾದವು. ಜೀವನೋಪಾಯಕ್ಕಾಗಿ ಏನು ಮಾಡುವುದೆಂದು ನಮಗೆ ಚಿಂತೆಯಾಗಿತ್ತು. ನಮ್ಮ ಮನೆ ಹೆದ್ದಾರಿಯ ಪಕ್ಕದಲ್ಲೇ ಇದ್ದುದರಿಂದ, ನಾವು ಒಂದು ಅಂಗಡಿ ಮತ್ತು ರೆಸ್ಟೋರೆಂಟ್ ಅನ್ನು ಸ್ಥಾಪಿಸಲು ನಿರ್ಧರಿಸಿದೆವು. ಈಗ ಎರಡೂ ಚೆನ್ನಾಗಿ ಅಭಿವೃದ್ಧಿಯಾಗಿವೆ. ಇಂದು, ನಾವು ಈ ಊರಿನಲ್ಲಿ ಆರಾಮವಾಗಿ ವಾಸಿಸುತ್ತಿದ್ದೇವೆ" ಎಂದು ಅವನು ಹೇಳಿದ. ಸನ್ಯಾಸಿ ಅಂದು ಏಕೆ ಹಾಗೆ ಹೇಳಿದನೆಂಬುದು ರಾಜನಿಗೆ ಈಗ ಅರ್ಥವಾಯಿತು.

ಆ ಹಸುಗಳಂತೆಯೇ ಹಲವು ವಿಷಯಗಳು ಅನೇಕ ಜನರ ಪ್ರಗತಿಗೆ ಅಡ್ಡಿಯಾಗಿರುತ್ತವೆ! •

ಸದ್ಗುಣಗಳಿರುವ ಮನುಷ್ಯರ ಗುರುತುಗಳು!

ಸಂಪದ್ಭರಿತವಾಗಿದ್ದ ಒಂದು ದೇಶದ ಮಹಾರಾಜನು ತನ್ನ ರಾಜಗುರುವನ್ನು ಬಹಳವಾಗಿ ಗೌರವಿಸುತ್ತಿದ್ದನು. ಯಾವುದೇ ವಿಷಯದ ಬಗ್ಗೆಯಾದರೂ, ರಾಜಗುರು ನೀಡಿದ ಸಲಹೆಯನ್ನು ಅವನು ದೇವರ ವಾಕ್ಯವೆಂದು ಪರಿಗಣಿಸುತ್ತಿದ್ದನು. ರಾಜಗುರು ಕೂಡ ಜನರ ಕಲ್ಯಾಣ ಮತ್ತು ರಾಜನ ಕಲ್ಯಾಣವನ್ನು ಮಾತ್ರ ಪರಿಗಣಿಸಿ ಸಲಹೆ ನೀಡುತ್ತಿದ್ದನು.

ಅಂತಹ ರಾಜಗುರು ವೃದ್ಧಾಪ್ಯದಿಂದ ಅನಾರೋಗ್ಯಕ್ಕೀಡಾಗಿ ನಿಧನ ಹೊಂದಿದರು. ರಾಜ ತುಂಬಾ ಚಿಂತಿತನಾದನು. ಆದರೂ ಅವರ ಸ್ಥಾನದಲ್ಲಿ ಹೊಸ ರಾಜಗುರುವನ್ನು ನೇಮಿಸಲೇ ಬೇಕಾಗಿತ್ತು. ಅವನ ಬಳಿ ಇದ್ದ ಮೂವರು ಬುದ್ಧಿವಂತ ಮಂತ್ರಿಗಳಲ್ಲಿ ಒಬ್ಬನನ್ನು ರಾಜಗುರುವಿನ ಸ್ಥಾನಕ್ಕೆ ಆಯ್ಕೆ ಮಾಡಿಕೊಳ್ಳುವುದು ಸೂಕ್ತ ಎಂದು ಅವನು ಭಾವಿಸಿದನು. ಮೂವರಲ್ಲಿ ಯಾರನ್ನು ನೇಮಿಸಿಕೊಳ್ಳಬೇಕೆಂಬ ಬಗ್ಗೆ ಅವನಿಗೆ ಗೊಂದಲವಿತ್ತು. ಆದ್ದರಿಂದ ಅವನು ಅವರ ನಡುವೆ ಒಂದು ಸ್ಪರ್ಧೆಯನ್ನು ಏರ್ಪಡಿಸಿದನು.

ರಾಜನು ತನ್ನ ಮೂವರು ಮಂತ್ರಿಗಳನ್ನೂ ಕರೆದು, "ಅರಮನೆಯ ಮೃಗಾಲಯಕ್ಕೆ ಬಹಳಷ್ಟು ಪ್ರಾಣಿಗಳು ಬೇಕಾಗಿವೆ. ನೀವು ಮೂವರೂ ನಾಳೆ ಪ್ರತ್ಯೇಕಪ್ರತ್ಯೇಕವಾಗಿ ಕಾಡಿಗೆ ಹೋಗಿ ಸಾಕಷ್ಟು ಪ್ರಾಣಿಗಳ ಮರಿಗಳನ್ನು ಹಿಡಿದು ತನ್ನಿರಿ. ಒಂದೇ ದಿನದಲ್ಲಿ ಯಾರು ಹೆಚ್ಚು ಮರಿಗಳನ್ನು ಹಿಡಿದು ತರುತ್ತೀರೋ ನೋಡೋಣ" ಎಂದು ಹೇಳಿದ.

ಮರುದಿನ ಮೂವರು ಮಂತ್ರಿಗಳೂ ಬೇರೆ ಬೇರೆ ಕಾಡುಗಳಿಗೆ ಹೋದರು. ಮೊದಲ ಮಂತ್ರಿ ಐದು ಆನೆ ಮರಿಗಳನ್ನು ಮತ್ತು ಎರಡು ಕರಡಿ ಮರಿಗಳನ್ನು ಹಿಡಿದು ತಂದು ಹೆಮ್ಮೆಯಿಂದ ರಾಜನಿಗೆ ತೋರಿಸಿದ. ಎರಡನೇ ಮಂತ್ರಿ, "ಯಾರಿಂದಲೂ ಸುಲಭವಾಗಿ ಹಿಡಿಯಲು ಸಾಧ್ಯವಾಗದ ನಾಲ್ಕು ಹುಲಿ ಮರಿಗಳನ್ನು ನಾನು ಹಿಡಿದು ತಂದಿದ್ದೇನೆ!" ಎಂದು ಹೇಳಿ ಪಂಜರದಲ್ಲಿದ್ದ ಹುಲಿ ಮರಿಗಳನ್ನು ತೋರಿಸಿದ. ಅದರೊಂದಿಗೆ ಅವನು ಅನೇಕ ಜಿಂಕೆಯ ಮರಿಗಳನ್ನು ಸಹ ಹಿಡಿದು ತಂದಿದ್ದ.

ಎಲ್ಲರೂ ಮೂರನೇ ಮಂತ್ರಿಗಾಗಿ ಕಾಯುತ್ತಿದ್ದರು. ಬಹಳ ಸಮಯದ ನಂತರ ಅವನು ಬರಿಗೈಯಲ್ಲಿ ಹಿಂತಿರುಗಿದ. "ಏನಾಯಿತು?" ರಾಜ ಕೇಳಿದ. "ರಾಜ! ನಾನು ಕಾಡಿಗೆ ಹೋಗಿದ್ದೆ! ಆದರೆ ಅಲ್ಲಿ ಯಾವುದೇ ಚಿಕ್ಕ ಪ್ರಾಣಿಯನ್ನು ಹಿಡಿದು ತರಲು ನನ್ನ ಮನಸ್ಸು ಒಪ್ಪಲಿಲ್ಲ. ಚಿಕ್ಕ ಮರಿಗಳಾಗಿರುವುದರಿಂದ ಅವು ತಮ್ಮ ತಾಯಿಯಿಂದ ಬೇರ್ಪಟ್ಟರೆ ತುಂಬಾ ಬಳಲುತ್ತವೆ. ತಾಯಿ ಪ್ರಾಣಿಗಳು ಸಹ ತಮ್ಮ ಮರಿಗಳನ್ನು ಕಳೆದುಕೊಂಡು ದುಃಖಿಸುತ್ತವೆ. ತಾಯಿಯಿಂದ ಮರಿಗಳನ್ನು ಈ ರೀತಿ ಬೇರ್ಪಡಿಸುವುದು ಸರಿಯಲ್ಲ ಎಂದು ನಾನು ಭಾವಿಸುತ್ತೇನೆ. ಅದಕ್ಕಾಗಿಯೇ ನಾನು ಬರಿಗೈಯಲ್ಲಿ ಹಿಂತಿರುಗಿದ್ದೇನೆ" ಎಂದ. ರಾಜ ತಕ್ಷಣ ಸಿಂಹಾಸನದಿಂದ ಎದ್ದು ಅವನನ್ನು ಅಪ್ಪಿಕೊಂಡ. "ಪ್ರಾಣಿಗಳನ್ನೇ ಇಷ್ಟು ಪ್ರೀತಿಸುವ ಮತ್ತು ಅವುಗಳ ಬಗ್ಗೆ ಕಾಳಜಿ ವಹಿಸುವ ನೀನು, ಖಂಡಿತವಾಗಿಯೂ ಈ ದೇಶದ ಜನರನ್ನು ಮತ್ತು ನನ್ನನ್ನು ಚೆನ್ನಾಗಿ ನೋಡಿಕೊಳ್ಳುವೆ ಎಂದು ನಾನು ಭಾವಸುತ್ತೇನೆ. ಆದುದರಿಂದ ನಾನು ನಿನ್ನನ್ನು ಈ ದೇಶದ ರಾಜ ಗುರುವನ್ನಾಗಿ ನೇಮಿಸುತ್ತಿದ್ದೇನೆ" ಎಂದು ಹೇಳಿದ.

ಸದ್ಗುಣಗಳಿಂದ ತುಂಬಿರುವ ಜನರನ್ನು ಕೆಲವು ಅಂಶಗಳ ಮೂಲಕ ಗುರುತಿಸಬಹುದು. ಆ ಅಂಶಗಳಲ್ಲಿ ಕೆಲವು ಇಲ್ಲಿವೆ :

- 'ನೀವು ಚೆನ್ನಾಗಿದ್ದೀರಿ ಎಂದು ಭಾವಿಸುತ್ತೇನೆ'. ಇದೇ ತಾನೇ ಎಲ್ಲರೂ ನಮ್ಮ ಕ್ಷೇಮವನ್ನು ವಿಚಾರಿಸುವ ರೀತಿ. ಮೆಸೇಜ್‌ಗಳು, ಇಮೇಯಿಲ್‌ಗಳಲ್ಲೂ ಕೂಡ ಎಲ್ಲರೂ ಹೀಗೇ ಕ್ಷೇಮ ಸಮಾಚಾರವನ್ನು ವಿಚಾರಿಸುವುದು. ವೈಯಕ್ತಿಕವಾಗಿ ಮುಖಾಮುಖಿಯಾದಾಗಲೂ ಹೀಗೆಯೇ ಎಲ್ಲರೂ ಯೋಗಕ್ಷೇಮವನ್ನು ಕೇಳುವುದು. ಆದರೆ ಒಳ್ಳೆಯ ಸ್ವಭಾವವನ್ನು ಹೊಂದಿರುವ ಯಾರೂ ನಿಮ್ಮ ಯೋಗಕ್ಷೇಮವನ್ನು ಕೇವಲ ಬಾಯಿ ಮಾತಿಗಾಗಿ ಕೇಳುವುದಿಲ್ಲ. ಅವರು ತುಂಬಾ ಕಾಳಜಿಯಿಂದ ಕೇಳುತ್ತಾರೆ, "ನೀವು ಹೇಗಿದ್ದೀರಿ? ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರಾ?" ಎಂದು ಅವರು ನಿಮ್ಮ ಕಣ್ಣಲ್ಲಿ ಕಣ್ಣಿಟ್ಟು ಮುತುವರ್ಜಿಯಿಂದ ಕೇಳುತ್ತಾರೆ.

- "ನಗು ಹೃದಯದ ಪ್ರತಿಬಿಂಬ" ಎಂದು ಹೇಳುವುದುಂಟು. ಸದ್ಗುಣಗಳಿಂದ ತುಂಬಿರುವ ಜನರು ತಾವು ನಿಜವಾಗಿಯೂ ಸಂತೋಷವಾಗಿರುವುದನ್ನು ಪ್ರಕಟಪಡಿಸುತ್ತಾರೆ. ಅವರು ತಮ್ಮ ಜೊತೆಯಲ್ಲಿರುವವರನ್ನು ಸಹ ಸಂತೋಷಪಡಿಸಲು ಬಯಸುತ್ತಾರೆ. ಅವರೊಂದಿಗೆ ಮಾತನಾಡುವುದರಿಂದ ಎಲ್ಲರಲ್ಲೂ ಸಕಾರಾತ್ಮಕ ಭಾವನೆ ಮೂಡುತ್ತದೆ.
- ಕೆಲವರ ಬಳಿ ಕೆಲವು ನಿಮಿಷಗಳ ಕಾಲ ಮಾತನಾಡಿದರೂ ಸಾಕು, ಅವರು ವಿಶ್ವಾಸಾರ್ಹ ವ್ಯಕ್ತಿ ಎಂಬ ಭಾವನೆ ನಮ್ಮೊಳಗೆ ಮೂಡುತ್ತದೆ. ನಾವು ಈ ವ್ಯಕ್ತಿಯೊಂದಿಗೆ ಯಾವ ವಿಷಯವನ್ನು ಬೇಕಾದರೂ ಹಂಚಿಕೊಳ್ಳಬಹುದು. ನಾವು ಯಾವುದೇ ಸಮಯದಲ್ಲಿ ಅವರ ಸಲಹೆಯನ್ನು ಕೇಳಬಹುದು ಎಂಬ ಭಾವ ನಮ್ಮೊಳಗೆ ಬರುತ್ತದೆ. ಅಂತಹ ಕಾಳಜಿಯನ್ನು ಸದ್ಗುಣಶೀಲ ಜನರು ವ್ಯಕ್ತಪಡಿಸುತ್ತಾರೆ.
- ಅವರು ನಿಜವಾಗಿಯೂ ದಯೆ ಮತ್ತು ಸಹಾನುಭೂತಿಯಿಂದ ನಡೆದುಕೊಳ್ಳುತ್ತಾರೆ. ಅವರ ಕಾರ್ಯಗಳಲ್ಲಿ ಯಾವುದೇ ನಾಟಕ ಇರುವುದಿಲ್ಲ. ಯಾರಾದರೂ ಬಿಕ್ಕಟ್ಟಿನಲ್ಲಿದ್ದಾಗ ಅವರು ನಿಜವಾಗಿಯೂ ತಮ್ಮ ಬೆಂಬಲ ನೀಡುತ್ತಾರೆ. ಅವರೊಳಗೆ ಆತ್ಮವಿಶ್ವಾಸವನ್ನು ತುಂಬುತ್ತಾರೆ. ಸಂಕಷ್ಟದಲ್ಲಿದ್ದಾಗ ಸಾಂತ್ವನ ಹೇಳುತ್ತಾರೆ. ಯಾವುದೇ ರೀತಿಯ ಸಮಸ್ಯೆ ಬಂದರೂ, ಅವರ ಸುತ್ತಲಿನ ಪ್ರತಿಯೊಬ್ಬರೂ ಅವರ ಬಳಿ ಸಲಹೆ ಕೇಳಿದರೆ ತಮ್ಮ ಸಮಸ್ಯೆಗೆ ಪರಿಹಾರ ದೊರಕುತ್ತದೆ ಎಂದು ಭಾವಿಸುತ್ತಾರೆ.
- ಅವರು ಎಲ್ಲಾ ಸಮಯದಲ್ಲೂ ಮತ್ತು ಎಲ್ಲಾ ಸ್ಥಳಗಳಲ್ಲೂ ಒಂದೇ ರೀತಿ ಇರುತ್ತಾರೆ. ವ್ಯಕ್ತಿಗೆ ತಕ್ಕಂತೆ ಅವರು ಮಾತನಾಡುವುದಿಲ್ಲ. ಪರಿಸ್ಥಿತಿಗೆ ತಕ್ಕಂತೆ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸುವುದಿಲ್ಲ. ಹಣ ಮತ್ತು ಸ್ಥಾನಮಾನದಂತಹ ವಿಷಯಗಳನ್ನು ಮೀರಿ ಅವರು ಮನುಷ್ಯರಿಗೆ ಬೆಲೆ ಕೊಡುತ್ತಾರೆ. ಅವರು ಯಾರನ್ನಾದರೂ ಪ್ರೀತಿಯಿಂದ ನಡೆಸಿಕೊಂಡರೆ, ಆ ಪ್ರೀತಿ ಯಾವುದೇ ಸಂದರ್ಭದಲ್ಲೂ ಬದಲಾಗುವುದಿಲ್ಲ.
- ಅವರು ಇತರರ ಯಶಸ್ಸನ್ನು ಉತ್ಸಾಹದಿಂದ ಸಂಭ್ರಮಿಸುತ್ತಾರೆ. ಅದರಲ್ಲಿ ಯಾವುದೇ ಅಸೂಯೆ ಇರುವುದಿಲ್ಲ. ಅವರು ಅದರಲ್ಲಿ ತಾವೇ ಗೆದ್ದಂತೆ ಸಂತೋಷವನ್ನು ವ್ಯಕ್ತಪಡಿಸುತ್ತಾರೆ. ಅವರು ತಮ್ಮ ಸ್ನೇಹಿತರು ಮತ್ತು ಸಂಬಂಧಿಕರ ವಲಯದಲ್ಲಿರುವ ಎಲ್ಲರಿಗೂ ಜೀವನದಲ್ಲಿ ಯಶಸ್ಸಿನ ಮಾರ್ಗಗಳನ್ನು ತೋರಿಸುತ್ತಾರೆ.
- ಅವರು ಒಂದು ವಾಗ್ದಾನ ನೀಡಿದರೆ, ಎಂತಹ ಪರಿಸ್ಥಿತಿ ಎದುರಾದರೂ ಅದನ್ನು ಪೂರೈಸಲು ಶ್ರಮಿಸುತ್ತಾರೆ. ಅವರು ಅದನ್ನು ಇತರರಿಗೆ ನೀಡುವ ಗೌರವವೆಂದು ಪರಿಗಣಿಸುತ್ತಾರೆ. ಅವರು ಇತರರ ಸಮಯ, ಭಾವನೆಗಳು ಮತ್ತು ಮಾತು ಎಲ್ಲವನ್ನೂ ಗೌರವಿಸುತ್ತಾರೆ.
- ಅವರು ತಮ್ಮ ಶತ್ರುಗಳ ಬಗ್ಗೆಯೂ ಸಹ ದಯೆಯಿಂದ ಮಾತನಾಡುತ್ತಾರೆ. ತಮ್ಮ ಬೆನ್ನ ಹಿಂದೆ ಯಾರ ಬಗ್ಗೆಯೂ ಮಾತನಾಡುವುದಿಲ್ಲ ಅಥವಾ ಯಾರನ್ನೂ ಗೇಲಿ ಮಾಡುವುದಿಲ್ಲ. ತಮಗೆ ಹಾನಿ ಮಾಡಿದ ಜನರನ್ನು ಸಹ ಅವರಲ್ಲಿರುವ ಕೆಲವು ಒಳ್ಳೆಯ ಗುಣಗಳಿಗಾಗಿ ಅವರು ಗೌರವಿಸುತ್ತಾರೆ. ತಮ್ಮಲ್ಲಿರುವ ಆ ಗೌರವ ಭಾವವನ್ನು ಪ್ರಕಟವಾಗಿಯೇ ವ್ಯಕ್ತಪಡಿಸುತ್ತಾರೆ.
- ಅವರು ಲಾಭವನ್ನು ನಿರೀಕ್ಷಿಸಿ ಇತರರ ಮುಂದೆ ಸುಳ್ಳು ಹೊಗಳಿಕೆಗಳನ್ನು ಹೇಳುವುದಿಲ್ಲ. ಅವರು ಯಾರನ್ನಾದರೂ ಹೊಗಳಿದರೆ, ಅದು ಒಳ್ಳೆಯ ಉದ್ದೇಶದಿಂದಲೇ ಆಗಿರುತ್ತದೆ. ಇತರರ ಬಗ್ಗೆ ಅವರು ಮಾಡುವ ಟೀಕೆಗಳು ಸಹ ಸಭ್ಯವಾಗಿರುತ್ತವೆ.
- ಸದ್ಗುಣಶೀಲರು ತಮ್ಮ ಜೀವನವನ್ನು ತಮಗೆ ಬೇಕಾದ ರೀತಿಯಲ್ಲಿ ಬದುಕುತ್ತಾರೆ. ಇತರರು ಏನು ಅಂದುಕೊಳ್ಳುತ್ತಾರೋ ಎಂಬುದರ ಬಗ್ಗೆ ಚಿಂತಿಸುವುದಿಲ್ಲ. ಅವರು ತಮಗೆ ಸರಿ ಎಂದು ಅನ್ನಿಸುವ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ.
- ಅವರು ಇತರರಿಗಾಗಿ ತಮ್ಮ ಸಮಯವನ್ನು ಸ್ವಇಚ್ಛೆಯಿಂದ ಮೀಸಲಿಡುತ್ತಾರೆ. ಆಪ್ತ ಮಿತ್ರರು ಅಥವಾ ಆತ್ಮೀಯ ಸಂಬಂಧಿಗಳು ಕಷ್ಟದಲ್ಲಿದ್ದಾಗ, ಅವರು ತಮ್ಮ ಸ್ವಂತ ಕೆಲಸವನ್ನು ಬದಿಗಿಟ್ಟು ಸಹಾಯ ಮಾಡಲು ಅವರ ಬಳಿಗೆ ಓಡಿ ಬರುತ್ತಾರೆ.
- ಸದ್ಗುಣಗಳುಳ್ಳ ವ್ಯಕ್ತಿಗಳು ತಮ್ಮ ಭಾವನೆಗಳನ್ನು ಸ್ವಾಭಾವಿಕವಾಗಿ ವ್ಯಕ್ತಪಡಿಸುತ್ತಾರೆ. ಅವರ ಕೋಪ ಕೂಡ ಕಾಳಜಿಯನ್ನು ತೋರಿಸುತ್ತದೆ. "ನೀವು ಏನಾದರೂ ತಪ್ಪು ಮಾಡಿ ತೊಂದರೆಗೆ ಸಿಲುಕುತ್ತೀರಿ" ಎಂಬಂತಹ ಅವರ ಕಠಿಣ ಎಚ್ಚರಿಕೆಯ ಮಾತುಗಳು ಸಹ ಪ್ರೀತಿಯನ್ನು ತೋರಿಸುತ್ತವೆ. ಅದಕ್ಕಾಗಿಯೇ ಎಲ್ಲರೂ ಅವರನ್ನು ಇಷ್ಟಪಡುತ್ತಾರೆ.

ಜೀವನವನ್ನೇ ಬದಲಾಯಿಸುವ ಸದ್ಗುಣಗಳು!

- ಒಂದೊಂದು ಪದಗಳೂ ಕೀಲಿಗಳಿದ್ದಂತೆ. ನೀವು ಸರಿಯಾದ ಕೀಲಿಗಳನ್ನು ಬಳಸಿದರೆ, ಎದುರಿಗಿರುವವರ ಹೃದಯಗಳನ್ನು ತೆರೆಯಬಹುದು; ಮತ್ತು ಬಾಯಿಗಳನ್ನು ಮುಚ್ಚಬಹುದು.
- ಒಂದೇ ಬೆಂಕಿಯೊಳಗೆ ಯಾರೂ ಎರಡು ಬಾರಿ ಸುಟ್ಟುಕೊಳ್ಳುವುದಿಲ್ಲ. ಯಾರೂ ಒಂದೇ ತಪ್ಪನ್ನು ಎರಡು ಬಾರಿ ಮಾಡುವುದಿಲ್ಲ.
- ಬೀಸುತ್ತಿರುವ ಬಿರುಗಾಳಿ ಹಾದು ಹೋಗಿ ಬಿಡಲಿ ಎಂದು ಕಾಯುತ್ತಿರುವುದು ಜೀವನವಲ್ಲ. ಗಾಳಿ ಬೀಸುವ ದಿಕ್ಕಿನ ಕಡೆಗೆ ಪ್ರಯಾಣ ಮಾಡುವುದನ್ನು ಕಲಿತುಕೊಳ್ಳಬೇಕು.
- ನೀವು ಯಾವಾಗಲೂ ಸತ್ಯವನ್ನೇ ಮಾತನಾಡುತ್ತಿದ್ದರೆ, ನೀವು ಯಾರೊಂದಿಗೆ ಏನು ಮಾತನಾಡಿದ್ದೀರಿ ಮತ್ತು ಏನು ಹೇಳಿದ್ದೀರಿ ಎಂಬುದನ್ನೆಲ್ಲ ನೆನಪಿನಲ್ಲಿಟ್ಟುಕೊಳ್ಳುವ ಅಗತ್ಯವಿಲ್ಲ. ಸತ್ಯಗಳು ಸದಾ ನೆನಪಿನಲ್ಲಿ ಉಳಿಯುತ್ತವೆ.
- ನಿಮ್ಮ ಮಾತುಗಳನ್ನು ನಿರ್ಲಕ್ಷಿಸುವವರಿಗೆ ಮೌನವನ್ನು ನಿಮ್ಮ ಉತ್ತರವನ್ನಾಗಿ ನೀಡಿ.
- ನಿಮ್ಮ ಗಾಯಗಳನ್ನು ಅನುಭವಗಳನ್ನಾಗಿ ಪರಿವರ್ತಿಸಿಕೊಳ್ಳಿ. ಆ ಅನುಭವವು ನಿಮಗೆ ಅನೇಕ ಬಗೆಯ ಆಸ್ತಿಗಳನ್ನು ನೀಡುತ್ತದೆ.
- ಜನರು ನಿಮಗೆ ಸ್ಫೂರ್ತಿ ನೀಡಬಹುದು ಅಥವಾ ಅವರು ನಿಮ್ಮನ್ನು ಆಯಾಸಗೊಳಿಸಬಹುದು. ನೀವು ಯಾವ ರೀತಿಯ ಜನರೊಂದಿಗೆ ಬೆರೆಯುತ್ತೀರಿ ಎಂಬುದು ನಿಮ್ಮ ಆಯ್ಕೆಯಾಗಿರುತ್ತದೆ.
- ನೀವು ಶಾಂತರಾಗಿದ್ದಾಗ, ಎಲ್ಲರ ಸಲಹೆಗಳೂ ನಿಮ್ಮ ಕಿವಿಯೊಳಗೆ ಬೀಳುತ್ತವೆ.
- ಭಯ ತಾತ್ಕಾಲಿಕವಾದುದು. ಆದರೆ ವಿಷಾದ ಶಾಶ್ವತವಾಗಿರುತ್ತದೆ. ನೀವು ಭಯದಿಂದ ಇಂದು ಮಾಡಬೇಕಾದುದನ್ನು ತಪ್ಪಿಸಿದರೆ, ನೀವು ಶಾಶ್ವತವಾಗಿ ವಿಷಾದಿಸಬೇಕಾಗಬಹುದು.
- ಯಾವಾಗಲೂ ಕೆಲಸ ಮಾಡುತ್ತಲೇ ಇರಿ. ಅದರಲ್ಲಿ ತಪ್ಪುಗಳು ನಡೆದರೂ ಸರಿ, ಕೆಲಸ ಮಾಡುವುದನ್ನು ಬಿಡಬೇಡಿ. ನೀವು ದಣಿದಿದ್ದರೂ, ಹೆದರಿದರೂ ಕೆಲಸ ಮಾಡುತ್ತಲೇ ಇರಿ. ಸುಮ್ಮನಿರಬೇಡಿ.

ಹೇಗೆ ಹಾರುತ್ತವೆ?

ಜೇನುನೊಣಗಳಲ್ಲಿ ಜೀರುಂಡೆಯಂತಹ ಒಂದು ಜಾತಿಯ ಜೇನುನೊಣವಿದೆ. ಅದರ ದೇಹ ದುಂಡಗಿರುತ್ತದೆ. ದೇಹದ ಮೇಲೆ ತುಪ್ಪುಳಿನಂತಿರುವ ಕೂದಲು ಇರುತ್ತದೆ. ಅದರ ರೆಕ್ಕೆಗಳು ತುಂಬಾ ಚಿಕ್ಕದಾಗಿರುತ್ತವೆ. ವಿಜ್ಞಾನಿಗಳು ಆ ಜೀರುಂಡೆಯನ್ನು ಕುರಿತು ಅಧ್ಯಯನ ಮಾಡಿದರು. ಆ ಸಂದರ್ಭದಲ್ಲಿ ಅವರು ಒಂದು ವಿಷಯವನ್ನು ತಿಳಿದು ಆಘಾತಕ್ಕೊಳಗಾದರು. ಅದರ ದೇಹದ ಗಾತ್ರಕ್ಕೆ ಹೋಲಿಸಿದರೆ, ಅದರ ರೆಕ್ಕೆಗಳು ತುಂಬಾ ಚಿಕ್ಕದಾಗಿರುತ್ತವೆ. ಆ ಸಣ್ಣ ರೆಕ್ಕೆಗಳೊಂದಿಗೆ ಹಾರುವುದು ಅಸಾಧ್ಯ. ಆದಾಗ್ಯೂ, ಅದು ಹಾರುತ್ತದೆ.

ಇದು ಹೇಗೆ ಸಾಧ್ಯ?! ಅದಕ್ಕೆ ಒಂದೇ ಒಂದು ಕಾರಣ ಮಾತ್ರವೇ ಇತ್ತು. 'ತನಗೆ ಹಾರಲು ಸಾಧ್ಯವಿಲ್ಲ' ಎಂಬ ವೈಜ್ಞಾನಿಕ ಸತ್ಯ ಅದಕ್ಕೆ ತಿಳಿದಿರಲಿಲ್ಲ. ಅದಕ್ಕಾಗಿಯೇ ಅದು ಹಾರುತ್ತಿತ್ತು. ಹಲವು ಬಾರಿ, ಅನೇಕ ಜನರು 'ನೀವು ಇದನ್ನು ಮಾಡಲು ಸಾಧ್ಯವಿಲ್ಲ', 'ಇದನ್ನು ಮಾಡುವುದು ಅಸಾಧ್ಯ' ಎಂದು ಹೇಳುತ್ತಿರುತ್ತಾರೆ. ಅವರ ಮಾತುಗಳನ್ನು ಕೇಳಿ ನಿಮ್ಮ ಎಲ್ಲೆಗಳನ್ನು ನೀವೇ ನಿರ್ದಿಷ್ಟಗೊಳಿಸಿಕೊಳ್ಳದೆ ಅದನ್ನು ದಾಟಿ, ಮುಂದೆ ಸಾಗುವುದೇ ಯಶಸ್ಸನ್ನು ತಂದುಕೊಡುವುದು. ಇದನ್ನೇ ಸದ್ಗುಣವುಳ್ಳವರೂ ಮಾಡುವುದು!

ಬೆನ್ನಟ್ಟಿ ಹಿಡಿಯಲು ಸಾಧ್ಯವಿಲ್ಲ!

ಒಬ್ಬ ಪ್ರಸಿದ್ಧ ನಟ ತನ್ನ ಮನೆಯಲ್ಲಿ ಹೇಗೆ ಆರಾಮದಾಯಕವಾಗಿ ವಾಸಿಸುತ್ತಿದ್ದನೆಂಬುದನ್ನು ಒಂದು ಟಿವಿ ಕಾರ್ಯಕ್ರಮದಲ್ಲಿ ತೋರಿಸಲಾಗುತ್ತಿತ್ತು. ಅದನ್ನು ವೀಕ್ಷಿಸುತ್ತಿದ್ದ ಹುಡುಗನೊಬ್ಬ ತನ್ನ ಅಜ್ಜನನ್ನು "ಅವನು ಯಾರು?" ಎಂದು ಕೇಳಿದ. ಅಜ್ಜ ಆ ನಟನ ಕೆಲಸ, ಅವನ ಸಿನಿಮಾಗಳು, ಅವನ ಅಭಿಮಾನಿಗಳು, ಅವನ ಆದಾಯ ಹೀಗೆ ಎಲ್ಲವನ್ನೂ ವಿವರಿಸಿದರು. ಆ ಹುಡುಗ ತಕ್ಷಣ ಹೇಳಿದ: "ಅಜ್ಜ, ನಾನು ಕೂಡ ದೊಡ್ಡವನಾದಾಗ, ನಟನಾಗುತ್ತೇನೆ. ನಾನೂ ಅರಮನೆಯಂತಹ ಮನೆಯನ್ನು ಕಟ್ಟಿ ಅಲ್ಲಿ ವಾಸಿಸುತ್ತೇನೆ. ನಾನೂ ಬಹಳಷ್ಟು ಕಾರುಗಳನ್ನು ಖರೀದಿಸುತ್ತೇನೆ. ಅದಕ್ಕಾಗಿ ನಾನು ಏನು ಮಾಡಬೇಕು?"

ಅಜ್ಜ ಉತ್ತರಿಸದೆ, ಸದ್ದಿಲ್ಲದೆ ಮುಗುಳ್ನಕ್ಕು ತನ್ನ ಮೊಮ್ಮಗನನ್ನು ತೋಟಕ್ಕೆ ಕರೆದೊಯ್ದರು. ಅಲ್ಲಿ, ಒಂದು ಗಿಡದಲ್ಲಿ ಅರಳಿದ ಹೂವಿನ ಮೇಲೆ, ಒಂದು ಸುಂದರವಾದ ಚಿಟ್ಟೆ ಕುಳಿತಿತ್ತು. ಅವರು ಅದನ್ನು ತನ್ನ ಮೊಮ್ಮಗನಿಗೆ ತೋರಿಸಿ, "ನೋಡು! ಅದು ಎಷ್ಟು ಸುಂದರವಾಗಿದೆ. ಬೇಗನೆ ಹೋಗಿ ಅದನ್ನು ಹಿಡಿ!" ಎಂದು ಹೇಳಿದನು.

ಆ ಹುಡುಗ ಅದನ್ನು ಹಿಡಿಯಲು ಓಡಿದ. ಅವನು ಹತ್ತಿರ ಬರುತ್ತಿದ್ದಂತೆ, ಅದು ಎತ್ತರಕ್ಕೆ ಹಾರಿಹೋಯಿತು. ಅದು ಇನ್ನೊಂದು ಹೂವಿನ ಮೇಲೆ ಹೋಗಿ ಕುಳಿತುಕೊಂಡಿತು. ಅವನು ಮತ್ತೆ ಓಡಿದ. ಅದು ಅಲ್ಲಿಂದ ಹಾರಿಹೋಗಿ ಇನ್ನೊಂದು ಗಿಡದಲ್ಲಿ ಕುಳಿತುಕೊಂಡಿತು. ಬಹಳ ಹೊತ್ತು ಅವನು ಅದನ್ನು ಹಿಂಬಾಲಿಸಿದ. ನಂತರ ಅದು ಎಲ್ಲೋ ಕಣ್ಮರೆಯಾಯಿತು. ಆ ಹುಡುಗ ಉಸಿರುಗಟ್ಟಿ ಓಡಿ ಬಂದು, "ನನಗೆ ಅದನ್ನು ಹಿಡಿಯಲು ಸಾಧ್ಯವಾಗಲಿಲ್ಲ" ಎಂದು ಅಜ್ಜನ ಬಳಿ ಹೇಳಿದ.

ಅಜ್ಜ ಅವನನ್ನು ಪ್ರೀತಿಯಿಂದ ಅಪ್ಪಿಕೊಂಡು, "ಕೇಳು, ನಾನು ನಿನಗೆ ಒಂದು ಜೀವನ ಪಾಠ ಹೇಳಿಕೊಡುತ್ತೇನೆ! ನೀನು ಚಿಟ್ಟೆಗಳನ್ನು ಬೆನ್ನಟ್ಟುತ್ತಲೇ ಇದ್ದರೆ, ಅವು ಕೈಗೆ ಸಿಗದೆ ಹಾರಿಹೋಗುತ್ತವೆ. ಆದರೆ ನೀನು ಸುಂದರವಾದ ಉದ್ಯಾನವನ್ನು ನಿರ್ಮಿಸಿದರೆ, ಅವು ಅಲ್ಲಿರುವ ಹೂವುಗಳನ್ನು ಹುಡುಕಿಕೊಂಡು ಬರುತ್ತವೆ. ನಿನ್ನ ಗುರಿಗಳು ಚಿಟ್ಟೆಗಳಂತೆ. ನೀನು ಅವುಗಳನ್ನು ಆತುರದಿಂದ ಬೆನ್ನಟ್ಟಿದರೆ, ಅವು ನಿನ್ನ ಕೈಗೆ ಸಿಗುವುದಿಲ್ಲ. ಸುಂದರವಾದ ಉದ್ಯಾನವನ್ನು ನಿರ್ಮಿಸುವಂತೆ, ನಿನ್ನ ಪ್ರತಿಭೆಯನ್ನು ಬಳಸಿ ಒಳ್ಳೆಯ ಗುಣಗಳನ್ನು ಬೆಳೆಸಿಕೋ! ಜ್ಞಾನ ಮತ್ತು ಅನುಭವವು ಆ ಉದ್ಯಾನದ ಬೀಜಗಳಾಗಿರುತ್ತವೆ. ನೀನು ಇದನ್ನು ಮಾಡಿದರೆ ಯಶಸ್ಸು, ಹಣ ಮತ್ತು ಗೌರವ ಎಲ್ಲವೂ ನಿನ್ನನ್ನು ಹುಡುಕಿಕೊಂಡು ಬರುತ್ತವೆ' ಎಂದು ಹೇಳಿದರು.

ಹುಡುಗನಿಗೆ ಅರ್ಥವಾಯಿತು!

ಕೌಶಲ್ಯದಿಂದ ಪ್ರತ್ಯುತ್ತರ ನೀಡಿ!

ಜನಪ್ರಿಯ ಬ್ರಿಟಿಷ್ ಟಿವಿ ಕಾರ್ಯಕ್ರಮವೊಂದರಲ್ಲಿ ಸಂಗೀತ ಸ್ಪರ್ಧಿಯಾಗಿ ಕಾಣಿಸಿಕೊಂಡಾಗ ಕೈಲ್ ಟಾಮ್ಲಿನ್ಸನ್ ಅವರಿಗೆ ಕೇವಲ 12 ವರ್ಷ! ಆ ಕಾರ್ಯಕ್ರಮದಲ್ಲಿ ತೀರ್ಪುಗಾರರಾಗಿ ಬಂದಿದ್ದ ಪ್ರಸಿದ್ಧ ನಟರೊಬ್ಬರು ಟಾಮ್ಲಿನ್ಸನ್‌ನನ್ನು ಕಟುವಾಗಿ ಟೀಕಿಸಿದರು. "ನಿಮಗೆ ಒಳ್ಳೆಯ ಧ್ವನಿಯೂ ಇಲ್ಲ. ನಿಮಗೆ ಹಾಡಲು ಬರುವುದೂ ಇಲ್ಲ. ಇಂತಹ ಸ್ಪರ್ಧೆಯಲ್ಲಿ ಭಾಗವಹಿಸಲು ನೀವು ಏಕೆ ಬಂದಿದ್ದೀರಿ?" ಎಂದು ಅವರು ಕೇಳಿದರು. ಆ ಟೀಕೆ ಬಾಲಕ ಟಾಮ್ಲಿನ್ಸನ್ ಅವರ ಹೃದಯವನ್ನು ಚುಚ್ಚಿತು.

ಮುಂದಿನ ಎರಡು ವರ್ಷಗಳ ಕಾಲ ಅವರು ತೀವ್ರವಾಗಿ ಅಭ್ಯಾಸ ಮಾಡಿದರು. ತಮ್ಮ 14ನೇ ವಯಸ್ಸಿನಲ್ಲಿ ಅವರು ಅದೇ ಕಾರ್ಯಕ್ರಮದಲ್ಲಿ ಮತ್ತೆ ಹಾಡಲು ಬಂದಾಗ, ಅದೇ ತೀರ್ಪುಗಾರರು ಅಲ್ಲಿದ್ದರು. ಟಾಮ್ಲಿನ್ಸನ್ ಹಾಡುವ ಮೊದಲು, ಅದೇ ವೇದಿಕೆಯಲ್ಲಿ ತಾನು ಈ ಹಿಂದೆ ಅನುಭವಿಸಿದ ಅವಮಾನವನ್ನು ಉಲ್ಲೇಖಿಸಿದರು. ಆ ಟೀಕೆ ತಮ್ಮನ್ನು ಉತ್ತಮ ಗಾಯಕನನ್ನಾಗಿ ಮಾಡಿದೆ ಎಂದು ಅವರು ಹೇಳಿದರು. ನ್ಯಾಯಾಧೀಶರಿಗೆ ಅದು ನೆನಪಿರಲಿಲ್ಲ. ನಂತರ ಅವರು ಹಾಡಲು ಪ್ರಾರಂಭಿಸಿದರು.

ಅವರು ತಮ್ಮ ಹೃದಯದಾಳದಿಂದ ಹಾಡುತ್ತಿದ್ದಂತೆ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟಿದರು. ಆ ಕಾರ್ಯಕ್ರಮದಲ್ಲಿ, ತೀರ್ಪುಗಾರರಾಗಿರುವವರಿಗೆ ಯಾವುದೇ ಸ್ಪರ್ಧಿಯನ್ನು ಬೇಕಾದರೂ ನೇರವಾಗಿ ಫೈನಲ್‌ಗೆ ಕಳುಹಿಸುವ ಅಧಿಕಾರ ನೀಡಲಾಗಿತ್ತು. ತೀರ್ಪುಗಾರರು ತಮ್ಮ ತಪ್ಪನ್ನು ಅರಿತು-ಕೊಂಡರು ಮತ್ತು ಟಾಮ್ಲಿನ್ಸನ್ ಅವರನ್ನು ನೇರವಾಗಿ ಫೈನಲ್‌ಗೆ ಕಳುಹಿಸಲು ಗುಂಡಿಯನ್ನು ಒತ್ತಿದರು. ನಂತರ ಅವರು ಟಾಮ್ಲಿನ್ಸ್‌ನನ್ನು ಅಪ್ಪಿಕೊಂಡು ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು.

ಒಬ್ಬ ಸದ್ಗುಣಶೀಲ ವ್ಯಕ್ತಿಯು ನೀಡುವ ಪ್ರತ್ಯುತ್ತರವು ತನ್ನನ್ನು ತಿರಸ್ಕರಿಸುವವರು ಸಹ ತನ್ನನ್ನು ಪ್ರೀತಿಸುವಂತೆ ಮಾಡುತ್ತದೆ!



ಯಶಸ್ಸು ನೀಡುವ ಸದ್ಗುಣಗಳು!

- ಮಿತವ್ಯಯ, ಒಳ್ಳೆಯ ಚಿಂತನೆ, ಸುಧಾರಣೆ ಮತ್ತು ದುರಾಸೆಯಿಂದ ಮುಕ್ತವಾದ ಸಂತೃಪ್ತ ಮನಸ್ಸು ಇವುಗಳು ಒಟ್ಟಿಗೆ ಸೇರಿದಾಗ ಶಾಂತಿ ನೆಲೆಸುತ್ತದೆ.
- ಶಾಂತಿಯನ್ನು ಸಾಧಿಸಲು, ತಾಳ್ಮೆ, ಸಹಿಷ್ಣುತೆ ಮತ್ತು ರಾಜಿ ಈ ಮೂರು ವಿಷಯಗಳೂ ಅಪಾರವಾಗಿ ಬೇಕಾಗುತ್ತವೆ.
- ಒಳ್ಳೆಯದು ಮತ್ತು ಕೆಟ್ಟದ್ದು, ಯಶಸ್ಸು ಮತ್ತು ವೈಫಲ್ಯಗಳು ಆಲೋಚನೆಯ ಪರಿಣಾಮಗಳೇ ಆಗಿರುತ್ತವೆ. ಸುಖ ಅಥವಾ ದುಃಖ ಎರಡೂ ಆಲೋಚನೆಯನ್ನು ಮೀರಿದವುಗಳಲ್ಲ. ಆಲೋಚನೆಯ ಕೀಳುತನವು ನಿಮ್ಮ ಕೀಳುತನವೇ ಆಗಿರುತ್ತದೆ. ನಿಮ್ಮ ಆಲೋಚನೆಗಳನ್ನು ಎತ್ತರಕ್ಕೆ ಏರಿಸಿದರೆ ನೀವೇ ಎತ್ತರಕ್ಕೆ ಬೆಳೆಯುತ್ತೀರಿ. ನೀವು ಸಾಧಿಸುವ ಉನ್ನತಿಯ ಮೂಲಕ ಜಗತ್ತಿಗೂ ಉನ್ನತಿ ದೊರಕುವಂತೆ ಮಾಡಿ.
- ಬಿಟ್ಟು ಬಿಡಬೇಕಾದ್ದನ್ನು ಬಿಟ್ಟುಬಿಟ್ಟರೆ, ನೀವು ಗಳಿಸಬೇಕಾದ ಎಲ್ಲವೂ ಅಲ್ಲಿಯೇ ಇದೆ ಎಂಬುದನ್ನು ನೀವು ಅರಿತುಕೊಳ್ಳುತ್ತೀರಿ.
- ಸತ್ಯವು ನಮ್ಮನ್ನು ಬದಲಾಯಿಸಬಹುದೇ ಹೊರತು, ನಾವು ಒಮ್ಮೆ ಕೂಡ ಸತ್ಯವನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲ.
- ಖ್ಯಾತಿ ಎಂಬುದು ಒಬ್ಬ ಮನುಷ್ಯನಿಗೆ ಎಷ್ಟು ತಿಳಿದಿದೆ ಎಂಬುದರಲ್ಲಿಲ್ಲ. ಖ್ಯಾತಿ ಎಂಬುದು ಅವನು ಸಮಾಜಕ್ಕಾಗಿ ಏನು ಮಾಡುತ್ತಾನೆ ಎಂಬುದರಲ್ಲಿದೆ. ಒಳ್ಳೆಯ ಕಾರ್ಯಗಳ ಫಲದಿಂದ ಪ್ರಯೋಜನ ಪಡೆಯುವ ಜನರು ನೀಡುವ ಪ್ರೀತಿಯ ಗೌರವವೇ ಖ್ಯಾತಿ.
- ನಿಮಗೆ ಮತ್ತು ದೇಶಕ್ಕೆ ಒಳ್ಳೆಯದಾಗುವಂತೆ ಯೋಚಿಸುವುದು ಮತ್ತು ಮಾಡುವುದೇ ಶಾಶ್ವತವಾದ ಕಾರ್ಯ.
- ದೂರು ನೀಡುವುದು, ಆದೇಶಿಸುವುದು ಮತ್ತು ಒತ್ತಾಯಿಸುವುದು ಈ ಮೂರನ್ನೂ ನಾವು ಕೈಬಿಟ್ಟರೆ, ನಾವು ಎಲ್ಲರಿಗೂ ಒಳ್ಳೆಯವರಾಗುತ್ತೇವೆ. ಜಗತ್ತು ನಮಗೆ ಸ್ನೇಹಪರವಾಗಿರುತ್ತದೆ. ಈ ರೀತಿಯಲ್ಲಿ ನಾವು ನಮ್ಮನ್ನು ಪರಿವರ್ತಿಸಿಕೊಂಡಾಗ ಮಾತ್ರ ಶಾಂತಿ ದೊರಕುತ್ತದೆ. ಬೇರೆ ಯಾವುದೇ ರೀತಿಯಲ್ಲೂ ನಾವು ಶಾಂತಿಯನ್ನು ಸಾಧಿಸಲು ಸಾಧ್ಯವಿಲ್ಲ.
- ಜ್ಞಾನವನ್ನು ಭಾವನೆಗಳು ಗೆಲ್ಲುವುದು ಸಹಜ. ಜ್ಞಾನದಿಂದ ಭಾವನೆಗಳನ್ನು ಜಯಿಸುವುದೇ ಔನ್ನತ್ಯ.
- ಕೋಪ, ಚಿಂತೆ, ದುರಾಸೆ... ಈ ಮೂರೂ ಜೀವನದಲ್ಲಿ ಒಳಿತಿಗೆ

ಕರುಣಾಮೂರ್ತಿ ವೇದಾದ್ರಿ ಮಹರ್ಷಿ

ಕಾರಣವಾಗುವ ಮಾರ್ಗಗಳನ್ನು ತಡೆಯುತ್ತವೆ.

- ಬಡತನವು ಮೂರು ವಿಧಗಳಲ್ಲಿ ಉದ್ಭವಿಸಬಹುದು: ಬದುಕಿನಲ್ಲಿ ದೊರೆತಿರುವ ಅನುಕೂಲಗಳನ್ನು ವ್ಯರ್ಥವಾಗಿ ಹಾಳು ಮಾಡಿಕೊಳ್ಳುವುದು. ಯಾವುದನ್ನೂ ಸರಿಯಾಗಿ ಮಾಡದೆ ಸೋಮಾರಿತನದಿಂದಿರುವುದು. ಕಷ್ಟಪಟ್ಟು ಕೆಲಸ ಮಾಡದೆ ಅನ್ಯಾಯವಾಗಿ ಇತರರ ಸಂಪತ್ತನ್ನು ತೆಗೆದುಕೊಳ್ಳುವುದು. ಈ ಮೂರನ್ನೂ ನಾವು ಬದುಕಿನಲ್ಲಿ ತಪ್ಪಿಸಿದರೆ ಎಲ್ಲರೂ ಸಂತೋಷದಿಂದ ಬದುಕಬಹುದು ಮತ್ತು ಯಾವುದೇ ಕೊರತೆಯಿಲ್ಲದೆ ಸಂಪದ್ಭರಿತ ಜೀವನವನ್ನು ನಡೆಸಬಹುದು.
- ದೇವರನ್ನು ತಿಳಿದುಕೊಂಡವರು ದೇವರನ್ನು ಹುಡುಕುತ್ತಾರೆ. ದೇವರನ್ನು ಅರ್ಥ ಮಾಡಿಕೊಂಡವರು ಕರ್ತವ್ಯದಲ್ಲಿ ಮುಳುಗುತ್ತಾರೆ.
- ಅನಂತ ದೈವತ್ವದಂತೆಯೇ, ಎಲ್ಲೆಯಿಲ್ಲದ ದೈವಿಕತೆಯನ್ನು ತಾಳ್ಮೆ ನೀಡುತ್ತದೆ.
- ದೇಹ, ಜೀವ, ಜ್ಞಾನ... ಈ ಮೂರೂ ನಿಮಗೆ ಸೇರಿದವುಗಳಲ್ಲ. ನೀವು ಆಹಾರ ಸೇವಿಸುವುದರಿಂದ ಬೆಳೆಯುವ ದೇಹವೂ, ಜೀವವೂ; ಅನುಭವಗಳ ಹುಡುಕಾಟದಿಂದ ದೊರಕುವ ಜ್ಞಾನ ಈ ಮೂರೂ ದೇವರು ನಮಗೆ ನೀಡಿದವುಗಳೇ ಆಗಿವೆ. ನಿಮ್ಮಿಂದ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಅರ್ಥಮಾಡಿಕೊಳ್ಳಿ.
- ಆಲೋಚನೆ, ಮಾತು ಮತ್ತು ಕಾರ್ಯದ ಮೂಲಕ ಎಲ್ಲರಿಗೂ ಒಳ್ಳೆಯದನ್ನು ಮಾಡಲು ಯಾವಾಗಲೂ ಶ್ರಮಿಸಿ.
- ಒಬ್ಬ ವ್ಯಕ್ತಿಯು ಅಹಂಕಾರ, ಕೋಪ, ಸ್ವಾರ್ಥ, ದಾನ ಮಾಡದೇ ಇರುವುದು ಮತ್ತು ದ್ರೋಹ ಮಾಡುವುದನ್ನು ಕೈ ಬಿಟ್ಟರೆ ಅವನ ಆಯುಷ್ಯ ಹೆಚ್ಚಾಗುತ್ತದೆ.
- 'ಶಾಂತಿ' ಎಂಬ ಪದವು ತುಂಬಾ ಗಹನವಾದುದು. ಹೆಚ್ಚಿನ ಜನರಿಗೆ ಸುಖ ಮತ್ತು ದುಃಖ ಈ ಎರಡು ಭಾವನೆಗಳು ಮಾತ್ರ ತಿಳಿದಿರುತ್ತವೆ: ಸುಖ ಮತ್ತು ದುಃಖದ ನಡುವಿನ ಮನಸ್ಥಿತಿಯೇ ಶಾಂತಿ. ಆ ಶಾಂತಿಯನ್ನು ನಾವು ಎಷ್ಟರಮಟ್ಟಿಗೆ ಹೆಚ್ಚಿಸಿಕೊಳ್ಳುತ್ತೇವೋ ಅಲ್ಲಿಯೇ ಜ್ಞಾನ ಬೆಳೆಯಲು ಅವಕಾಶವಿರುವುದು.
- ಪ್ರತಿಯೊಂದು ಕ್ರಿಯೆಗೂ ಒಂದು ಪರಿಣಾಮವಿರುತ್ತದೆ. ಆ ಪರಿಣಾಮದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ತಮಗಾಗಲೀ ಅಥವಾ ಇತರರಿಗಾಗಲೀ, ವರ್ತಮಾನದಲ್ಲಾಗಲೀ ಅಥವಾ ಭವಿಷ್ಯದಲ್ಲಿಯಾಗಲೀ, ದೇಹಕ್ಕೆ ಅಥವಾ ಜೀವನಕ್ಕೆ ಹಾನಿಯಾಗದಂತೆ ನಡೆದುಕೊಳ್ಳಬೇಕು. ಆಗಲೇ ಶಾಂತಿ ಮತ್ತು ಸಂತೋಷ ಮೂಡುವುದು. ಜ್ಞಾನದ ಬೆಳವಣಿಗೆಗೆ ಮಾರ್ಗವೂ ದೊರಕುತ್ತದೆ.
- ಇತರರಿಗಾಗಿ ತ್ಯಾಗ ಮಾಡುವ ಮತ್ತು ಬದುಕುವ ಜೀವನವು ನಿಮ್ಮನ್ನು ಜೀವಂತವಾಗಿರಿಸುತ್ತದೆ ಮತ್ತು ಇತರರನ್ನೂ ಜೀವಂತವಾಗಿರಿಸುತ್ತದೆ.
- ಮಿತವ್ಯಯ, ಚಿಂತನಶೀಲತೆ, ಉತ್ತಮ ಚಾರಿತ್ರ್ಯ ಮತ್ತು ಸುಧಾರಣೆ–ಯ ಜೀವನವನ್ನು ನಡೆಸಬೇಕು. ಕುಟುಂಬದಲ್ಲಿ ಒಬ್ಬ ವ್ಯಕ್ತಿ ಮಾತ್ರ ಮಿತವ್ಯಯಿ, ಚಿಂತನಶೀಲ ಮತ್ತು ಸುಧಾರಣಾವಾದಿಯಾಗಿದ್ದರೆ ಸಾಕೇ? ಅದು ಸಾಕಾಗುವುದಿಲ್ಲ. ಕುಟುಂಬದಲ್ಲಿರುವ ಎಲ್ಲರೂ ಇದನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಒಪ್ಪಿಕೊಳ್ಳಬೇಕು. ಆಗ ಮಾತ್ರ ಕುಟುಂಬದಲ್ಲಿ ಶಾಂತಿ ನೆಲೆಸುತ್ತದೆ. ಸುಧಾರಣೆ ಮೂಡುತ್ತದೆ. ಮಿತವ್ಯಯವನ್ನೂ ಕಾಪಾಡಿಕೊಳ್ಳಬಹುದು ಮತ್ತು ಯೋಗಕ್ಷೇಮವನ್ನು ಕೂಡ ಸಾಧಿಸಬಹುದು.
- 10 ರೂಪಾಯಿ ನೋಟು ಮತ್ತು 100 ರೂಪಾಯಿ ನೋಟು ಎರಡೂ ಕಾಗದಗಳೇ. ಆದರೆ, ಎರಡರ ಮೌಲ್ಯವೂ ಬೇರೆ ಬೇ–ರೆಯಾಗಿರುತ್ತದೆ. ಪ್ರತಿಯೊಂದು ವಸ್ತುವಿನ ಉಪಯೋಗವನ್ನು ಅನುಸರಿಸಿಯೇ ಅದರ ಮೌಲ್ಯವೂ ಬದಲಾಗುತ್ತದೆ. ಆ ಮೌಲ್ಯವು ಬೇಡಿಕೆಯನ್ನು ಅವಲಂಬಿಸಿರುತ್ತದೆ. ಅದು ಹಲವಾರು ಜನರ ಶ್ರಮದಿಂದ ರೂಪಿಸಲ್ಪಟ್ಟಿದ್ದಾದರೆ ಅದರ ಮೌಲ್ಯವು ಮತ್ತಷ್ಟು ಹೆಚ್ಚಾಗುತ್ತದೆ. ವಸ್ತುವಿನ ಕಾರಣಕ್ಕಾಗಿ ಮೌಲ್ಯವು ಹೆಚ್ಚಾಗುತ್ತದೆಯೇ ಹೊರತು ಅದು ನನ್ನದು ಎಂಬ ಕಾರಣದಿಂದಾಗಿ ಅಲ್ಲ.
- ನಮ್ಮ ಆರೋಗ್ಯವು ಹಾನಿಗೊಳಗಾದರೂ, ಪ್ರತಿಯೊಬ್ಬರಲ್ಲೂ ತನ್ನನ್ನು ತಾನು ಸರಿಪಡಿಸಿಕೊಂಡು ಸಹಜ ಆರೋಗ್ಯ ಸ್ಥಿತಿಗೆ ಮರಳುವ ನೈಸರ್ಗಿಕವಾದ ರೋಗ ನಿರೋಧಕ ಸಾಮರ್ಥ್ಯ ಇದ್ದೇ ಇರುತ್ತದೆ. ಆದರೆ ನಮಗೇ ನಮ್ಮ ಸಾಮರ್ಥ್ಯದ ಅರಿವಿಲ್ಲ.
- ನೀವು ನಿಮ್ಮಲ್ಲಿ ಮೂಡುವ ಕೆಟ್ಟ ಆಲೋಚನೆಗಳಿಗೆ ಹೆದರಬೇಕು. ಅವುಗಳಿಗೆ ನಿಮ್ಮ ಮನಸ್ಸಿನಲ್ಲಿ ಎಂದಿಗೂ ಜಾಗ ಕೊಡಬೇಡಿ. ಒಳ್ಳೆಯ ಆಲೋಚನೆಗಳನ್ನು ಮಾಡಿ ಮತ್ತು ಅವುಗಳನ್ನು ಸದಾ ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿ. ಕೆಟ್ಟ ಆಲೋಚನೆಗಳಿಗೆ ಅವಕಾಶ ನೀಡಬೇಡಿ. ಅವು ಜೀವನದ ಒಂದು ನಿರ್ದಿಷ್ಟ ಸಮಯದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ನಿವಾರಿಸಲು ಮೂಡುವ ಆಲೋಚನೆಗಳಾಗಿರಬಹುದು ಅಥವಾ ಅದು ಜೀವನದ ಪ್ರಗತಿಗೆ ಕಾರಣವಾಗುವಂತಹ ಸಾಮಾನ್ಯ ಆಲೋಚನೆಯೂ ಆಗಿರಬಹುದು.
- ಮನುಷ್ಯ ಹೊರಟು ಹೋಗುವಾಗ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ. ಆದರೂ ಕೊನೆಯಲ್ಲಿ ಅವನ ಜೊತೆ ಏನು ಬರಬಹುದು ಎಂದು ನೋಡುವಾಗ, ಅವನು ಅದುವರೆಗೂ ಮಾಡಿದ ಕೆಲಸಗಳು, ಅವನು ಗಳಿಸಿಕೊಂಡ ಜ್ಞಾನ ಎಲ್ಲವೂ ಅವನನ್ನು ಪರಮಾತ್ಮನ ಹತ್ತಿರ ತೆಗೆದುಕೊಂಡು ಹೋಗುವ ಮಾರ್ಗಗಳಾಗಿರುತ್ತವೆ.
- ಕೋಪ ಮತ್ತು ಭಯ ಇವೆರಡೇ ಮನುಷ್ಯನ ಜೀವನವನ್ನು ನಾಶ ಮಾಡುವ ಎರಡು ಅಂಶಗಳು.
- ಭ್ರೂಣವು ಬೆಳೆದಂತೆಲ್ಲಾ ಗರ್ಭಕೋಶವು ಅದರ ಅಗತ್ಯಕ್ಕೆ ತಕ್ಕಂತೆ ಹಿಗ್ಗುತ್ತಾ ಹೋಗುತ್ತದೆ. ಅದೇ ರೀತಿ ಜ್ಞಾನವು ಬೆಳೆದಂತೆಲ್ಲಾ ಅದರ ಅನುಷ್ಠಾನಕ್ಕೆ ಅವಕಾಶಗಳು ಮತ್ತು ಸೌಲಭ್ಯಗಳು ಹೆಚ್ಚುತ್ತಲೇ ಇರುತ್ತವೆ.
- ಜಗತ್ತು ಬಯಸುವ ಅಥವಾ ಸಮಾಜಕ್ಕೆ ಅಗತ್ಯವಿರುವ ಎಲ್ಲವನ್ನೂ ನಾವು ಒದಗಿಸಲು ಸಾಧ್ಯವಿಲ್ಲ. ನಮ್ಮಿಂದ ಸಾಧ್ಯವಾದುದನ್ನು ಮಾಡುವುದರಲ್ಲಿ ಮಾತ್ರವೇ ನಾವು ತೃಪ್ತಿಯನ್ನು ಕಂಡುಕೊಳ್ಳಬಹುದು. ●

ಯಶಸ್ಸನ್ನು ತಂದುಕೊಡುವ ಸದ್ಗುಣಗಳು!

ಹೊಸದಾಗಿ ಕೆಲಸಕ್ಕೆ ಸೇರಿಕೊಂಡಿದ್ದ ಒಬ್ಬ ಯುವಕ ಮತ್ತು ಹೊಸದಾಗಿ ಒಂದು ಉದ್ಯಮವನ್ನು ಆರಂಭಿಸಿದ್ದ ಅವನ ಸ್ನೇಹಿತ ಇಬ್ಬರೂ ಸೇರಿ ಒಬ್ಬ ಸಂತನ ಬಳಿಗೆ ಬಂದರು. ಅವರು, "ನಾವಿಬ್ಬರೂ ನಮ್ಮ ಕೆಲಸ ಮತ್ತು ವೃತ್ತಿಯಲ್ಲಿ ಯಶಸ್ಸನ್ನು ಸಾಧಿಸುವುದು ಹೇಗೆ ಎಂಬುದರ ಕುರಿತು ಸಲಹೆ ನೀಡಿ" ಎಂದು ಕೇಳಿದರು. ಸಂತ ಅವರಿಗೆ ಬಲೂನ್ ಮತ್ತು ಫುಟ್‌ಬಾಲ್ ಬಳಸಿ ಒಂದು ಕಥೆಯನ್ನು ಹೇಳಿದ.

"ಆ ಬಲೂನ್ ಇದೆಯಲ್ಲಾ... ಅದನ್ನು ಊದಿ ದೊಡ್ಡದು ಮಾಡುವುದು ಸುಲಭ. ನೀವು ನಿಮ್ಮ ಬಾಯಿ ಮುಚ್ಚಿಕೊಂಡು ಅದನ್ನು ಊದಬೇಕು ಮತ್ತು ನೀವು ಅದನ್ನು ನಿಮಗೆ ಬೇಕಾದಷ್ಟು ದೊಡ್ಡದಾಗುವವರೆಗೆ ಊದಬಹುದು. ಆದರೂ ಅದು ಬಲೂನಿನ ನಿಜವಾದ ಆಕಾರವಲ್ಲ. ಅದು ನಿಮ್ಮ ಅಂಗೈಯಲ್ಲಿ ಅಡಗುವ ಗಾತ್ರವನ್ನು ಮಾತ್ರ ಹೊಂದಿರುತ್ತದೆ. ನೀವು ಅದನ್ನು ಊದಿದರೆ, ಅದು ತುಂಬಾ ದೊಡ್ಡದಾಗುತ್ತದೆ. ಆಗ ಅದು ನಿಮ್ಮ ಎರಡೂ ಕೈಗಳ ನಡುವೆ ಹೊಂದಿಕೊಳ್ಳುವುದಿಲ್ಲ.

ಚಿಕ್ಕ ವಯಸ್ಸಿನಲ್ಲಿಯೇ ನಿಮ್ಮೊಳಗೆ ಅಹಂಕಾರಕ್ಕೆ ಜಾಗ ಕೊಟ್ಟಾಗ ಹೀಗಾಗುತ್ತದೆ. ನಾವು ನಮ್ಮ ನಿಜವಾದ ಸಾಮರ್ಥ್ಯವನ್ನು ಮರೆತು ನಮಗೆ ಏನೇನೋ ದೊಡ್ಡದೊಡ್ಡ ವಿಷಯಗಳು ತಿಳಿದಿವೆ ಎಂದು ಊಹಿಸಿಕೊಳ್ಳುತ್ತೇವೆ. ನಮ್ಮ ನಿಜವಾದ ಸಾಮರ್ಥ್ಯವೇನೆಂದು ತಿಳಿಯದೆ, ನಾವು ಏನೇನೋ ಕೆಲಸಗಳನ್ನು ಮಾಡಲು ಪ್ರಯತ್ನಿಸುತ್ತೇವೆ ಮತ್ತು ಅದರಿಂದಾಗಿ ಎಲ್ಲದರಲ್ಲೂ ಸಮಸ್ಯೆಗಳು ಮತ್ತು ಹೋರಾಟಗಳನ್ನು ಎದುರಿಸುತ್ತೇವೆ.

ನಮ್ಮ ಸುತ್ತಮುತ್ತಲಿನ ಜನರು ಕೂಡ ಸುಮ್ಮನಿರುವುದಿಲ್ಲ. ಒಂದು ಸಣ್ಣ ಸೂಜಿಯಿಂದ ಬಲೂನನ್ನು ಚುಚ್ಚಿದರೂ, ಗಾಳಿಯು ಹೊರಹೋಗುತ್ತದೆ ಮತ್ತು ಬಲೂನಿನ ಗಾತ್ರವು ಕುಗ್ಗುತ್ತದೆ. ಅದೇ ರೀತಿ ಇತರರು ಕೂಡ ನಮ್ಮನ್ನು ಚುಚ್ಚಿ ಮಾತನಾಡಿ, ನಮ್ಮನ್ನು ಕುಗ್ಗಿಸಲು ಪ್ರಯತ್ನಿಸುತ್ತಾರೆ. ನಾವು ತಕ್ಷಣ ನಿರಾಶೆಗೊಳಗಾಗುತ್ತೇವೆ. ನಾವು ಯಾವುದಕ್ಕೂ ಅನರ್ಹರು ಎಂದು ಕಲ್ಪಿಸಿಕೊಳ್ಳುತ್ತೇವೆ. ಆಗಲೂ ನಾವು ವಿಫಲತೆಯನ್ನೇ ಎದುರಿಸುತ್ತೇವೆ.

ಆದರೆ ಒಂದು ಫುಟ್‌ಬಾಲ್‌ನೊಳಗೆ ಬಲೂನ್ ಅನ್ನು ತುಂಬಿಸುವುದು ತುಂಬಾ ಕಷ್ಟ. ಆದರೆ ನೀವು ಒಂದು ಸಲ ಅದರೊಳಗೆ ಗಾಳಿ ತುಂಬಿಸಿ ದೊಡ್ಡದಾಗಿಸಿದರೆ, ಇನ್ನು ಅದರಿಂದ ಸುಲಭವಾಗಿ ಗಾಳಿ ಹೊರ ಹೋಗುವುದಿಲ್ಲ. ಎಷ್ಟೇ ಒದೆತಗಳನ್ನಾಗಲೀ ತಾಳಿಕೊಂಡು ಅದು ಓಡುತ್ತಲೇ ಇರುತ್ತದೆ. ಅದನ್ನು ಸರಿಯಾಗಿ ಬಳಸುವುದನ್ನು ತಿಳಿದುಕೊಂಡರೆ, ಅದು ನಮಗೆ ಯಶಸ್ಸನ್ನು ಕೂಡ ತಂದು ಕೊಡುತ್ತದೆ. ಯಾವಾಗಲೂ ನಿಮ್ಮ ಉತ್ಸಾಹವನ್ನು ಹಿಂಬಾಲಿಸಿ. ಯಶಸ್ಸಿನ ಬಗ್ಗೆಯೇ ಯೋಚಿಸಿ. ಅದಕ್ಕಾಗಿ ಕೌಶಲ್ಯಗಳನ್ನು ಬೆಳೆಸಿಕೊಳ್ಳಿ!" ಎಂದು ಸಂತ ಹೇಳಿದ.

ಆ ಸಂತ ಹೇಳಿದಂತೆ ಪ್ರತಿಯೊಬ್ಬರೂ ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಮತ್ತು ಯಶಸ್ಸನ್ನು ಸಾಧಿಸಲು ಏನೇನು ಮಾರ್ಗಗಳಿವೆ? ನೋಡೋಣ ಬನ್ನಿ.

ವೇಗವಾಗಿ ಕಲಿಯಿರಿ

ನೀವು ಯಾವುದೇ ಕ್ಷೇತ್ರದಲ್ಲಿದ್ದರೂ, ಹೊಸ ತಂತ್ರಜ್ಞಾನಗಳು ಮತ್ತು ಪ್ರಸ್ತುತ ಕಾಲದಲ್ಲಿ ಆ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ತಕ್ಷಣ ತಿಳಿದುಕೊಳ್ಳಿ. ಪುಸ್ತಕಗಳಲ್ಲಿ ಮತ್ತು ಇಂಟರ್ನೆಟ್‌ನಲ್ಲಿ ಅದರ ಬಗ್ಗೆ ಹುಡುಕಿ ಮತ್ತು ತಿಳಿದುಕೊಳ್ಳಿ. ನಿಮ್ಮ ಕ್ಷೇತ್ರವನ್ನು ಮೀರಿ, ಪ್ರತಿದಿನ 'ನಾನು ಇಂದು ಕಲಿತದ್ದು' ಎಂಬುದು ಏನಾದರೂ ಇರಬೇಕು. ನೀವು ಕಲಿತ ವಿಷಯಗಳನ್ನು ನಿಮ್ಮ ಮಾತು ಮತ್ತು ಬರವಣಿಗೆಯಲ್ಲಿ ಬಳಸಿ.

ಕಲ್ಪಿಸಿಕೊಳ್ಳಿ

ನಿಮ್ಮ ಜೀವನದ ಪ್ರತಿಯೊಂದು ಅಂಶದ ಬಗ್ಗೆ ಆಹ್ಲಾದಕರ ಮತ್ತು ನಿರ್ಣಾಯಕ ಆಲೋಚನೆಗಳನ್ನು ಕಲ್ಪಿಸಿಕೊಳ್ಳಿ. ಯಾವುದೇ ಕ್ರಿಯೆಯಾಗಿದ್ದರೂ, ನಿಮ್ಮ ಮುಂದಿರುವ ಸಾಧ್ಯತೆಗಳನ್ನು ವಿಶ್ಲೇಷಿಸಿ. ಅವುಗಳನ್ನು ಮಾಡುವ ವಿಧಾನಗಳು ಮತ್ತು ಪರಿಣಾಮಗಳನ್ನು ಕಲ್ಪಿಸಿಕೊಳ್ಳಿ. ಒಳ್ಳೆಯದನ್ನು ಅನುಸರಿಸಿ. ಎಲ್ಲದರಲ್ಲೂ, ಈ ರೀತಿ ಕಲ್ಪಿಸಿಕೊಳ್ಳುವುದು ನಿಮಗೆ ಹೊಸ ಮಾರ್ಗಗಳನ್ನು ತೋರಿಸುತ್ತದೆ. ಈ ಕಲ್ಪನೆಗಳಲ್ಲಿ, 'ನಮಗೆ ಒಳ್ಳೆಯದು' ಯಾವುದು ಎಂಬುದು ಕೂಡ ಮುಖ್ಯವಾಗಿರುತ್ತದೆ.

ಆದ್ಯತೆಗಳನ್ನು ನಿರ್ಧರಿಸಿ

ಪ್ರತಿದಿನ, ಇಂದು ಏನು ಮಾಡಬೇಕೆಂಬುದನ್ನು ನಿರ್ಧರಿಸಿ. ನಂತರ ಅವುಗಳಲ್ಲಿ ಯಾವುದನ್ನು ಮೊದಲು ಮಾಡಬೇಕು ಎಂದು ಆದ್ಯತೆಗಳನ್ನು ನಿರ್ಧರಿಸಿ. ಪ್ರತಿಯೊಂದು ಕೆಲಸವನ್ನು ಪೂರ್ಣಗೊಳಿಸುವ ಸಮಯವನ್ನು ಸಹ ಮೊದಲೇ ನಿರ್ಧರಿಸಿ. ಇದು ನಿಮ್ಮ ಕೆಲಸಗಳನ್ನು ವೇಗವಾಗಿ ಪೂರ್ಣಗೊಳಿಸಲು ನಿಮಗೆ ಸಹಾಯ ಮಾಡುತ್ತದೆ. ನಿಮಗೆ ದೊಡ್ಡ ಕೆಲಸಗಳೂ ಇರುತ್ತವೆ, ಸಣ್ಣ ಕೆಲಸಗಳೂ ಇರುತ್ತವೆ ಮತ್ತು ಕಲಿಯಲು ಹಲವಾರು ಚಟುವಟಿಕೆಗಳಿರುತ್ತವೆ. ಯಾವುದು

ಮುಖ್ಯ ಮತ್ತು ಯಾವುದು ಮೊದಲು ಎಂಬುದನ್ನು ನಿರ್ಧರಿಸಿ ಮತ್ತು ಅದನ್ನು ಅನುಸರಿಸಿ.

ಹಣ ನಿರ್ವಹಣೆ ಮುಖ್ಯ

ಚಿಕ್ಕ ವಯಸ್ಸಿನಲ್ಲೇ ಹಣದ ಮೌಲ್ಯವೇನೆಂಬುದನ್ನು ಕಲಿಯಿರಿ. ನಿಮ್ಮ ಗಳಿಕೆ ಮತ್ತು ಖರ್ಚು ಮಾಡುವ ಅಭ್ಯಾಸಗಳಲ್ಲಿ ಅದನ್ನು ಪ್ರದರ್ಶಿಸಿ. ಅಗತ್ಯ ವಸ್ತುಗಳಿಗೆ ಮಾತ್ರ ಖರ್ಚು ಮಾಡುವುದು ಹೇಗೆ ಎಂದು ನೀವು ಕಲಿತಾಗ, ಉಳಿತಾಯದ ಅಭ್ಯಾಸವು ಸ್ವಾಭಾವಿಕವಾಗಿಯೇ ಬರುತ್ತದೆ.

ಬೆಳಗ್ಗೆ ಬೇಗ ಎದ್ದೇಳಿ

ನೀವು ಪ್ರತಿದಿನ ಬೆಳಿಗ್ಗೆ ಎದ್ದೇಳುವ ಸಮಯಕ್ಕಿಂತಲೂ ಇನ್ನೂ ಅರ್ಧ ಗಂಟೆ ಮುಂಚಿತವಾಗಿ ಎದ್ದೇಳಲು ನಿರ್ಧರಿಸಿ. ನೀವು ಪ್ರತಿದಿನವೂ ಕಳೆಯಲು ಇನ್ನೂ ಅರ್ಧ ಗಂಟೆ ಹೆಚ್ಚು ಸಮಯ ದೊರಕುತ್ತದೆ. ಇದು ನಿಮಗೆ ವರ್ಷಕ್ಕೆ ಸುಮಾರು 180 ಗಂಟೆಗಳನ್ನು ಹೆಚ್ಚುವರಿಯಾಗಿ ನೀಡುತ್ತದೆ. ಇದು ಇತರರಿಗಿಂತ ನಿಮಗೆ ಕೆಲಸ ಮಾಡಲು ಮತ್ತು ಕಲಿಯಲು ಹೆಚ್ಚಿನ ಸಮಯವನ್ನು ನೀಡುತ್ತದೆ.

ನಿಮ್ಮ ಗುರಿಗಳನ್ನು ಬರೆದಿಡಿ!

'ಇದೇ ನನ್ನ ಗುರಿ' ಎಂದು ಸ್ಪಷ್ಟವಾಗಿ ಬರೆದು, ಅದನ್ನು ನೀವು ಯಾವಾಗಲೂ ನೋಡಬಹುದಾದ ಜಾಗದಲ್ಲಿಡಿ ಮತ್ತು ಅದನ್ನು ಸಾಧಿಸಲು ನೀವು ಏನು ಮಾಡಬೇಕೆಂಬುದನ್ನು ಯೋಜಿಸಿ. ಈ ರೀತಿ ಬರೆದಿಟ್ಟುಕೊಂಡು ಅಥವಾ ಮನಸ್ಸಿನಲ್ಲಿಟ್ಟುಕೊಂಡು, ನಂತರ ತಮ್ಮ ಗುರಿಯತ್ತ ಪ್ರಯಾಣಿಸುವ ಜನರು, ಇತರರಿಗಿಂತ ಶೇಕಡಾ 50ರಷ್ಟು ವೇಗವಾಗಿ ತಮ್ಮ ಗುರಿಯನ್ನು ತಲುಪುತ್ತಾರೆ.

ವ್ಯಾಯಾಮ ಮತ್ತು ಆಹಾರ ಪದ್ಧತಿ ಅತ್ಯಗತ್ಯ

ಪ್ರತಿದಿನ ನಿಮ್ಮ ದೇಹವು ಬೆವರುವಂತೆ ಮಾಡುವ ಯಾವುದಾದರೂ ರೀತಿಯ ದೈಹಿಕ ಚಟುವಟಿಕೆ ಇರಬೇಕು. ನೀವು ಬೆಳಿಗ್ಗೆ ಎದ್ದಾಗ ವ್ಯಾಯಾಮ ಮಾಡಬಹುದು ಅಥವಾ ಸೈಕ್ಲಿಂಗ್, ಓಟ ಅಥವಾ ಕ್ರೀಡೆ ಹೀಗೆ ಯಾವುದಾದರೂ ಒಂದು ದಿನವೂ ಅತ್ಯಗತ್ಯ. ದೇಹಕ್ಕೆ ವ್ಯಾಯಾಮವನ್ನು ಒದಗಿಸುವಂತೆಯೇ, ಪೌಷ್ಟಿಕ ಆಹಾರವೂ ಅತ್ಯಗತ್ಯ. ಇವೆರಡೂ ನಿಮಗೆ ಅಪಾರ ಶಕ್ತಿಯನ್ನು ನೀಡುತ್ತವೆ.



ಶಕ್ತಿಯನ್ನು ಅನುಭವಿಸಿ

ಇತರರಿಗಿಂತ ಮೊದಲು ನಿಮ್ಮ ಸಾಮರ್ಥ್ಯಗಳನ್ನು ನೀವು ಅರಿತುಕೊಳ್ಳಿ. ನೀವು ಯಾವುದರಲ್ಲಿ ಉತ್ತಮರು, ಯಾವುದರಲ್ಲಿ ಹೆಚ್ಚು ಪ್ರತಿಭಾನ್ವಿತರು ಎಂಬುದನ್ನು ಅರಿತುಕೊಂಡು ಅದನ್ನು ಅಭಿವೃದ್ಧಿಪಡಿಸಲು ನಿಮ್ಮ ಸಮಯದ ಒಂದು ಭಾಗವನ್ನು ಮೀಸಲಿಡಿ ಮತ್ತು ನಿಮ್ಮ ದೌರ್ಬಲ್ಯಗಳನ್ನು ಗುರುತಿಸಿ ಅದನ್ನು ಸರಿಪಡಿಸಿಕೊಳ್ಳಿ. ಆಸಕ್ತಿಯೇ ಪ್ರತ್ಯೇಕ ವಿಷಯ, ಪ್ರತಿಭೆಯೇ ಇನ್ನೊಂದು ಪ್ರತ್ಯೇಕ ವಿಷಯ. ಎರಡನ್ನೂ ಗೊಂದಲಗೊಳಿಸಬೇಡಿ.

ಸ್ನೇಹಿತರನ್ನು ಮಾಡಿಕೊಳ್ಳಿ

ಎಲ್ಲರೊಂದಿಗೂ ಮಾತನಾಡಿ ಚೆನ್ನಾಗಿ ಹೊಂದಿಕೊಳ್ಳಿ. ಇತರರನ್ನು ಗೌರವಿಸಲು, ಸಹಾಯ ಮಾಡಲು ಮತ್ತು ಹಂಚಿಕೊಳ್ಳಲು ಯಾವಾಗಲೂ ಸಿದ್ಧರಾಗಿರಿ. ಒಳ್ಳೆಯ ಸುದ್ದಿ ಮತ್ತು ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಿ. ಗುರಿಯತ್ತ ಸಾಗುವಾಗ ಸ್ನೇಹಿತರ ಸಹಾಯವೂ ಮುಖ್ಯ.

ನಿಯಮಗಳನ್ನು ರೂಪಿಸಿ

"ಹೇಗೆ ಬೇಕಾದರೂ ಬದುಕಬಹುದು" ಎಂದು ಹೇಳುವ ಅನೇಕರಿದ್ದಾರೆ. "ನಾನು ಬದುಕಬೇಕಾದದ್ದು ಹೀಗೆಯೇ" ಎಂದು ತಮಗಾಗಿ ನಿಯಮಗಳನ್ನು ಹಾಕಿಕೊಳ್ಳುವವರು ಯಾವಾಗಲೂ ಜೀವನದಲ್ಲಿ ಯಶಸ್ವಿಯಾಗುತ್ತಾರೆ. "ನಾನು ಹೀಗೇ ಇರುತ್ತೇನೆ. ನಾನು ಈ ಎಲ್ಲಾ ಗುಣಗಳ ಸಂಯೋಜನೆಯಾಗಿರುತ್ತೇನೆ" ಎಂಬಂತಹ ಕೆಲವು ನಿಯಮಗಳನ್ನು ನಿಮಗಾಗಿ ರೂಪಿಸಿಕೊಳ್ಳಿ. "ಯಾರನ್ನೂ ಕೀಟಲೆ ಮಾಡಿ, ಅಪಹಾಸ್ಯ ಮಾಡಿ ನಾನು ನಗುವುದಿಲ್ಲ", "ನನಗೆ ಕೊಟ್ಟ ಕೆಲಸವನ್ನು ನಾನು ಕೊಟ್ಟ ಸಮಯದೊಳಗೆ ತಡಮಾಡದೆ ಪೂರ್ಣಗೊಳಿಸುತ್ತೇನೆ..." ಎಂಬಂತಹ ಪ್ರಾಮಾಣಿಕ ನಿಯಮಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಅನುಸರಿಸಿ. ಇವು ನಿಮ್ಮ ಯಶಸ್ಸಿನ ಸಾಧ್ಯತೆಗಳನ್ನು ಹೆಚ್ಚಿಸುತ್ತವೆ. ●

ನಿಮ್ಮನ್ನು ಸುಂದರವಾಗಿಸುವ ೮ ಸದ್ಗುಣಗಳು!



ಅನೇಕ ಜನರು ತಮ್ಮನ್ನು ಸುಂದರವಾಗಿಸಿಕೊಳ್ಳಲು ಸಾಕಷ್ಟು ಹಣವನ್ನು ಖರ್ಚು ಮಾಡುತ್ತಾರೆ. ಇದರಿಂದಾಗಿ ಅವರ ಬಾಹ್ಯ ನೋಟ ಸುಂದರವಾಗಿ ಕಾಣಬಹುದು. ಮೊದಲ ಪರಿಚಯಕ್ಕೆ ಬೇಕಾದರೆ ಈ ಮೇಕಪ್ ಸಹಾಯಕವಾಗಿರಬಹುದು. ಆದರೆ ಅದರ ನಂತರ, ನಿಮ್ಮನ್ನು ಅವರು ನಿರಂತರವಾಗಿ ಗೌರವಿಸಲು ಮತ್ತು ಪ್ರೀತಿಸಲು ನಿಮ್ಮಲ್ಲಿ ಕೆಲವು ಅಭ್ಯಾಸಗಳು ಅವಶ್ಯಕವಾಗಿರಬೇಕು. ಆ ಅಭ್ಯಾಸಗಳು ನಿಮ್ಮನ್ನು ಇನ್ನೂ ಸುಂದರವಾಗಿಸುತ್ತವೆ :

- ನಿಮ್ಮ ಸ್ನೇಹಿತರು ಮತ್ತು ಸಂಬಂಧಿಕರಿಗೆ ಅನಿರೀಕ್ಷಿತ ಸಮಯಗಳಲ್ಲಿ ಉಡುಗೊರೆಗಳನ್ನು ನೀಡಿ ಅವರನ್ನು ಅಚ್ಚರಿಗೊಳಿಸಿ. ಅವರು ಸಂಕಷ್ಟದಲ್ಲಿದ್ದಾಗ ಸಾಂತ್ವನದ ಮಾತುಗಳನ್ನಾಡಿ. ಜೀವನದಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ ಎಲ್ಲರೂ ನಿಮ್ಮ ಜೊತೆಗೆ ಇರುತ್ತಾರೆ. ಆದರೆ ಬದುಕಿನಲ್ಲಿ ನಿಮಗೆ ಸಂಕಟಗಳು ಎದುರಾದಾಗಲೂ ನಾನು ನಿಮ್ಮ ಜೊತೆಗೇ ಇರುತ್ತೇನೆ ಎಂಬುದನ್ನು ಅವರಿಗೆ ಅರ್ಥ ಮಾಡಿಸಿ.
- ನೀವು ಮಾಡಬಹುದಾದ ಕೆಲಸಗಳನ್ನು ಮಾತ್ರವೇ ಮಾಡುವುದಾಗಿ ಒಪ್ಪಿಕೊಳ್ಳಿ. ಅಸಾಧ್ಯವಾದದ್ದನ್ನು ನೇರವಾಗಿಯೇ ತಿರಸ್ಕರಿಸಿ. ನಿಮ್ಮ ಸ್ನೇಹಿತರು ಅಥವಾ ಸಂಬಂಧಿಕರ ಕೆಲಸಗಳ ಬಗ್ಗೆ ನಿಮಗೆ ನಕಾರಾತ್ಮಕ ಅಭಿಪ್ರಾಯಗಳಿದ್ದರೂ ಸಹ, ಅದನ್ನು ನೋಯಿಸದೆ ಹೇಳಿ. 'ಹೊರಗೊಂದು ಒಳಗೊಂದು ಮಾತನಾಡದ, ನೇರ ನಡೆನುಡಿಯ ವ್ಯಕ್ತಿ' ಎಂಬ ಹೆಸರನ್ನು ಗಳಿಸಿ.
- ಅಗತ್ಯ ಸಮಯದಲ್ಲಿ ಅಪರಿಚಿತರಿಗೂ ಸಹಾಯ ಮಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳಿ. ಎರಡೂ ಕೈಗಳಲ್ಲಿ ಚೀಲಗಳನ್ನು ಹಿಡಿದಿರುವ ಯಾರಿಗಾದರೂ ಬಾಗಿಲು ತೆರೆದು ಬಿಡುವುದು ಅಥವಾ ಮೆಟ್ಟಿಲುಗಳನ್ನು ಹತ್ತಲು ಕಷ್ಟಪಡುತ್ತಿರುವ ವೃದ್ಧರಿಗೆ ಸಹಾಯ ಹಸ್ತ ನೀಡುವುದು... ಇತ್ಯಾದಿ ಸಹಾಯಗಳು ನಿಮ್ಮನ್ನು ತುಂಬಾ ಸುಂದರವಾಗಿಸುತ್ತವೆ.
- ನಿಮ್ಮ ಕ್ಷೇತ್ರದಲ್ಲಿ ನಿಮಗಿಂತ ಉತ್ತಮರು ಇದ್ದರೆ, ಅವರಿಂದ ಕಲಿಯಿರಿ. ಅನುಭವ ಮತ್ತು ಜ್ಞಾನವನ್ನು ಗಳಿಸುವ ವಿಷಯದಲ್ಲಿ ಅಹಂಕಾರ ಬೇಡ. ನಾಲ್ಕು ಅಥವಾ ಐದು ಜನರು ಒಟ್ಟಿಗೆ ಕುಳಿತು ಮಾತನಾಡುತ್ತಿರುವಾಗ ಅವರ ಸಂಭಾಷಣೆ ಕೆಲವೇ ನಿಮಿಷಗಳಲ್ಲಿ ನಿಂತು ಬಿಡುತ್ತದೆ. ಕಾರಣವೆಂದರೆ ಅವರಲ್ಲಿ ಮಾತನಾಡಲು ಆಸಕ್ತಿದಾಯಕವಾದ ವಿಷಯ ಏನೂ ಇರುವುದಿಲ್ಲ. ನೀವು ಇತರರಿಗೆ ಆಸಕ್ತಿಯನ್ನುಂಟು ಮಾಡುವ ಕನಿಷ್ಠ ಹತ್ತು ಹೊಸ ವಿಷಯಗಳ ಬಗ್ಗೆ ಮಾತನಾಡಲು ಸಾಧ್ಯವಾದರೆ, ಎಲ್ಲರೂ ನಿಮ್ಮೊಂದಿಗೆ ಸಂವಹನ ನಡೆಸಲು ಆಸಕ್ತಿ ಹೊಂದಿರುತ್ತಾರೆ. ಅದಕ್ಕಾಗಿ, ವಿಶ್ವ ಘಟನೆಗಳನ್ನು ತಿಳಿದಿಟ್ಟುಕೊಳ್ಳಿ. ತಂತ್ರಜ್ಞಾನದಿಂದ ಹಿಡಿದು ಫಿಟ್‌ನೆಸ್‌ವರೆಗೆ ಎಲ್ಲದರ ಬಗ್ಗೆ ಇತ್ತೀಚಿನ ಸುದ್ದಿಗಳನ್ನು ಅರಿತುಕೊಳ್ಳಿ.
- ನಿಮಗೆ ತಿಳಿದಿರುವ ಜನರೊಂದಿಗೆ ಮಾತನಾಡುವುದು ಸುಲಭ. ನಿಮಗೆ ಪರಿಚಯವಿಲ್ಲದ ಹೊಸ ಜನರೊಂದಿಗೆ ಸಂಭಾಷಣೆಯನ್ನು ಪ್ರಾರಂಭಿಸುವುದು ಮತ್ತು ನಿರ್ವಹಿಸುವುದು ದೊಡ್ಡ ಸವಾಲು. ಅವರಿಗೆ ಯಾವುದರಲ್ಲಿ ಆಸಕ್ತಿ ಇದೆ ಎಂಬುದನ್ನು ನೀವು ಕೆಲವೇ ನಿಮಿಷಗಳಲ್ಲಿ ಕಂಡುಹಿಡಿಯಬೇಕು ಮತ್ತು ಅದಕ್ಕೆ ತಕ್ಕಂತೆ ಮಾತನಾಡಬೇಕು. ಆ ಕಲೆಯನ್ನು ಅಭ್ಯಾಸ ಮಾಡಿಕೊಳ್ಳಿ.
- 'ಧನ್ಯವಾದಗಳು'... ಜಗತ್ತಿನಲ್ಲಿ ಹೆಚ್ಚು ಬಳಸಲಾಗುವ ಪದ ಬಹುಶಃ ಇದೇ ಇರಬಹುದು, ಇರಲಿ. ಈ ಪದದ ಶಕ್ತಿ ಅಪಾರವಾದುದು. ನಿಮಗೆ ಯಾರು ಸಹಾಯ ಮಾಡಿದರೂ ಅಥವಾ ಏನೇ ಸಹಾಯ ಮಾಡಿದರೂ, ಧನ್ಯವಾದ ಹೇಳಲು ಎಂದಿಗೂ ಮರೆಯಬೇಡಿ.
- ಕಳೆದುಹೋದದ್ದನ್ನು ಮರಳಿ ಪಡೆಯಬಹುದು. ಆದರೆ ನೀವು ಸಮಯವನ್ನು ಕಳೆದುಕೊಂಡರೆ, ಅದನ್ನು ಮರಳಿ ಪಡೆಯಲು ಸಾಧ್ಯವಿಲ್ಲ. ನಿಮ್ಮ ಸಮಯವನ್ನು ಬುದ್ಧಿವಂತಿಕೆಯಿಂದ ಕಳೆಯಿರಿ ಮತ್ತು ಅಧ್ಯಯನ ಮತ್ತು ಅನುಭವದ ಮೂಲಕ ನಿಮ್ಮನ್ನು ಸುಧಾರಿಸಿಕೊಳ್ಳಲು ಪ್ರತಿದಿನ ಸ್ವಲ್ಪ ಸಮಯವನ್ನು ಕಳೆಯಿರಿ. ●

RAMYYAM®
SAREES • KURTIS
Product by
RAMRAJ


Culture India™
TRADITIONAL KURTA ● MATCHING DHOTIS
by
RAMRAJ
PURE
Festive
EXPRESSION


LINEN PARK®
SHIRTS
by
RAMRAJ©
INTO
THE
LINEN
CRAFTED FOR THE MODERN VOYAGE

RAMRAJ©
Mrithu®
Bamboo Towels
Gentle
as a
Feather

RAMRAJ ಕಾಟನ್ ಭಾರತೀಯ ಸಂಸ್ಕೃತಿ

ನಿಮ್ಮ ಮನೆಗೇ ಬರಬೇಕೇ?

ಬಿಳುಪು

ಚಂದಾದಾರರಾಗಿ!

'ಉನ್ನತವಾಧ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

ವಾರ್ಷಿಕ ಚಂದಾ ರೂ. 200
ದ್ವೈವಾರ್ಷಿಕ ಚಂದಾ ರೂ. 380

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

ವಿಳಾಸ : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.
ಪೋನ್ : 0421-4304106, 9842274137.

ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಪೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

ಬ್ಯಾಂಕ್ ಖಾತೆಯ ವಿವರ Venmaii
A/C No: 1809135000000299
Karur Vysya Bank,Tirupur SR Nagar Branch
IFSC Code: KVBL0001809.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
ರೂ.~~200~~ ರೂ.125 ಮಾತ್ರ	ರೂ.~~380~~ ರೂ.250 ಮಾತ್ರ

ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
ರೂ.~~200~~ ರೂ.125 ಮಾತ್ರ	ರೂ.~~380~~ ರೂ.250 ಮಾತ್ರ

ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.

26 ಅಕ್ಷರಗಳಲ್ಲಿ ಸದ್ಗುಣಗಳು!

(A) Appreciation : ಇತರರ ಸಾಧನೆಗಳನ್ನು ಮನಸಾರೆ ಅಭಿನಂದಿಸಿ.

(B) Behaviour: ನಗುತ್ತಾ ಪ್ರೀತಿಯಿಂದ ಮಾತನಾಡಲು ಸಾಕಷ್ಟು ಸಮಯವನ್ನು ವ್ಯಯಿಸಿ.

(C) Compromise: ಮನಬಿಚ್ಚಿ ಮಾತನಾಡಿ ಯಾವುದನ್ನೇ ಆಗಲಿ ಸುಮುಖವಾಗಿ ಪರಿಹರಿಸಿಕೊಳ್ಳಿ.

(D) Depression : ಮಾನಸಿಕ ಒತ್ತಡ ಎಂಬುದು ಆಪತ್ಕಾರಿಯಾದ ಕಾಯಿಲೆ. ಅದನ್ನು ಹತ್ತಿರ ಸುಳಿಯಲು ಬಿಡಬೇಡಿ.

(E) Ego : ಇತರರಿಗಿಂತಲೂ ನೀವೇ ಎತ್ತರದಲ್ಲಿದ್ದೀರೆಂದು ಭಾವಿಸಿ ಗರ್ವ ಪಡಬೇಡಿ.

(F) Forgive : ನೀವು ಖಂಡಿಸಲೂ, ದಂಡಿಸಲೂ ಸಾಕಷ್ಟು ಕಾರಣಗಳಿದ್ದರೂ ಕ್ಷಮಿಸಲು ಯಾವುದಾದರೂ ಒಂದೇ ಒಂದು ಕಾರಣವಾದರೂ ಇದೆಯೇ ಎಂದು ಯೋಚಿಸಿ ನೋಡಿ.

(G) Genuineness : ಯಾವುದೇ ವಿಷಯವನ್ನಾಗಲೀ ಪ್ರಾಮಾಣಿಕತೆಯಿಂದ ನಿರ್ವಹಿಸಿ.

(H) Honesty : ತಪ್ಪು ನಿಮ್ಮ ಕಡೆಯಿಂದ ನಡೆದಿದ್ದಲ್ಲಿ ಕ್ಷಮೆ ಕೇಳಲು ಹಿಂಜರಿಯಬೇಡಿ.

(I) Inferiority Complex : 'ನಾನೇಕೆ ಹೀಗಿದ್ದೇನೆ' ಎಂಬ ಕೀಳರಿಮೆಯ ಮನೋಭಾವವನ್ನು ಬಿಟ್ಟುಬಿಡಿ.

(J) Jealousy : ಅಸೂಯೆ ಬೇಡವೇ ಬೇಡ. ಅದು ನಿಮ್ಮನ್ನು ಕೊಲ್ಲದೆ ಬಿಡಲಾರದು.

(K) Kindness : ವಿಧೇಯತೆಯಿಂದ ನಡೆದುಕೊಳ್ಳಿ. ಮಧುರವಾದ ನುಡಿಗಳನ್ನು ಮಾತ್ರವೇ ಆಡಿ.

(L) Loose Talk : ಸಂಬಂಧವೇ ಇಲ್ಲದ ಹಾಗೆ, ಅರ್ಥವೇ ಇಲ್ಲದ ಹಾಗೆ ಮಾತನಾಡಬೇಡಿ. ಅದರ ಪರಿಣಾಮಗಳ ಬಗ್ಗೆ ಯೋಚಿಸಿ.

(M) Misunderstanding : ಮನುಷ್ಯರನ್ನೂ ಅವರು ಆಡುವ ಮಾತುಗಳನ್ನೂ ತಪ್ಪಾಗಿ ಅರ್ಥ ಮಾಡಿಕೊಳ್ಳಬೇಡಿ.

(N) Neutral : ಯಾವಾಗಲೂ ಯಾವುದೇ ವಿಷಯದಲ್ಲೇ ಆದರೂ ಪ್ರಾಮಾಣಿಕರಾಗಿರಿ.

(O) Over Expectation : ಅಳತೆಗೆ ಮೀರಿದ ನಿರೀಕ್ಷೆಗಳನ್ನಿಟ್ಟುಕೊಳ್ಳಬೇಡಿ. ಅಗತ್ಯಕ್ಕಿಂತ ಹೆಚ್ಚು ಆಸೆಗಳನ್ನು ಇಟ್ಟುಕೊಳ್ಳಬೇಡಿ.

(P) Patience : ಕೆಲವು ಸಂದರ್ಭಗಳಲ್ಲಿ ಕೆಲವು ಸಂಕಟಗಳನ್ನು ಅನುಭವಿಸಲೇ ಬೇಕಾಗಬಹುದು ಎಂದು ಅರ್ಥ ಮಾಡಿಕೊಳ್ಳಿ.

(Q) Quietness : ಮೌನವೇ ಸರಿಯಾದುದು ಎಂದು ಅನ್ನಿಸುವ ಸಮಯಗಳಲ್ಲಿ, ಸಾಧ್ಯವಾದಷ್ಟೂ ಮಾತನಾಡದೆ ಸುಮ್ಮನಿದ್ದು ಬಿಡಿ.

(R) Roughness : ಅಸಭ್ಯ ಪದಗಳು ಮತ್ತು ಅನಗತ್ಯ ಒರಟುತನವನ್ನು ತಪ್ಪಿಸಿ.

(S) Stubbornness : ನೀವು ಏನು ಹೇಳಿದ್ದೀರಿ ಮತ್ತು ಏನು ಮಾಡಿದ್ದೀರಿ ಎಂಬುದರ ಬಗ್ಗೆ ಹಠಮಾರಿಯಾಗಬೇಡಿ.

(T) Twisting : ಇಲ್ಲಿ ಕೇಳಿದ್ದನ್ನು ಅಲ್ಲಿ ಮತ್ತು ಅಲ್ಲಿ ಕೇಳಿದ್ದನ್ನು ಇಲ್ಲಿ ಹೇಳುವುದನ್ನು ನಿಲ್ಲಿಸಿ.

(U) Underestimate : ಯಾರನ್ನೂ ಕೀಳಾಗಿ ಅಂದಾಜು ಮಾಡಬೇಡಿ. ಬಡವರನ್ನು ಸಹ ಗೌರವಿಸಿ.

(V) Voluntary : ಇತರರೇ ಮೊದಲು ಆರಂಭಿಸಲಿ ಎಂದು ಕಾಯುವ ಬದಲು, ನೀವೇ ಮೊದಲು ಸಂಭಾಷಣೆಯನ್ನು ಪ್ರಾರಂಭಿಸಿ.

(W) Wound : ನಿಮ್ಮ ಮಾತುಗಳು ಮತ್ತು ಕಾರ್ಯಗಳು ಯಾರ ಭಾವನೆಗಳನ್ನೂ ನೋಯಿಸುವಂತಿರಬಾರದು.

(X) Xerox : ಇತರರು ನಿಮ್ಮನ್ನು ಹೇಗೆ ನಡೆಸಿಕೊಳ್ಳಬೇಕೆಂದು ನೀವು ಬಯಸುತ್ತೀರೋ ಹಾಗೆಯೇ ಅವರನ್ನು ನೀವು ನಡೆಸಿಕೊಳ್ಳಿ.

(Y) Yield : ಸಾಧ್ಯವಾದಷ್ಟೂ ಇತರರಿಗೆ ನೀಡಿ. ಕೊಡುವವರು ಎಂದಿಗೂ ಕೆಟ್ಟು ಹೋಗುವುದಿಲ್ಲ.

(Z) Zero : ಇವೆಲ್ಲವನ್ನೂ ಬದುಕಿನಲ್ಲಿ ಅನುಸರಿಸಿದರೆ, ಸಮಸ್ಯೆಗಳು ಶೂನ್ಯವಾಗುತ್ತದೆ.

ಗೋಡೆಗಳು ಬೇಡ!

ಖ್ಯಾತ ಹಿಂದಿ ನಟ ಜಾಕಿ ಶರಾಫ್ ಸಂದರ್ಶನವೊಂದರಲ್ಲಿ ತಮ್ಮ ಜೀವನದ ಬಗ್ಗೆ ಹೇಳಿದ್ದು ಎಲ್ಲರನ್ನೂ ಯೋಚಿಸುವಂತೆ ಮಾಡುತ್ತದೆ.

"ನಾನು ಬಾಲ್ಯದಲ್ಲಿ ಬಡತನದಲ್ಲಿ ಬೆಳೆದೆ. ನಾವು ಒಂದೇ ಕೋಣೆಯ ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದೆವು. ನನ್ನ ತಂದೆ ಮತ್ತು ತಾಯಿ ನನ್ನೊಂದಿಗೆ ಮಲಗುತ್ತಿದ್ದರು. ನನಗೆ ಹುಷಾರಿಲ್ಲದ ದಿನಗಳಲ್ಲಿ ರಾತ್ರಿ ನಿದ್ರೆಯಲ್ಲಿ ಕೆಮ್ಮಿದರೂ ಇಬ್ಬರೂ ಎಚ್ಚರಗೊಳ್ಳುತ್ತಿದ್ದರು. ನನ್ನ ತಂದೆ ಔಷಧಿ ನೀಡಲು ಆತುರಪಡುತ್ತಿದ್ದರು. ನನ್ನ ತಾಯಿ ನನ್ನನ್ನು ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡು ಅಲುಗಾಡಿಸುತ್ತಿದ್ದರು. ನಾನು ಚೆನ್ನಾಗಿ ನಿದ್ದೆ ಮಾಡುತ್ತಿದ್ದೇನೆ ಎಂದು ಖಚಿತಪಡಿಸಿಕೊಳ್ಳುವುದಕ್ಕಾಗಿ ಇಬ್ಬರೂ ಎಚ್ಚರವಾಗಿರುತ್ತಿದ್ದರು."

ನಾನು ದೊಡ್ಡವನಾದಾಗ ನಟನಾದೆ. ಹಣ ಬಂತು. ನೆಮ್ಮದಿಯೂ ಬಂತು. ಮುಂಬೈನಲ್ಲಿ ಒಂದು ದೊಡ್ಡ ಮನೆ ಕಟ್ಟಿದೆ. ನನಗಾಗಿ ಅದರಲ್ಲಿ ಒಂದು ಕೋಣೆ

ಆ ಮಗುವೂ ಮುಖ್ಯ

ದೊಡ್ಡ ನಗರಗಳಲ್ಲಿ ಟ್ಯಾಕ್ಸಿ ಸವಾರಿಗಳಲ್ಲಿ ಶೇರಿಂಗ್ ವ್ಯವಸ್ಥೆಗೆ ಅವಕಾಶ ಇರುತ್ತದೆ. ಬೇರೆ ಬೇರೆ ಸ್ಥಳಗಳಲ್ಲಿ ಹತ್ತುವ ಜನರು ಅಪರಿಚಿತರೊಂದಿಗೆ ಒಟ್ಟಿಗೆ ಪ್ರಯಾಣಿಸುತ್ತಾರೆ. ಒಂದೇ ಪ್ರದೇಶಕ್ಕೆ ಹೋಗುವ ಮೂರು ಅಥವಾ ನಾಲ್ಕು ಜನರು ಒಟ್ಟಿಗೆ ಪ್ರಯಾಣಿಸಲು ಸಾಧ್ಯವಾಗುವಂತೆ ಈ ಶೇರಿಂಗ್ ಪ್ರವಾಸಗಳನ್ನು ಆಯೋಜಿಸಲಾಗುತ್ತದೆ.

ಅದು ಅಂತಹುದೇ ಒಂದು ಟ್ಯಾಕ್ಸಿ ಸವಾರಿ. ಹಿಂದಿನ ಸೀಟಿನಲ್ಲಿ ಇಬ್ಬರು ಮಹಿಳೆಯರು ಕುಳಿತಿದ್ದರು. ಅವರಲ್ಲಿ ಒಬ್ಬರು ಗರ್ಭಿಣಿಯಾಗಿದ್ದರು ಮತ್ತು ಚಾಲಕ ಅದನ್ನು ಮೊದಲೇ ಗಮನಿಸಿದ್ದ. ಒಬ್ಬ ಯುವಕ ಮುಂದಿನ ಸೀಟಿನಲ್ಲಿ ಹತ್ತಿ ಕುಳಿತುಕೊಂಡ. ಅವನು ಫೋನ್‌ನಲ್ಲಿ ಯಾರೊಂದಿಗೋ ಜಗಳವಾಡುತ್ತಿದ್ದ ಮತ್ತು ಕೋಪದಿಂದ ಅಸಭ್ಯ ಭಾಷೆಯನ್ನು ಬಳಸಲು ಪ್ರಾರಂಭಿಸಿದ. ಚಾಲಕ ಮಧ್ಯ ಪ್ರವೇಶಿಸಿ, "ನೀವು ಒಬ್ಬ ಪ್ರಯಾಣಿಕ. ನಾನು ನಿಮ್ಮನ್ನು ಗೌರವದಿಂದ ನಡೆಸಿಕೊಳ್ಳಬೇಕು. ಆದರೆ, ಮಹಿಳೆಯರ ಮುಂದೆ ಇಂತಹ ಪದಗಳನ್ನು ಬಳಸಬೇಡಿ" ಎಂದು ಖಂಡಿತವಾಗಿ ಹೇಳಿದ. ಅವನು ಫೋನ್ ಅನ್ನು ಕಟ್ ಮಾಡಿದ.

ಮುಂದೆ, ಗರ್ಭಿಣಿ ಮಹಿಳೆ ತಾನು ಇಳಿಯಬೇಕಾದ ಸ್ಥಳ ಬಂದಿತು. ಆದರೆ ವಾಹನವು ಸಾಮಾನ್ಯ ಮಾರ್ಗದ ಬದಲು ಪರ್ಯಾಯ ಮಾರ್ಗವನ್ನು ತೆಗೆದುಕೊಂಡಿತು. "ನೀವು ಹೀಗೆ ತಿರುಗಿದರೆ, ಅದು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಮತ್ತು ಹೆಚ್ಚು ವೆಚ್ಚವಾಗುತ್ತದೆ" ಎಂದು ಗರ್ಭಿಣಿ ಮಹಿಳೆ ಕೋಪದಿಂದ ಹೇಳಿದಳು. ಚಾಲಕ ತಾಳ್ಮೆಯಿಂದ ಉತ್ತರಿಸಿದ. "ಸಾಮಾನ್ಯವಾಗಿ ಹೋಗುವ ಆ ರಸ್ತೆ ಕೆಟ್ಟದಾಗಿದೆ. ಆದ್ದರಿಂದ ನಾನು ಉತ್ತಮ ರಸ್ತೆಗೆ ತೆಗೆದುಕೊಳ್ಳುತ್ತಿದ್ದೇನೆ. ನಿಮ್ಮ ಗರ್ಭದಲ್ಲಿರುವ ಮಗುವಿನ ಯೋಗಕ್ಷೇಮ ನನಗೆ ಮುಖ್ಯವಲ್ಲವೇ?" ಎಂದು ಅವನು ಹೇಳಿದ. ಹೆಚ್ಚುವರಿ ಶುಲ್ಕ ಕೂಡ ವಿಧಿಸದ ಚಾಲಕನಿಂದ, ಮಗು ಜನಿಸುವ ಮೊದಲೇ ಸದ್ಗುಣಗಳನ್ನು ಕಲಿತಿರಬೇಕು!

ಕಟ್ಟಿಸಿದೆ. ನನ್ನ ತಾಯಿಗಾಗಿಯೂ ಒಂದು ಪ್ರತ್ಯೇಕವಾದ ದೊಡ್ಡ ಕೋಣೆಯನ್ನು ಕಟ್ಟಿಸಿದೆ. ಚಿಕ್ಕಂದಿನಿಂದಲೂ ಬಡತನವನ್ನೇ ಅನುಭವಿಸಿದ್ದ ನನ್ನ ತಾಯಿ ಆ ಕೋಣೆಯಲ್ಲಿ ಸಂತೋಷದಿಂದ ಬದುಕುತ್ತಾರೆ ಎಂದು ನಾನು ನಂಬಿದ್ದೆ. ಒಂದು ರಾತ್ರಿ ಚೆನ್ನಾಗಿ ನಿದ್ರೆ ಮಾಡಿ, ಮರುದಿನ ಅವಳನ್ನು ಎಬ್ಬಿಸಲು ಅವಳ ಕೋಣೆಗೆ ಹೋದಾಗ ಅವಳು ಸತ್ತಿದ್ದಳು. ನಂತರ ವೈದ್ಯರು ನಿದ್ರೆಯಲ್ಲಿಯೇ ಹೃದಯಾಘಾತದಿಂದ ಸಾವನ್ನಪ್ಪಿದ್ದಾಳೆ ಎಂದು ದೃಢಪಡಿಸಿದರು.

"ನನ್ನ ಕೋಣೆ ಮತ್ತು ನನ್ನ ತಾಯಿಯ ಕೋಣೆಯ ನಡುವೆ ಗೋಡೆ ಇಲ್ಲದಿದ್ದರೆ, ಆ ರಾತ್ರಿ ನನ್ನ ತಾಯಿ ನೋವಿನಿಂದ ಬಳಲುತ್ತಿದ್ದಾರೆಂದು ನನಗೆ ತಿಳಿಯುತ್ತಿತ್ತು. ನಾನು ಚಿಕ್ಕವನಿದ್ದಾಗ ಅವಳು ಎಚ್ಚರಗೊಂಡು ನನ್ನನ್ನು ತಬ್ಬಿಕೊಂಡಂತೆ, ನಾನು ಅವಳನ್ನು ಉಳಿಸಲು ಓಡುತ್ತಿದ್ದೆ. ಆದರೆ ಎರಡು ಕೋಣೆಗಳ ನಡುವೆ ಗೋಡೆ ನಿರ್ಮಿಸುವ ಮೂಲಕ ನಾನು ದೊಡ್ಡ ತಪ್ಪು ಮಾಡಿದೆ" ಎಂದು ಜಾಕಿ ಶರಾಫ್ ಹೇಳಿದರು.

ಜನರು ಜೀವನದಲ್ಲಿ ಮೇಲೇರಿದಂತೆಲ್ಲಾ, ಅವರು ತಮ್ಮೊಳಗೇ ಹೀಗೆ ಗೋಡೆಗಳನ್ನು ನಿರ್ಮಿಸಿಕೊಳ್ಳುತ್ತಾರೆ ಮತ್ತು ತಮ್ಮ ಸುತ್ತಮುತ್ತಲಿನವರಿಂದ ದೂರವಾಗುತ್ತಾರೆ. ಇದು ಸರಿಯಲ್ಲ ಎಂಬುದನ್ನು ಈ ಘಟನೆ ನಮಗೆ ನೆನಪಿಸುತ್ತದೆ!



ನಿಮ್ಮನ್ನು ಉತ್ತಮವಾಗಿ ಬದಲಾಯಿಸುವುವು ಯಾವುವು

ಬಣ್ಣ ಬಣ್ಣದ ಅನೇಕ ದಾರಗಳಿಂದ ನೇಯ್ದ ಸುಂದರವಾದ ಬಟ್ಟೆಗಳಂತಹವರು ಮನುಷ್ಯರು! ಬಣ್ಣಗಳು ಬಟ್ಟೆಗಳನ್ನು ಸುಂದರವಾಗಿ ತೋರಿಸುವಂತೆಯೇ, ಗುಣಗಳು ಜನರನ್ನು ಉತ್ತಮರನ್ನಾಗಿ ತೋರಿಸುತ್ತವೆ. ಹಾಗಾದರೆ ನಮ್ಮನ್ನು ಉತ್ತಮರನ್ನಾಗಿಸುವ ಗುಣಗಳು ಯಾವುವು?

- ನಿಮ್ಮ ಕುಟುಂಬದಲ್ಲಿ ಸಾಂಪ್ರದಾಯಿಕವಾಗಿ ಮತ್ತು ಪಾರಂಪಾರಿಕವಾಗಿ ಅನುಸರಿಸುವ ಕೆಲವು ಅಭ್ಯಾಸಗಳ ಮೂಲಕ ಕೆಲವು ಸದ್ಗುಣಗಳು ನಿಮ್ಮಲ್ಲಿ ಬೆಳೆಯುತ್ತವೆ. ಚಿಕ್ಕ ವಯಸ್ಸಿನಿಂದಲೇ ಸುಪ್ತಪ್ರಜ್ಞೆಯಲ್ಲಿ ಅಚ್ಚೊತ್ತುವ ಈ ಸದ್ಗುಣಗಳು ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನೂ ರೂಪಿಸುತ್ತವೆ. 'ಈ ವ್ಯಕ್ತಿ ಬಂಗಾರ', 'ಈ ವ್ಯಕ್ತಿ ತನ್ನ ಮಾತಿನಲ್ಲಿ ಎಂದಿಗೂ ವಿಫಲನಾಗುವುದಿಲ್ಲ' ಇತ್ಯಾದಿಯಾಗಿ ಅನೇಕ ಜನರು ನಿಮ್ಮ ಬಗ್ಗೆ ಹೊಂದಿರುವ ಆಲೋಚನೆಗಳು ನಿಮ್ಮ ಕುಟುಂಬದಿಂದಲೇ ನಿಮಗೆ ಬಂದವುಗಳಾಗಿರುತ್ತವೆ.

- ಒಬ್ಬ ವ್ಯಕ್ತಿಯ ಸ್ವರೂಪವು ಅವನ ವ್ಯಕ್ತಿತ್ವವನ್ನು ಬಹಿರಂಗಪಡಿಸುತ್ತದೆ. ನೀವು ಹೇಗೆ ಉಡುಗೆ ತೊಡುತ್ತೀರಿ, ನಿಮ್ಮ ಕೂದಲನ್ನು ಹೇಗೆ ಬಾಚಿಕೊಳ್ಳುತ್ತೀರಿ, ನಿಮ್ಮ ಧ್ವನಿಯ ಸ್ವರಗಳ ಏರಿಳಿತ, ನೀವು ಇತರರ ಮಾತುಗಳನ್ನು ಹೇಗೆ ಕೇಳುತ್ತೀರಿ, ನಿಮ್ಮ ಮುಖದಲ್ಲಿ ನೀವು ಯಾವ ಭಾವನೆಗಳನ್ನು ವ್ಯಕ್ತಪಡಿಸುತ್ತೀರಿ, ನೀವು ನಗುತ್ತೀರೋ ಅಥವಾ ಕೋಪಗೊಂಡಿದ್ದೀರೋ... ಇವೆಲ್ಲವೂ ಸೇರಿ ನಿಮ್ಮನ್ನು ತೀರ್ಮಾನಿಸುತ್ತವೆ.

- ಜೀವನದ ಅನುಭವಗಳಿಂದ ನೀವು ಏನು ಕಲಿಯುತ್ತೀರಿ, ಅವುಗಳನ್ನು ನೀವು ಹೇಗೆ ಬಳಸಿಕೊಳ್ಳುತ್ತೀರಿ ಮತ್ತು ಆ ಅನುಭವಗಳು ನಿಮ್ಮನ್ನು ಪ್ರಬುದ್ಧ ಮತ್ತು ಶಾಂತಿಯುತರನ್ನಾಗಿ ಮಾಡಿವೆಯೇ ಎಂಬುವು ನಿಮ್ಮ ಸದ್ಗುಣಗಳನ್ನು ಬಹಿರಂಗಪಡಿಸುತ್ತವೆ. "ನನ್ನ ಅನುಭವದಷ್ಟು ನಿನಗೆ ಇನ್ನೂ ವಯಸ್ಸಾಗಿಲ್ಲ" ಎಂದು ಗೊಣಗುವವರು ಅರ್ಧ ತುಂಬಿದ ಕೊಡಗಳಂತಹವರು. ಅನುಭವದಿಂದ ಪ್ರಬುದ್ಧರಾಗಿರುವವರು, ಉತ್ತಮ ನಿರ್ಧಾರಗಳನ್ನು ತೆಗೆದುಕೊಂಡು ಮೇಲೇರುತ್ತಾರೆ.

- ನಿಮ್ಮ ಜೀವನದ ಘಟನೆಗಳನ್ನು ನೀವು ಹೇಗೆ ನೋಡುತ್ತೀರಿ ಎಂಬುದು ಕೂಡ ನಿಮ್ಮನ್ನು ವ್ಯಾಖ್ಯಾನಿಸುತ್ತದೆ. ನಿಮ್ಮ ಸುತ್ತ ನಡೆಯುತ್ತಿರುವ ಘಟನೆಗಳಿಂದ ನೀವು ತುಂಬಾ ವಿಷಯಗಳನ್ನು ಕಲಿಯುತ್ತೀರಿ. ಅವುಗಳನ್ನು ನೀವು ನೋಡುವ ದೃಷ್ಟಿಕೋನದಿಂದ, 'ಯಾವುದನ್ನು ಮಾಡಬಹುದು, ಯಾವುದನ್ನು ಮಾಡಬಾರದು' ಎಂಬುದನ್ನೂ ನೀವೇ ನಿರ್ಧರಿಸಲು ಸಾಧ್ಯವಾಗುತ್ತದೆ. ಒಳ್ಳೆಯ ಕೆಲಸಗಳನ್ನು ಆಯ್ಕೆ ಮಾಡಿಕೊಳ್ಳುವವರು ಅದರಲ್ಲಿ ಸಮರ್ಥರಾಗಿಯೂ ಬದಲಾಗುತ್ತಾರೆ.

- ಯಾವುದೇ ಕೆಲಸವನ್ನಾಗಲೀ, ಎಂತಹ ಮನಸ್ಥಿತಿಯಲ್ಲಿ ನೀವು ಮಾಡುತ್ತೀರಿ ಎಂಬುದು ಕೂಡ ನಿಮ್ಮ ಗುಣಗಳನ್ನು ತೋರಿಸುತ್ತದೆ. 'ಸುಡುವ ಹಾಲು ಕುಡಿಯಲು ಹೋಗಿ ಬಾಯಿ ಸುಟ್ಟುಕೊಂಡ ಬೆಕ್ಕು, ಅದರ ನಂತರ ಹಾಲನ್ನು ನೋಡಿದರೇನೇ ದೂರ ಓಡುತ್ತದೆ' ಎಂಬ ಮಾತಿದೆ. ಅದು ಬುದ್ಧಿಶಾಲಿಯಾದ ಬೆಕ್ಕಾಗಿದ್ದರೆ, ಸ್ವಲ್ಪ ಹೊತ್ತು ಕಾದಿದ್ದು ನಂತರ ಹಾಲು ಕುಡಿಯುತ್ತಿತ್ತು. 'ಇದರ ಸುದ್ದಿಯೇ ಬೇಡ' ಎಂದು ಒಂದು ಕೆಲಸದಿಂದ ದೂರ ಸರಿಯುವುದಕ್ಕೂ, 'ಇಂತಹ ಇಕ್ಕಟ್ಟಾದ ಪರಿಸ್ಥಿತಿಯಲ್ಲಿಯೂ ನಾವು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿದರೆ ಅದರಲ್ಲಿ ಯಶಸ್ವಿಯಾಗಬಹುದು' ಎಂದು ಯೋಚಿಸುವುದಕ್ಕೂ ನಡುವೆ ತುಂಬಾ ವ್ಯತ್ಯಾಸವಿದೆ. ಯಾವುದೇ ಸಮಸ್ಯೆಯನ್ನಾಗಲೀ ನೇರವಾಗಿ ಎದುರುಗೊಂಡು ಅದಕ್ಕೆ ತಕ್ಕ ಪರಿಹಾರವನ್ನು ಕಂಡುಕೊಳ್ಳುವವರೇ ಸಮರ್ಥರೆನ್ನಿಸಿಕೊಳ್ಳುತ್ತಾರೆ.

- ಒಬ್ಬ ವ್ಯಕ್ತಿಯ ಅಭ್ಯಾಸಗಳು ಮತ್ತು ಗುರಿಗಳೇ ಅವರನ್ನು ಉತ್ತಮ ಗುಣಗಳುಳ್ಳವರನ್ನಾಗಿ ಬದಲಾಯಿಸುತ್ತವೆ. ಸುಮ್ಮನೆ ಸಮಯ ಕಳೆಯುವುದು ಮತ್ತು ಸೋಮಾರಿತನದಿಂದ ಕಾಲ ಕಳೆಯುವುದನ್ನು ಅಭ್ಯಾಸ ಮಾಡಿಕೊಂಡಿರುವವರಿಂದ ಇತರರು ದೂರವೇ ಇರಲು ಬಯಸುತ್ತಾರೆ. ಬದುಕಿನಲ್ಲಿ ಉನ್ನತವಾದ ಗುರಿಗಳು ಇಲ್ಲದವರು ಇತರರಿಂದ ದೂರ ಸರಿಸಲ್ಪಡುತ್ತಾರೆ. ಇತರರಿಗಿಂತಲೂ ಪ್ರತ್ಯೇಕವಾದ ಅಭ್ಯಾಸಗಳನ್ನೂ ಗುರಿಗಳನ್ನೂ ಹೊಂದಿರುವವರೇ ಎಲ್ಲರಿಗೂ ರೋಲ್ ಮಾಡೆಲ್‌ಗಳಾಗಿ ಕಾಣಿಸುತ್ತಾರೆ.

- ನೀವು ಎಂತಹ ನಂಬಿಕೆಗಳನ್ನು ಹೊಂದಿದ್ದೀರಿ, ಬದುಕಿನಲ್ಲಿ ಯಾವುದನ್ನೆಲ್ಲ ಗೌರವಾನ್ವಿತವಾದ ವಿಷಯಗಳೆಂದು ಭಾವಿಸುತ್ತೀರಿ ಎಂದುದೇ ನಿಮ್ಮ ಸಂಸ್ಕೃತಿಯನ್ನು ತೀರ್ಮಾನಿಸುತ್ತವೆ. ಕಣ್ಣುಮುಚ್ಚಿಕೊಂಡು ಯಾವುದನ್ನೂ ನಂಬಬೇಡಿ. ಯಾವುದನ್ನೇ ಆಗಲಿ ಚೆನ್ನಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಿ. ಉನ್ನತವಾದ ವಿಷಯಗಳನ್ನು ಗೌರವಿಸಿ. ಅದು ನಿಮ್ಮನ್ನೂ ಗೌರವಾನ್ವಿತರನ್ನಾಗಿ ಬದಲಾಯಿಸುತ್ತವೆ. ●

ಚಿಕ್ಕಂದಿನಲ್ಲೇ ಇವುಗಳನ್ನೆಲ್ಲ ದೂರವಿಡಿ!

ಕಾಲೇಜು ಓದಲು ಆರಂಭಿಸುವ ಹದಿಹರೆಯದಿಂದಲೇ ತೊಡಗಿ, ಅದರ ನಂತರ ಕೆಲಸಕ್ಕೆ ಹೋಗಲು ಆರಂಭಿಸುವ ಸಮಯದಲ್ಲಿ ನಿಮ್ಮೊಳಗೆ ಹಲವು ಕೆಟ್ಟ ಅಭ್ಯಾಸಗಳು ಅಂಟಿಕೊಳ್ಳುವ ಅಪಾಯವಿದೆ. ಅವುಗಳನ್ನು ದೂರ ಮಾಡುವಂತೆ ಸ್ವತಃ ನೀವೇ ನಿಮ್ಮ ಮೆದುಳಿಗೆ ತರಬೇತಿ ನೀಡಬೇಕು. ಅದಕ್ಕಾಗಿ ಈ ಕೆಳಗಿನವುಗಳನ್ನು ಮಾಡಬಹುದು :

- ನಿಮಗೆ ಯಾವುದು ಹೆಚ್ಚು ಉತ್ಸಾಹವನ್ನು ನೀಡುತ್ತದೆ–ಯೋ ಅದನ್ನು ಮಾತ್ರವೇ ಬೆನ್ನಟ್ಟಬೇಡಿ. ಸಾಮಾಜಿಕ ಮಾಧ್ಯಮದಲ್ಲಿ ಇರುವುದು, ಸ್ನೇಹಿತರೊಂದಿಗೆ ಚಾಟ್ ಮಾಡುವುದು, ವಿಡಿಯೋ ಗೇಮ್‌ಗಳನ್ನು ಆಡುವುದು, ಧೂಮಪಾನ, ವಿವಿಧ ವ್ಯಸನಗಳು ಇತ್ಯಾದಿಗಳು ನಿಮಗೆ ಉತ್ಸಾಹವನ್ನು ನೀಡಬಹುದು. ಆದರೆ, ಅವು ನಿಮ್ಮ ಜೀವನದ ದಿಕ್ಕನ್ನು ಬದಲಾಯಿಸುತ್ತವೆ. ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದರಿಂದ ಬರುವ ತೃಪ್ತಿ, ಕೆಲಸದಲ್ಲಿ ಬಡ್ತಿ ಪಡೆದಾಗ ದೊರಕುವ ಆಹ್ಲಾದಕರ ಅನುಭವಗಳು ಇತ್ಯಾದಿಗಳು ಶಾಶ್ವತವಾದವು. ಅಂತಹವುಗಳನ್ನು ಬೆನ್ನಟ್ಟಲು ಪ್ರಯತ್ನಿಸಿ.
- 'ನನಗೆ ಗಣಿತ ಬರುವುದೇ ಇಲ್ಲ' ಅಥವಾ 'ನನಗೆ ಈ ಕೆಲಸ ಮಾಡಲು ಸಾಧ್ಯವಿಲ್ಲ' ಎಂಬಂತೆ ನಿಮ್ಮ ಬಗ್ಗೆ ನೀವೇ ನಕಾರಾತ್ಮಕವಾಗಿ ಯೋಚಿಸಬೇಡಿ. ನಿಮ್ಮನ್ನು ನೀವೇ ಅನರ್ಹರೆಂದು ಭಾವಿಸುವುದು ಸಹ ಕೆಟ್ಟ ಅಭ್ಯಾಸವಾಗಿದೆ. ನಿಮ್ಮಿಂದ ಕೆಲವು ಕೆಲಸಗಳನ್ನು ಮಾಡಲು ಸಾಧ್ಯವಾಗದಿದ್ದರೆ, ನೀವು ಅವುಗಳನ್ನು ಕಲಿಯುವ ಅಥವಾ ಕಲಿತ ವಿಧಾನವು ತಪ್ಪಾಗಿರಬಹುದು. ಸರಿಯಾದ ಮಾರ್ಗವನ್ನು ಕಂಡುಕೊಳ್ಳಿ.
- ಯಾವುದೇ ಬಗೆಯ ರಿಸ್ಕ್ ತೆಗೆದುಕೊಳ್ಳಲು ಬಯಸದ ಜನರು ಜೀವನದಲ್ಲಿ ಎಂದಿಗೂ ಮುಂದೆ ಬರುವುದಿಲ್ಲ. ವಾಸ್ತವವಾಗಿ, ಜೀವನದ ಅತಿ ದೊಡ್ಡ ಅಪಾಯವೆಂದರೆ ಯಾವುದೇ ಬಗೆಯ ರಿಸ್ಕ್ ಅನ್ನೂ ತೆಗೆದುಕೊಳ್ಳದಿರುವುದು. ನಿಮ್ಮ ಆರಾಮದಾಯಕ ವಲಯದಿಂದ ಹೊರಗೆ ಬಂದು ಧೈರ್ಯದಿಂದ ಹೊಸ ವಿಷಯಗಳನ್ನು ಪ್ರಯತ್ನಿಸಿ. ರಿಸ್ಕ್ ತೆಗೆದುಕೊಳ್ಳುವವರು ವಿಫಲರಾಗಬಹುದು ಮತ್ತು ಕೆಳಗೆ ಬೀಳಬಹುದು. ಆದರೆ ಅವರು ಮತ್ತೊಂದು ಪ್ರಯತ್ನದಲ್ಲಿ ಖಂಡಿತ ಮೇಲಕ್ಕೆ ಏರುವರು.



- ನಿಮ್ಮ ತಪ್ಪುಗಳು ಮತ್ತು ವೈಫಲ್ಯಗಳಿಗಾಗಿ ಇತರರನ್ನು ದೂಷಿಸಬೇಡಿ. "ನನಗೇ ಯಾಕೆ ಹೀಗಾಗುತ್ತಿದೆ?" ಎಂದು ಯೋಚಿಸುತ್ತಾ ಹತಾಶೆಯಲ್ಲಿ ಮುಳುಗಬೇಡಿ. ಇಂತಹ ಮನಸ್ಥಿತಿಯನ್ನು ಬಿಟ್ಟು ಸಾಧಕರಾಗಿ ಬದಲಾಗಿ.
- ಎಲ್ಲವನ್ನೂ 100% ಪರಿಪೂರ್ಣವಾಗಿ ಮಾಡಲು ಪ್ರಯತ್ನಿಸಬೇಡಿ. ನೀವು ಅಂದುಕೊಂಡಂತೆ ಎಲ್ಲವೂ ಪರಿಪೂರ್ಣವಾಗಿ ನಡೆಯದೇ ಇದ್ದಲ್ಲಿ ಕ್ರಮೇಣ ನೀವು ಅದರಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತೀರಿ. ನೀವು ಏನನ್ನೂ ಮಾಡದೆ ಕೂಡ ಇರಬಹುದು. ಏಕೆಂದರೆ ನೀವು ಅದನ್ನು ಸರಿಯಾಗಿ ಮಾಡಲೇಬೇಕು ಎಂದು ಯೋಚಿಸುವಿರಿ. ಇಲ್ಲದಿದ್ದಲ್ಲಿ ನೀವು ಅದನ್ನು ಮಾಡುವುದೇ ಇಲ್ಲ. ಇದು ನಿಮ್ಮ ಭವಿಷ್ಯಕ್ಕೆ ಒಳ್ಳೆಯದಲ್ಲ!
- ನೀವು ಪ್ರತಿದಿನ ನಿಮ್ಮ ಅಧ್ಯಯನ, ಕೆಲಸ ಅಥವಾ ಸಂಬಂಧಿತ ಕಾರ್ಯಗಳಲ್ಲಿ ಹಲವು ಗಂಟೆಗಳನ್ನು ಕಳೆಯಬೇಕಾಗುತ್ತದೆ. ಆ ಸಮಯದಲ್ಲಿ ನಿಮ್ಮನ್ನು ನೀವು ನಿರ್ಲಕ್ಷಿಸಬೇಡಿ. ನಿಮ್ಮ ಮನಸ್ಸು ಮತ್ತು ದೇಹ ಆರೋಗ್ಯವಾಗಿದ್ದರೆ ಮಾತ್ರ ನೀವು ಏನನ್ನಾದರೂ ಚೆನ್ನಾಗಿ ಮಾಡಬಹುದು. ಆರೋಗ್ಯಕರ ಆಹಾರ, ವಿಶ್ರಾಂತಿ ಮತ್ತು ವ್ಯಾಯಾಮವನ್ನು ದಿನವೂ ಅನುಸರಿಸಿ.
- ಯಾವುದೇ ನಿರ್ಧಾರ ತೆಗೆದುಕೊಳ್ಳುವಾಗ, ಅದರ ಅನಾನುಕೂಲಗಳ ಬಗ್ಗೆ ಮಾತ್ರವೇ ಯೋಚಿಸಿ ಹಿಂಜರಿಯಬೇಡಿ. ಮನಸ್ಸು ಸಕಾರಾತ್ಮಕವಾಗಿ ಯೋಚಿಸಿದಾಗ ಮಾತ್ರವೇ ನಿಮ್ಮ ಕಾರ್ಯಗಳು ಸಹ ಸಕಾರಾತ್ಮಕವಾಗಿರುತ್ತವೆ. ಭಯ ಮತ್ತು ಹಿಂಜರಿಕೆಯಿಂದ ಮಾಡಿದ ಕಾರ್ಯದಲ್ಲಿ ನೀವು ಯಶಸ್ವಿಯಾಗಲು ಸಾಧ್ಯವಿಲ್ಲ. ಭಯವನ್ನು ಬಿಟ್ಟು ಹೊರ ಬನ್ನಿರಿ.
- ಸ್ಪಷ್ಟವಾಗಿ ಯೋಚಿಸಿ, ಬುದ್ಧಿವಂತ ನಿರ್ಧಾರಗಳನ್ನು ತೆಗೆದುಕೊಳ್ಳಿ. ನಿಮ್ಮ ಯೋಗಕ್ಷೇಮಕ್ಕೆ ಯಾವುದು ಒಳ್ಳೆಯದು ಎಂಬುದರ ಬಗ್ಗೆ ಸ್ಪಷ್ಟತೆಯಿರಲಿ. ನಿಮ್ಮ ಜೀವನವನ್ನು ಸುಧಾರಿಸಿಕೊಳ್ಳಿ.

ಆರೋಗ್ಯವಂತರನ್ನಾಗಿ ಬದಲಾಯಿಸುವ ಸದ್ಗುಣಗಳು!

ಒಬ್ಬ ವೃದ್ಧನಿದ್ದ. ದಾನ ಮಾಡುವುದು ಆತನ ಸದ್ಗುಣವಾಗಿತ್ತು. ಒಳ್ಳೆಯ ಸ್ವಭಾವದವನಾಗಿದ್ದ ಅವನು ಯಾವಾಗಲೂ ಯಾರಿಗಾದರೂ ಏನನ್ನಾದರೂ ಕೊಡುತ್ತಿದ್ದ. ಪ್ರತಿದಿನ ಯಾರಿಗಾದರೂ ಏನನ್ನಾದರೂ ಕೊಡದಿದ್ದರೆ ಅವನಿಗೆ ಸರಿಯಾಗಿ ನಿದ್ರೆ ಬರುತ್ತಿರಲಿಲ್ಲ. ಕೇಳುವ ಮೊದಲೇ ಅವನು ಇತರರಿಗೆ ಸಹಾಯ ಮಾಡುತ್ತಿದ್ದ. ದಾನ ಮಾಡುವಾಗ ಅವನು ಎಷ್ಟು ಸಭ್ಯನಾಗಿ ವರ್ತಿಸುತ್ತಿದ್ದನೆಂದರೆ, ಅವನು ಯಾರಿಗಾದರೂ ಏನನ್ನಾದರೂ ಕೊಡುತ್ತಿದ್ದಾನೆಂದು ಇತರರಿಗೆ ತಿಳಿಯುತ್ತಲೇ ಇರಲಿಲ್ಲ.

ಒಂದು ರಾತ್ರಿ ಅವನು ನಡೆದುಕೊಂಡು ಹೋಗುತ್ತಾ, 'ಇಂದು ನಾನು ಯಾರಿಗೆ ಏನು ದಾನ ಮಾಡಲಿ?' ಎಂದು ಯೋಚಿಸುತ್ತಿದ್ದ. ಆಗ ಒಬ್ಬ ವ್ಯಕ್ತಿ ಅವನ ಮುಂದೆ ಬಂದ. ಅವನನ್ನು ನೋಡಿ ಈ ದಾನಿಗೆ ತುಂಬಾ ದುಃಖವಾಯಿತು. ಅವನು ತಕ್ಷಣ ತನ್ನ ಕೈಯಲ್ಲಿದ್ದ ಎಲ್ಲಾ ಹಣವನ್ನೂ ಅವನಿಗೆ ಕೊಟ್ಟು ಮನೆಗೆ ಬಂದ. ಅಗತ್ಯವಿರುವ ಒಬ್ಬ ವ್ಯಕ್ತಿಗೆ ದಾನ ಮಾಡಿದ ತೃಪ್ತಿಯೊಂದಿಗೆ ಅವನು ಮಲಗಿ ನಿದ್ರಿಸಿದ.

ಮರುದಿನ ಬೆಳಿಗ್ಗೆ ಇಡೀ ಊರು ಒಂದು ವಿಷಯದ ಬಗ್ಗೆ ಮಾತನಾಡುತ್ತಿತ್ತು. 'ನಿನ್ನೆ ರಾತ್ರಿ ಒಬ್ಬ ಕಳ್ಳನಿಗೆ ಯಾರೋ ತಮ್ಮಲ್ಲಿರುವ ... ಹಣವನ್ನೂ ಕೊಟ್ಟು ಹೋಗಿದ್ದಾರೆ' ಎಂಬುದೇ ಅಂದು ...ನಲ್ಲಿ ಚರ್ಚೆಯ ವಿಷಯವಾಗಿತ್ತು. ಇದನ್ನು ಕೇಳಿ ಆ ಹಿರಿಯನಿಗೆ ...ಕೆಯಾಯಿತು, "ಹೋಗಿ ಹೋಗಿ ನಾನು ಒಬ್ಬ ಕಳ್ಳನಿಗೆ ಸಹಾಯ ...ತಿದ್ದೇನಲ್ಲಾ!" ಎಂದು ಅವನು ನಾಚಿದ. "ಸರಿ, ಇಂದು ಸರಿಯಾದ ... ಸಹಾಯ ಮಾಡೋಣ" ಎಂದು ಅವನು ಯೋಚಿಸಿದ.

...ರಾತ್ರಿ, ಅವನು ಹೊರಗೆ ನಡೆದು ಹೋಗುವಾಗ ಒಬ್ಬ ಮಹಿಳೆ ಅವನ ಎದುರಿಗೆ ಬಂದಳು. ಅವಳು ಬಡ ಮಹಿಳೆ ಎಂಬುದು ಮೇಲ್ನೋಟಕ್ಕೇ ಕಾಣುತ್ತಿತುತ. ಅವನು ಆ ಮಹಿಳೆಗೆ ಹಣವನ್ನು ನೀಡಿ ಹಿಂತಿರುಗಿದ. ಮರುದಿನ ಬೆಳಿಗ್ಗೆ, ಇಡೀ ಪಟ್ಟಣದಲ್ಲಿ ಒಂದೇ ವಿಷಯ ಚರ್ಚೆಯಾಗುತ್ತಿತ್ತು. "ನಿನ್ನೆ ರಾತ್ರಿ ಒಬ್ಬ ವೇಶ್ಯೆಗೆ ಯಾರೋ ಹಣ ಕೊಟ್ಟು ಹೋಗಿದ್ದಾರೆ" ಎಂಬುದೇ ಅವರ ಚರ್ಚೆಯ ವಿಷಯವಾಗಿತ್ತು. ಅವನು ಮತ್ತೆ ದುಃಖಿತನಾದನು. "ಓ ದೇವರೇ, ನಿನ್ನೆಯೂ ಏನೋ ತಪ್ಪಾಗಿದೆ" ಎಂದು ಯೋಚಿಸಿದ ಅವನು, "ಸರಿ, ಇಂದು ಸರಿಯಾಗಿ ದಾನ ಮಾಡೋಣ" ಎಂದು ಅವನು ಭಾವಿಸಿದನು. ಆ ರಾತ್ರಿಯೂ ಅವನು ಹೊರಗೆ ಹೋದನು. ಯಾರೋ ಅವನಿಗೆ ಕಂಡರು. ಅವನು ಅವರಿಗೂ ಹಣವನ್ನು ಕೊಟ್ಟನು.

ಮರುದಿನ ಜನರು ಮಾತನಾಡಿಕೊಳ್ಳುತ್ತಿದ್ದರು, "ನಿನ್ನೆ ರಾತ್ರಿ ಯಾರೋ ಒಬ್ಬ ಶ್ರೀಮಂತನ ಕೈಗೇ ಹಣ ಕೊಟ್ಟು ಹೋಗಿದ್ದಾರೆ!" ಅವನು ಅಂದುಕೊಂಡ: "ಏಕೆ ಪ್ರತಿದಿನ ಹೀಗೆ ನಡೆಯುತ್ತದೆ" ಎಂದು. ಅವನು ಒಬ್ಬ ಸನ್ಯಾಸಿಯ ಬಳಿಗೆ ಹೋಗಿ ಎಲ್ಲವನ್ನೂ ಹೇಳಿಕೊಂಡ. ಸನ್ಯಾಸಿ ಅವನನ್ನು ನೋಡಿ ಮುಗುಳ್ನಕ್ಕು ಹೇಳಿದ: "ನಿನ್ನ ಯಾವುದೇ ದಾನವೂ ವ್ಯರ್ಥವಾಗಿಲ್ಲ. ನಿನ್ನಿಂದ ಹಣ ತೆಗೆದುಕೊಂಡ ಆ ಕಳ್ಳ ಈಗ ಬದಲಾಗಿದ್ದಾನೆ. ಆ ಮಹಿಳೆ ಒಳ್ಳೆಯ ಮಾರ್ಗಕ್ಕೆ ಮರಳಿದ್ದಾಳೆ.

ಮತ್ತೊಂದೆಡೆ, ಆ ಶ್ರೀಮಂತ ವ್ಯಕ್ತಿ ಇಂದಿನಿಂದ ದಾನಶೀಲನಾಗಿದ್ದಾನೆ. ಒಳ್ಳೆಯ ಗುಣಗಳನ್ನು ಹೊಂದಿರುವ ವ್ಯಕ್ತಿಯು ಮಾಡುವ ಕಾರ್ಯಗಳು ಉತ್ತಮ ಫಲಿತಾಂಶಗಳನ್ನು ನೀಡುತ್ತವೆ. ಧರ್ಮವು ನಮ್ಮನ್ನು ಮಾತ್ರವಲ್ಲದೆ ಇತರರನ್ನು ಸಹ ಕೆಟ್ಟದ್ದರಿಂದ ರಕ್ಷಿಸುತ್ತದೆ" ಎಂದು ಹೇಳಿದ.

ಇದೇ ರೀತಿ ದಾನ ಸ್ವೀಕರಿಸಿ, ಸತ್ಕಾರ್ಯಗಳ ಮೂಲಕ ಸನ್ಮಾರ್ಗಕ್ಕೆ ಮರಳಿದ ಇನ್ನೊಬ್ಬ ವ್ಯಕ್ತಿಯ ಕಥೆ ಇದು... ಒಬ್ಬ ಋಷಿ ಒಂದು ಕಾಡಿನಲ್ಲಿ ವಾಸಿಸುತ್ತಿದ್ದ. ಒಬ್ಬ ಮರ ಕಡಿಯುವವನು ಪ್ರತಿದಿನ ಅಲ್ಲಿಗೆ ಬರುತ್ತಿದ್ದ. ಅವನು ಋಷಿಗೆ ದಿನವೂ ನಮಸ್ಕರಿಸಿ ನಂತರ ಮರ ಕಡಿಯಲು ಹೋಗುತ್ತಿದ್ದ. ಒಂದು ದಿನ, ಋಷಿ ಅವನನ್ನು ಕರೆದು, "ಜೀವನ ಹೇಗೆ ಸಾಗುತ್ತಿದೆ?" ಎಂದು ಕೇಳಿದ. ಅವನು, "ನಾನು ಪ್ರತಿದಿನ ಇಲ್ಲಿ ಮರವನ್ನು ಕಡಿದು ತೆಗೆದುಕೊಂಡು ಹೋಗುವ ಸೌದೆಯನ್ನು ಊರಿನಲ್ಲಿ ಮಾರಾಟ ಮಾಡಲು ಸಾಧ್ಯವಾದರೆ, ನನ್ನ ಕುಟುಂಬಕ್ಕೆ ಎರಡು ಹೊತ್ತು ಊಟ ಸಿಗುತ್ತದೆ. ಮಳೆಗಾಲದ ದಿನಗಳಲ್ಲಿ ಸೌದೆಯನ್ನು ಮಾರಾಟ ಮಾಡುವುದು ಕಷ್ಟ. ಆ ದಿನಗಳಲ್ಲಿ ನಾವು ಉಪವಾಸ ಇರುವುದು ಅನಿವಾರ್ಯ. ಜೀವನ ನಡೆಸುವುದೇ ಕಷ್ಟವಾಗಿದೆ" ಎಂದ.

"ಕಾಡಿನೊಳಗೆ ಇನ್ನೂ ಸ್ವಲ್ಪ ಮುಂದೆ ಹೋದರೆ ಅಲ್ಲಿ ಶ್ರೀಗಂಧದ ಮರಗಳಿವೆ. ಅವು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತವೆ. ಅವುಗಳನ್ನು ಒಂದು ದಿನ ತೆಗೆದುಕೊಂಡು ಹೋಗಿ ಮಾರಿದರೆ, ಒಂದು ವಾರ ಜೀವನ ಸುಲಭವಾಗಿ ಸಾಗಿಸಬಹುದಲ್ಲವೇ!" ಎಂದು ಋಷಿ ಹೇಳಿದ. ಆ ಮಾತುಗಳನ್ನು ಇವನು ನಂಬಲಿಲ್ಲ! "ನನಗೆ ಈ ಕಾಡು ಈ ಋಷಿಗಿಂತಲೂ ಚೆನ್ನಾಗಿ ತಿಳಿದಿದೆ! ಇಲ್ಲಿ ಹೋಗಿ ಎಲ್ಲಿ ಶ್ರೀಗಂಧದ ಮರಗಳಿವೆ?" ಎಂದು ಅವನು ಯೋಚಿಸಿದ. ಆದಾಗ್ಯೂ, 'ಕಾಡಿನೊಳಗೆ ಇನ್ನೂ ಸ್ವಲ್ಪ ಮುಂದೆ ಹೋಗಿ ನೋಡಿದರೆ ನಷ್ಟವೇನೂ ಇಲ್ಲವಲ್ಲ, ಹೋಗಿ ನೋಡಿಯೇ ಬಿಡೋಣ' ಎಂದು ಅವನು ನಿರ್ಧರಿಸಿದ. ಕಾಡಿನೊಳಗೆ ಸ್ವಲ್ಪ ದೂರ ನಡೆದ ಮೇಲೆ ಅವನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಅಲ್ಲಿ ಒಂದು ದೊಡ್ಡ ಶ್ರೀಗಂಧದ ಕಾಡು ಇತ್ತು! ಅವನು ತನ್ನ ತಲೆಯ ಮೇಲೆ ಹೊತ್ತುಕೊಂಡು ಹೋಗಬಹುದಾದಷ್ಟು ಚೆನ್ನಾಗಿ ಮುತ್ತಿದ ಶ್ರೀಗಂಧದ ಮರಗಳನ್ನು ಕಡಿದು ತೆಗೆದುಕೊಂಡು ಹೊರಟ.

ಹಿಂತಿರುಗುವಾಗ, ಅವನು ಋಷಿಯ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಹೇಳಿದ: "ಸ್ವಾಮಿ, ನಾನು ನಿಮ್ಮ ಮಾತುಗಳನ್ನು ಮೊದಲು ನಂಬಲಿಲ್ಲ, ಅನುಮಾನಿಸಿದೆ. ದಯವಿಟ್ಟು ನನ್ನನ್ನು ಕ್ಷಮಿಸಿ. ನೀವು ನನಗೆ ಒಳ್ಳೆಯ ಮಾರ್ಗದರ್ಶನ ಮಾಡಿದ್ದೀರಿ" ಎಂದು ಹೇಳಿದ. ಋಷಿ ಮುಗುಳ್ನಕ್ಕ.

ಅದಾದ ನಂತರ, ಆ ಮರ ಕಡಿಯುವವನ ಜೀವನವೇ ಬದಲಾಯಿತು. ಅವನು ವಾರಕ್ಕೊಮ್ಮೆ ಮಾತ್ರ ಶ್ರೀಗಂಧದ ಮರಗಳನ್ನು ಕಡಿದು ತೆಗೆದುಕೊಂಡು ಹೋಗಲು ಬರುತ್ತಿದ್ದ. ಅವನ ಕುಟುಂಬ ಈಗ ಹಸಿವಿನಿಂದ ಬಳಲುತ್ತಿರಲಿಲ್ಲ. ಈಗ ಅವನಿಗೆ ಋಷಿಯ ಮೇಲೆ ಮೊದಲಿಗಿಂತಲೂ ಭಕ್ತಿ ಹೆಚ್ಚಾಗಿತ್ತು. ಅವನು ಪ್ರತಿ ಬಾರಿ ಕಾಡಿಗೆ ಬಂದಾಗಲೂ ಅವರಿಗೆ ಅಗತ್ಯವಾದ ಸೇವೆಗಳನ್ನು ಮಾಡಿಯೇ ಹೋಗುತ್ತಿದ್ದ.

ಒಂದು ದಿನ ಋಷಿ ಅವನನ್ನು ಕೇಳಿದ, "ನೀನು ಜೀವನಪರ್ಯಂತ ಮರ ಕಡಿಯುವವನಾಗಿಯೇ ಇರುತ್ತೀಯಾ? ಆ ಗಂಧದ ಕಾಡನ್ನು ಮೀರಿ ಒಳಗೆ ಬೇರೆ ಏನಿದೆ ಎಂದು ನೀನು ಹುಡುಕಬಾರದೇ?" ಅವನಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. "ನೀನು ಗಂಧದ ಕಾಡನ್ನು ಮೀರಿ ಇನ್ನೂ ಒಳಗೆ ಹೋದರೆ, ಅಲ್ಲಿ ಒಂದು ಬೆಳ್ಳಿಯ ಗಣಿ ಇದೆ. ಅಲ್ಲಿಂದ ಬೆಳ್ಳಿಯ ಗಟ್ಟಿಗಳನ್ನು ತೆಗೆದುಕೊಂಡು ಬರಬಹುದು" ಎಂದು ಋಷಿ ಹೇಳಿದ.

ಋಷಿಗೆ ನಮಸ್ಕರಿಸಿ ಅಲ್ಲಿಂದ ಹೊರಟ ಅವನು, ಶ್ರೀಗಂಧದ ಕಾಡನ್ನೂ ದಾಟಿಕೊಂಡು ಇನ್ನೂ ಒಳಗೆ ಹೋದಾಗ ಅಲ್ಲಿ ಅವನಿಗೆ ಒಂದು ಬೆಳ್ಳಿಯ ಗಣಿ ಕಾಣಿಸಿತು. ಅವನು ಅಲ್ಲೊಂದ ಅನೇಕ ಬೆಳ್ಳಿಯ ಗಟ್ಟಿಗಳನ್ನು ತಂದು ಮಾರುಕಟ್ಟೆಯಲ್ಲಿ ಮಾರಿದ ಮತ್ತು ಒಂದೇ ದಿನದಲ್ಲಿ ಅವನ ಜೀವನವೇ ಬದಲಾಯಿತು. ಕೆಲವೇ ದಿನಗಳಲ್ಲಿ ಅವನು ಒಂದು ದೊಡ್ಡ ಮನೆಯಲ್ಲಿ ವಾಸಿಸಲಾರಂಭಿಸಿದ. ತನ್ನ ಮಕ್ಕಳಿಗೆ ಎಲ್ಲಾ ಬಗೆಯ ಸೌಲಭ್ಯಗಳನ್ನೂ ಒದಗಿಸಿದ. ಇದಾದ ನಂತರ, ಅವನು ತಿಂಗಳಿಗೊಮ್ಮೆ ಬಂದು ಬೆಳ್ಳಿಯ ಗಟ್ಟಿಗಳನ್ನು ತೆಗೆದುಕೊಂಡು ಹೋಗುವುದನ್ನು ಅಭ್ಯಾಸ ಮಾಡಿಕೊಂಡ. ಈಗ ಅವನು ಊರಿನ ಅತ್ಯಂತ ಶ್ರೀಮಂತ ವ್ಯಕ್ತಿ.

ನಂತರ ಒಂದು ದಿನ ಋಷಿ ಅವನನ್ನು ಕರೆದು, "ನೀನು ಆ ಬೆಳ್ಳಿಯ ಗಣಿಯನ್ನು ದಾಟಿ ಇನ್ನೂ ಮುಂದೆ ಹೋದರೆ, ಅಲ್ಲಿ ಒಂದು ಚಿನ್ನದ ಗಣಿ ಇದೆ" ಎಂದು ಹೇಳಿದ. ಇವನು ಅದನ್ನೂ ಹುಡುಕಿ ಕಂಡು ಹಿಡಿದು ಚಿನ್ನದ ಗಟ್ಟಿಗಳನ್ನು ತೆಗೆದುಕೊಂಡು ಬಂದು ಮಾರಿದ. ಈಗ ಅವನು ಆ ಪ್ರದೇಶದ ಅತಿದೊಡ್ಡ ಕೋಟ್ಯಾಧಿಪತಿಯಾಗಿದ್ದ!.

ನಂತರ ಒಂದು ದಿನ ಅವನು ಬಂದು ಋಷಿಯ ಪಾದಗಳಿಗೆ ನಮಸ್ಕರಿಸಿದ. ಋಷಿ ಮತ್ತೆ, "ಚಿನ್ನದ ಗಣಿ ಆಚೆ, ಒಂದು ವಜ್ರದ ಗಣಿ ಇದೆ. ನೀನು ಅಲ್ಲಿಗೆ ಹೋಗುವೆಯಾ?" ಎಂದು ಕೇಳಿದ. ಇವನು, 'ಇಲ್ಲ ಸ್ವಾಮಿ. ಈಗ ನನ್ನ ಬಳಿ ಎಲ್ಲವೂ ಇದೆ. ಆದರೆ ನನ್ನ ಸಂತೋಷ ಮತ್ತು ಶಾಂತಿಯನ್ನು ನಾನು ಕಳೆದುಕೊಂಡಿದ್ದೇನೆ. ಆದರೆ ಇಲ್ಲಿ ಈ ಎಲ್ಲಾ ಗಣಿಗಳೂ ಇವೆ ಎಂದು ತಿಳಿದೂ ನಿಮ್ಮಿಂದ ಅದು ಹೇಗೆ ಇಷ್ಟೊಂದು ಶಾಂತಿಯುತವಾಗಿ ಕುಳಿತುಕೊಳ್ಳಲು ಸಾಧ್ಯವಾಗುತ್ತಿದೆ? ಆ ತೃಪ್ತಿಕರ ಮನಸ್ಸನ್ನು ಪಡೆಯುವ ರಹಸ್ಯವನ್ನು ನನಗೆ ಹೇಳಿಕೊಡಿ" ಎಂದು ಅವನು ಕಣ್ಣೀರು ಸುರಿಸುತ್ತಾ ಕೇಳಿದ.

"ನಿನಗೆ ಎಲ್ಲವೂ ಸಿಕ್ಕಿದೆ. ಈಗ ನೀನು ನಿನ್ನೊಳಗೆ ಇರುವುದನ್ನು ಹುಡುಕು. ಅದೇ ನೀನು ಮುಂದೆ ತಲುಪಬೇಕಾದ ಗಣಿ. ನಿನ್ನಲ್ಲಿರುವ ಸದ್ಗುಣಗಳನ್ನು ಎಲ್ಲರಿಗೂ ತೋರಿಸು! ನಿನಗೆ ಸಿಕ್ಕಿದ್ದನ್ನು ಅದು ಇಲ್ಲದವರೊಂದಿಗೆ ಹಂಚಿಕೋ! ಆಗ ನಿನಗೆ ನಿಜವಾದ ಸಂತೋಷ ಸಿಗುತ್ತದೆ" ಎಂದು ಋಷಿ ಹೇಳಿದ. ಅವನಿಗೆ ಜೀವನ ಎಂದರೇನು ಎಂಬುದು ಅರ್ಥವಾಯಿತು!

ಮಕ್ಕಳಿಗೆ ಸದ್ಗುಣಗಳನ್ನು ಹೇಳಿ ಕೊಡಿ!

ಮೊದಲ ದಿನ ಪ್ಲೇ ಸ್ಕೂಲ್‌ಗೆ ಹೋಗಿದ್ದ ಮಗಳನ್ನು ಕರೆದುಕೊಂಡು ಬರಲು ಅವಳ ತಾಯಿ ಶಾಲೆಗೆ ಬಂದಿದ್ದಳು. ಮಗು ಹೇಗಿದೆಯೋ? ಕೆಲವು ಗಂಟೆಗಳ ಕಾಲ ತನ್ನಿಂದ ದೂರವಿರುವ ಮಗು ಏನು ಮಾಡಿದೆಯೋ? ಎಂದು ಚಿಂತಿತಳಾಗಿದ್ದ ತಾಯಿಗೆ ಆಶ್ಚರ್ಯವಾಯಿತು. ಶಾಲೆಯ ದ್ವಾರದಲ್ಲಿ ಮಗು ತನ್ನ ತಾಯಿಯನ್ನು ನಗುತ್ತಾ ಸ್ವಾಗತಿಸಿತು. "ಅಮ್ಮಾ, ಮಿಸ್, ನಿನ್ನನ್ನು ನೋಡಬೇಕಂತೆ, ಒಳಗೆ ಬಾ!" ಎಂದು ಮಗು ಹೇಳಿತು.

"ಮಗು ಏನೋ ತಪ್ಪು ಮಾಡಿರಬೇಕು! ಅದಕ್ಕೇ ಮಿಸ್ ನನ್ನನ್ನು ಒಳಗೆ ಬರಲು ಹೇಳಿದ್ದಾರೆ" ಎಂದು ತಾಯಿ ಆತಂಕದಿಂದಲೇ ಒಳಗೆ ಬಂದಳು. ಮಿಸ್ ಅವಳನ್ನು ಸ್ವಾಗತಿಸಿ ಕೈಗಳನ್ನು ಕುಲುಕಿ, "ನೀವು ನಿಮ್ಮ ಮಗುವನ್ನು ತುಂಬಾ ಚೆನ್ನಾಗಿ ಬೆಳೆಸಿದ್ದೀರಿ. ನಾನು ನಿಮ್ಮನ್ನು ಹೊಗಳುವುದಕ್ಕಾಗಿಯೇ ಒಳಗೆ ಬರುವಂತೆ ತಿಳಿಸಿದ್ದೆ" ಎಂದು ಹೇಳಿದರು. "ಏನು ನಡೆಯಿತು?" ಎಂದು ತಾಯಿ ಕೇಳಿದಳು.

"ಇಂದು ಶಾಲೆಯಲ್ಲಿ ಮೊದಲ ದಿನ. ತುಂಬಾ ಮಕ್ಕಳು ಭಯದಿಂದ ಅಳುತ್ತಿದ್ದರು. ಅವರೆಲ್ಲರೂ 'ನಾವು ಮನೆಗೆ ಹೋಗಬೇಕು' ಎಂದು ಅಳುತ್ತಿದ್ದರು. ನನಗೇನು ಮಾಡಬೇಕೆಂದೇ ತೋಚಲಿಲ್ಲ. ಸಂಕಟದಲ್ಲಿದ್ದೆ. ನಿಮ್ಮ ಮಗಳು ಮಕ್ಕಳ ಬಳಿಗೆ ಹೋಗಿ, 'ಈ ಮಿಸ್ ಏನೂ ಮಾಡುವುದಿಲ್ಲ. ಅವರು ಕೂಡ ನಮ್ಮ ತಾಯಿಯಂತೆಯೇ ಇದ್ದಾರೆ ನೋಡಿ, ಹೆದರಬೇಡಿ' ಎಂದು ಉಳಿದ ಮಕ್ಕಳಿಗೆ ಸಮಾಧಾನ ಹೇಳಿದಳು. ಅವರ ಕಣ್ಣುಗಳನ್ನು ಒರೆಸಿದಳು. ಅವರ ಕೈಗೆ ಎಲ್ಲಾ ಆಟಿಕೆಗಳನ್ನೂ ತೆಗೆದು ಕೊಟ್ಟು ಆಟವಾಡುವಂತೆ ಮಾಡಿದಳು. ಅವಳು ಎಂತಹ ಅದ್ಭುತ ಮಗುವಾಗಿದ್ದಾಳೆಂದು ನನಗೆ ಆಶ್ಚರ್ಯವಾಯಿತು" ಎಂದು ಮಿಸ್ ಹೇಳಿದರು. ತಾಯಿ ಹೊರಗೆ ಬಂದು ಮಗಳನ್ನು ಅಪ್ಪಿಕೊಂಡು ಮುತ್ತಿಟ್ಟಳು. ಒಳ್ಳೆಯ ಗುಣಗಳೇ ಒಬ್ಬ ವ್ಯಕ್ತಿಯನ್ನು ಒಳ್ಳೆಯ ವ್ಯಕ್ತಿಯನ್ನಾಗಿ ಮಾಡುತ್ತವೆ. ನೀವು ಅವುಗಳನ್ನು ನಿಮ್ಮ ಮಗುವಿನಲ್ಲಿ ಬೆಳೆಸಿದರೆ, ಅವು ಅವರ ಜೀವನದುದ್ದಕ್ಕೂ ಅವರ ಗುಣವಾಗಿರುತ್ತವೆ. ಮಗುವಿನ ಮನಸ್ಸಿನಲ್ಲಿ ಏನನ್ನಾದರೂ ತುಂಬುವುದು ಸುಲಭ. ಕಥೆಗಳು, ಹಾಡುಗಳು ಮತ್ತು ಜೀವನ ಅನುಭವಗಳ ಸಂಗತಿಗಳನ್ನು ಹೇಳುವ ಮೂಲಕ ನೀವು ಒಳ್ಳೆಯ ಗುಣಗಳನ್ನು ಅವರಲ್ಲಿ ತುಂಬಬಹುದು. ಎಲ್ಲಕ್ಕಿಂತ ಮುಖ್ಯವಾಗಿ, ಪೋಷಕರು ತಮ್ಮ ಮಕ್ಕಳಿಗೆ ಒಳ್ಳೆಯ ಅಭ್ಯಾಸಗಳನ್ನು ಸಹ ರೂಢಿ ಮಾಡಬೇಕು! ಮಕ್ಕಳು, ದೊಡ್ಡವರ ಮಾತುಗಳ ಮೂಲಕ ಅಲ್ಲ, ಅವರನ್ನು ನೋಡುವ ಮೂಲಕವೇ ಬಹಳಷ್ಟು ವಿಷಯಗಳನ್ನು ಕಲಿಯುತ್ತಾರೆ.

ಮಕ್ಕಳು ಕಲಿಯಬೇಕಾದ ಕೆಲವು ಉತ್ತಮ ಗುಣಗಳು

- ಶಾಲಾ ವಯಸ್ಸಿನಲ್ಲಿಯೇ ಮಕ್ಕಳಿಗೆ ಓದುವ ಅಭ್ಯಾಸವನ್ನು ಪರಿಚಯಿಸಬೇಕು. ದೀರ್ಘಕಾಲ ಒಂದೇ ಸ್ಥಳದಲ್ಲಿ ಕುಳಿತು ಪುಸ್ತಕ ಓದುವುದನ್ನು ಅಭ್ಯಾಸ ಮಾಡಿಕೊಳ್ಳುವುದು ಅವರ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಿರುತ್ತದೆ. ಪುಸ್ತಕಗಳ ಮೂಲಕ ಅವರ ಜ್ಞಾನ ಬೆಳೆಯುತ್ತದೆ.
- ಕುಳಿತಲ್ಲೇ ಮೊಬೈಲ್ ಫೋನ್‌ನಲ್ಲಿ ಆಟವಾಡುವ ರೂಢಿ ಮಾಡಿಸುವ ಬದಲು, ಹೊರಗೆ ಹೋಗಿ ಬಿಸಿಲಿನಲ್ಲಿ ಆಟವಾಡಲು ಅವರನ್ನು ಒಗ್ಗಿಸಿ. ಅವರು ಕೂಡ ಇದರಿಂದ ಉತ್ಸುಕರಾಗುತ್ತಾರೆ. ಇತರ ಮಕ್ಕಳೊಂದಿಗೆ ಆಟವಾಡುವುದರಿಂದ ಅವರಲ್ಲಿ ಸಾಮಾಜಿಕ ಕೌಶಲ್ಯಗಳು ಕೂಡ ಬೆಳೆಯುತ್ತವೆ. ಅವರು ಮಾನಸಿಕವಾಗಿ ಬಲಿಷ್ಠರಾಗುತ್ತಾರೆ.

- ಅವರಿಗೆ ಹಣ ಉಳಿಸುವುದು ಹೇಗೆಂಬುದನ್ನು ಕಲಿಸಿ. ಇದರಿಂದ ಅವರು ಹಣದ ಮೌಲ್ಯವನ್ನು ಅರಿತುಕೊಳ್ಳುತ್ತಾರೆ. ಅವರ ಉಳಿತಾಯವು ಅವರ ಕಣ್ಣೆದುರೇ ಬೆಳೆಯುವುದನ್ನು ನೋಡುವ ಮೂಲಕ ಅವರು ಉಳಿತಾಯದ ಅಭ್ಯಾಸವನ್ನು ಕೂಡ ಬೆಳೆಸಿಕೊಳ್ಳುತ್ತಾರೆ.
- ಇಂದಿನ ಮಕ್ಕಳು ಟಿವಿ, ಕಂಪ್ಯೂಟರ್, ಸೆಲ್ ಫೋನ್ ಅಥವಾ ಮಿನುಗುವ ಪರದೆಯನ್ನು ನೋಡುತ್ತಾ ಬೆಳೆಯುತ್ತಾರೆ. ಅವರು ಅವುಗಳಿಗೆ ವ್ಯಸನಿಯಾಗಲು ಬಿಡುವ ಬದಲು, ಅವರಿಗೆ ಸಮಯ ನಿರ್ವಹಣೆಯನ್ನು ಪರಿಚಯಿಸಿ.
- ಎಲ್ಲದರಲ್ಲೂ ಕ್ರಮಬದ್ಧವಾಗಿರಲು ಅವರಿಗೆ ಕಲಿಸಿ. ಅವರು ಆಡಿದ ಆಟಿಕೆಗಳನ್ನು ಮತ್ತೆ ಅದನ್ನು ಇಡಬೇಕಾದ ಸ್ಥಳದಲ್ಲಿ ತೆಗೆದಿಡಲು ಹೇಳಿ ಕೊಡಿ. ಅವರು ಪಾಠಗಳನ್ನು ಓದಿ ಮುಗಿಸಿದ ನಂತರ ಚೀಲದಲ್ಲಿ ತಮ್ಮ ಪುಸ್ತಕಗಳನ್ನು ಇಟ್ಟುಕೊಳ್ಳಲು, ಬೆಳಗ್ಗೆ ಅವರು ಎದ್ದ ನಂತರ ತಮ್ಮ ಹಾಸಿಗೆಯನ್ನು ಸರಿಪಡಿಸಲು ಅಭ್ಯಾಸ ಮಾಡಿಸಿ... ಇದರಿಂದ ಅವರು ಎಲ್ಲವನ್ನೂ ಯೋಜಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ.
- ಮಲಗುವುದು ಮತ್ತು ಏಳುವುದು, ಸ್ನಾನ ಮಾಡುವುದು, ಊಟ ಮಾಡುವುದು, ಆಟವಾಡುವುದು ಮತ್ತು ಅಧ್ಯಯನ ಮಾಡುವಂತಹ ಎಲ್ಲವನ್ನೂ ನಿರ್ದಿಷ್ಟ ಸಮಯದಲ್ಲಿ ಮಾಡಲು ಅವರಿಗೆ ಅಭ್ಯಾಸ ಮಾಡಿಸಿ. ಅವರು ಸೋಮಾರಿತನವಿಲ್ಲದೆ ನಿರ್ದಿಷ್ಟ ಸಮಯದಲ್ಲಿ ಎಲ್ಲವನ್ನೂ ಮಾಡಲು ಒಗ್ಗಿಕೊಳ್ಳುತ್ತಾರೆ.
- ಮಕ್ಕಳಿಗೆ ಹಲ್ಲುಜ್ಜುವುದು, ಸ್ನಾನ ಮಾಡುವುದು, ಕೈಗಳನ್ನು ಸರಿಯಾಗಿ ತೊಳೆಯುವುದು, ಆಹಾರವನ್ನು ವ್ಯರ್ಥ ಮಾಡದೆ ತಿನ್ನುವುದು, ಹೊರಗಿನಿಂದ ಮನೆಗೆ ಬಂದಾಗ ಕಾಲುಗಳನ್ನು ತೊಳೆಯುವುದು ಮುಂತಾದ ನೈರ್ಮಲ್ಯ ಅಭ್ಯಾಸಗಳನ್ನು ಕಲಿಸಿ. ಇದರಿಂದ ಅವರು ದೊಡ್ಡವರಾದಾಗ ಎಲ್ಲರೂ ಅವರನ್ನು ಗೌರವಿಸುತ್ತಾರೆ.
- ನೆರೆಹೊರೆಯವರು ಮತ್ತು ಅವರ ವಯಸ್ಸಿನ ಮಕ್ಕಳು ಸೇರಿದಂತೆ ಎಲ್ಲರೊಂದಿಗೂ ಸ್ನೇಹಪರವಾಗಿ ಮತ್ತು ಪ್ರೀತಿಯಿಂದ ವರ್ತಿಸಲು ಅವರನ್ನು ಪ್ರೋತ್ಸಾಹಿಸಿ. ಸ್ನೇಹವನ್ನು ಬೆಳೆಸಿಕೊಳ್ಳುವುದು ಮತ್ತು ನಿರ್ವಹಿಸುವುದು ಜೀವನದುದ್ದಕ್ಕೂ ಅಗತ್ಯವಿರುವ ಕೌಶಲ್ಯವಾಗಿದೆ.
- ಅವರಿಗೆ ತಮ್ಮ ಸಮಯವನ್ನು ಬುದ್ಧಿವಂತಿಕೆಯಿಂದ ಬಳಸಲು ಮತ್ತು ಕಷ್ಟಪಟ್ಟು ಕೆಲಸ ಮಾಡಲು ಕಲಿಸಿ. ಪ್ರಾಮಾಣಿಕತೆ ಮತ್ತು ಸತ್ಯವಂತರಾಗಿರುವುದರ ಮೌಲ್ಯವನ್ನು ಅವರಿಗೆ ತೋರಿಸಿ. ಇದು ಅವರನ್ನು ಜೀವನದಲ್ಲಿ ಮೇಲಕ್ಕೇರಿಸುತ್ತದೆ.
- 'ಧನ್ಯವಾದಗಳು', 'ದಯವಿಟ್ಟು' ಮತ್ತು 'ಕ್ಷಮಿಸಿ' ಮುಂತಾದ ಪದಗಳನ್ನು ಅವರು ಯಾವುದೇ ಹಿಂಜರಿಕೆಯಿಲ್ಲದೆ ಬಳಸುವುದನ್ನು ಕಲಿಯಲಿ. ಯಾರೊಂದಿಗಾದರೂ ಮಾತನಾಡುವಾಗ, ಸಾರ್ವಜನಿಕವಾಗಿ ಊಟ ಮಾಡುವಾಗ, ಅವರ ಯೋಗಕ್ಷೇಮದ ಬಗ್ಗೆ ಕೇಳುವಾಗ ಅಡ್ಡಿಪಡಿಸದಿರುವುದು ಮುಂತಾದ ನಡವಳಿಕೆಗಳನ್ನು ಅವರಿಗೆ ಕಲಿಸಿ.
- ಇಂದಿನ ಕುಟುಂಬ ವ್ಯವಸ್ಥೆ ಮತ್ತು ಸಾಮಾಜಿಕ ಪರಿಸರವು ಅನೇಕ ಜನರನ್ನು ಸ್ವಾರ್ಥಿಗಳನ್ನಾಗಿ ಮಾಡುತ್ತದೆ. ಆಟಿಕೆಗಳು, ತಿಂಡಿಗಳು ಅಥವಾ ಆಹಾರ... ಎಲ್ಲವನ್ನೂ ಇತರರೊಂದಿಗೆ ಹಂಚಿಕೊಳ್ಳಲು ಅವರಿಗೆ ಕಲಿಸಿ. ಅವರು ಇತರರ ಅಗತ್ಯಗಳನ್ನು ಅರಿತುಕೊಳ್ಳುತ್ತಾರೆ. ಅವರು ತಮ್ಮಲ್ಲಿರುವುದರ ಮೌಲ್ಯವನ್ನು ಸಹ ತಿಳಿದುಕೊಳ್ಳುತ್ತಾರೆ.
- ಅವರಿಗೆ ಹಿರಿಯರನ್ನು ಗೌರವಿಸಲು ಕಲಿಸಿ. ಅಪರಿಚಿತರೊಂದಿಗೆ ಸಹ ಧೈರ್ಯ ಮತ್ತು ಗೌರವದಿಂದ ಮಾತನಾಡಲು ಕಲಿಸಿ. ಎಲ್ಲರನ್ನೂ ಪ್ರೀತಿ ಮತ್ತು ದಯೆಯಿಂದ ನಡೆಸಿಕೊಳ್ಳಲು ಕಲಿಸಿ.
- ಈಗ ಅನೇಕ ಮಕ್ಕಳು ಯಾವುದಕ್ಕೂ ಕಾಯುವ ತಾಳ್ಮೆಯಿಲ್ಲದವರಾಗಿ ಬೆಳೆಯುತ್ತಿದ್ದಾರೆ. ಅವರು ಎಲ್ಲದಕ್ಕೂ ಹಠ ಹಿಡಿಯುತ್ತಾರೆ. ಯಾವುದೇ ಒಂದು ಕೆಲಸ ಆಗಬೇಕಾದರೂ ಕಾಯಬೇಕಾದ ಅಗತ್ಯವನ್ನು ಅವರಿಗೆ ಅರ್ಥ ಮಾಡಿಸಿ. ಇದರಿಂದ ಅವರು ಕೋಪ ಮತ್ತು ಕಿರಿಕಿರಿಯಿಂದ ಮುಕ್ತರಾಗಿ ಬೆಳೆಯುತ್ತಾರೆ. ●

RAMRAJ ಕಾಟನ್ ಭಾರತೀಯ ಸಂಸ್ಕೃತಿ

ಬಿಳುಪು

ಭಾವನೆಗಳು

ಸಂಪುಟ 9 | ಸಂಚಿಕೆ 2
ಜುಲೈ 2026

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
ಕೆ.ಆರ್. ನಾಗರಾಜನ್

ಲೇಖಕರು
ತ.ಸೆ. ಜ್ಞಾನವೇಲ್

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ
ಡಾ. ತಮಿಳ್ ಸೆಲ್ವಿ
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
ತರು ಮೀಡಿಯಾ (ಪ್ರೈ) ಲಿ.,
ನಂ, 188, ನೆಲ ಮಹಡಿ
14ನೇ ಅಡ್ಡರಸ್ತೆ ಜಂಕ್ಷನ್
ಡಿಫೆನ್ಸ್ ಕಾಲನಿ,
ಈಕ್ಕಾಟ್ಟು ತಾಂಗಲ್,
ಚೆನ್ನೈ 600 032.

ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.

Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604. | Ph: 0421-4304106

ಮೂರು ಕಾರ್ಖಾನೆಗಳು!

ಪ್ರತಿಯೊಬ್ಬರ ದೇಹದಲ್ಲಿ ಮೂರು ಕಾರ್ಖಾನೆಗಳು ಇರುವುದು ಒಳ್ಳೆಯದು! ತಲೆಯಲ್ಲಿ ಒಂದು ಐಸ್ ಕಾರ್ಖಾನೆ ಇರಬೇಕು. ಅದು ಕೆಟ್ಟ ಜನರನ್ನು ಅಥವಾ ಕಠಿಣ ಪರಿಸ್ಥಿತಿಗಳನ್ನು ಎದುರಿಸುವಾಗ ಅವರನ್ನು ಶಾಂತವಾಗಿರಿಸುತ್ತದೆ. ನಾಲಿಗೆಯಲ್ಲಿ ಕಬ್ಬಿನ ಕಾರ್ಖಾನೆ ಇರಬೇಕು. ಇದು ದ್ವೇಷ ಮತ್ತು ಕೋಪವನ್ನು ಬೆರೆಸದೆ ಸಿಹಿ ಮಾತುಗಳನ್ನು ಮಾತನಾಡುವಂತೆ ಮಾಡುತ್ತದೆ. ಹೀಗೆ ಮಾತನಾಡುವುದರಿಂದ ಮುಕ್ಕಾಲು ಪಾಲು ಸಮಸ್ಯೆಗಳು ಪರಿಹಾರವಾಗುತ್ತವೆ. ನಂತರ ಹೃದಯದಲ್ಲಿ ಒಂದು ಪ್ರೀತಿಯ ಕಾರ್ಖಾನೆ ಇರಬೇಕು. ಅದು ಅವರಿಗೆ ಎಲ್ಲರನ್ನೂ ಪ್ರೀತಿಸುವ ಮತ್ತು ಸಂತೋಷವನ್ನು ಕಂಡುಕೊಳ್ಳುವ ಪ್ರಬುದ್ಧತೆಯನ್ನು ನೀಡುತ್ತದೆ.

ನಾನು ವಿದ್ಯಾರ್ಥಿ

ಆಲ್ಬರ್ಟ್ ಐನ್‌ಸ್ಟೈನ್ ಅವರನ್ನು ಮಾನವಕುಲದ ಇತಿಹಾಸದಲ್ಲಿ ಅತ್ಯಂತ ಶ್ರೇಷ್ಠ ವೈಜ್ಞಾನಿಕ ಪ್ರತಿಭೆ ಎಂದು ಪರಿಗಣಿಸಲಾಗಿದೆ. ಭೌತಶಾಸ್ತ್ರದಲ್ಲಿ ಅವರು ಮಾಡಿರುವ ಸಂಶೋಧನೆಗಳು ನಮ್ಮ ನಾಗರಿಕ ಜೀವನದ ಮೂಲಭೂತ ಆಧಾರಗಳಾಗಿವೆ. ಒಂದು ದಿನ, ಐನ್‌ಸ್ಟೈನ್ ತಮ್ಮ ಪ್ರಯೋಗಾಲಯದಲ್ಲಿ ಹಲವು ಗಂಟೆಗಳ ಕಾಲ ಕೆಲಸ ಮಾಡಿ, ನಂತರ ಮನೆಗೆ ಮರಳಲು ಬಸ್ ನಿಲ್ದಾಣಕ್ಕೆ ಬಂದರು. ಆ ಸಮಯದಲ್ಲಿ, ಅವರು ಬಸ್ ನಿಲ್ದಾಣದಲ್ಲಿ ಒಬ್ಬ ಯುವಕನನ್ನು ನೋಡಿದರು.

ಐನ್‌ಸ್ಟೈನ್ ಆ ಯುವಕನನ್ನು ಅಲ್ಲಿ ಆಗಾಗ್ಗೆ ನೋಡುತ್ತಿದ್ದರು. ಅವನ ಕೈಯಲ್ಲಿ ಯಾವಾಗಲೂ ಭೌತಶಾಸ್ತ್ರದ ಪುಸ್ತಕಗಳಿರುವುದನ್ನು ಅವರು ಗಮನಿಸಿದ್ದರು. ಇಂದು ಕುತೂಹಲವನ್ನು ತಡೆಯಲಾಗದ ಐನ್‌ಸ್ಟೈನ್ ಆ ಯುವಕನ ಬಳಿಗೆ ಹೋಗಿ, 'ನಾನು ನಿಮ್ಮನ್ನು ಇಲ್ಲಿ ಆಗಾಗ್ಗೆ ನೋಡುತ್ತಿದ್ದೇನೆ. ನೀವು ಕೈಗಳಲ್ಲಿ ಯಾವಾಗಲೂ ಭೌತಶಾಸ್ತ್ರದ ಪುಸ್ತಕಗಳನ್ನೂ, ಕೈಪಿಡಿಗಳನ್ನೂ ಇಟ್ಟುಕೊಂಡಿರುತ್ತೀರಿ. ನೀವು ಏನು ಮಾಡುತ್ತಿದ್ದೀರಿ?" ಎಂದು ಕೇಳಿದರು. ಆ ಯುವಕ ಹೆಮ್ಮೆಯಿಂದ ಉತ್ತರಿಸಿದ: "ನಾನು ಭೌತಶಾಸ್ತ್ರದಲ್ಲಿ ಪಿಎಚ್‌ಡಿ ಮಾಡಿದ್ದೇನೆ ಮತ್ತು ಡಾಕ್ಟರೇಟ್ ಪದವಿ ಪಡೆದಿದ್ದೇನೆ. ನನಗೆ ಭೌತಶಾಸ್ತ್ರದ ಬಗ್ಗೆ ತಿಳಿಯದುದು ಏನೂ ಇಲ್ಲ. ಅದಿರಲಿ, ನನ್ನನ್ನು ಪ್ರಶ್ನಿಸುತ್ತಿದ್ದೀರಲ್ಲಾ... ನೀವು ಯಾರು?" ಎಂದು ಅಧಿಕಾರಯುತ ಧ್ವನಿಯಲ್ಲಿ ಕೇಳಿದ.

ಭೌತಶಾಸ್ತ್ರ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದ ಐನ್‌ಸ್ಟೈನ್ ವಿನಯದಿಂದ, "ನಾನು ಭೌತಶಾಸ್ತ್ರದ ವಿದ್ಯಾರ್ಥಿ" ಎಂದು ವಿನಮ್ರವಾಗಿ ಹೇಳಿದರು.

ಕೊನೆಯಿಲ್ಲದ ಕಲಿಕೆಯೇ ಐನ್‌ಸ್ಟೈನ್‌ರನ್ನು ಒಬ್ಬ ವಿನಮ್ರ ಸಾಧಕನನ್ನಾಗಿ ಮಾಡಿದ್ದು.



ಯಶಸ್ಸಿನ ಅಲೆ !

ಆಸ್ಟ್ರೇಲಿಯಾದ ಪ್ರಸಿದ್ಧ ನಟ ಗೈ ಪಿಯರ್ಸ್ ಅವರು, "ಯಶಸ್ಸು ಅಲೆಗಳಂತೆ ಬರುತ್ತದೆ" ಎಂದು ಹೇಳುತ್ತಾರೆ. "ಮೊದಲು ಒಂದು ದೊಡ್ಡ ಅಲೆ ಬರುತ್ತದೆ, ನಂತರ ಅದರ ಹಿಂದೆಯೇ ಅನೇಕ ಸಣ್ಣ ಅಲೆಗಳು ಬರುತ್ತವೆ; ಮತ್ತು ಕೆಲವೊಮ್ಮೆ ಹಿಮ್ಮೆಟ್ಟುವ ಅಲೆಗಳು ಹೊಸ ಅಲೆಗಳು ದಡಕ್ಕೆ ಬರುವುದನ್ನು ತಡೆಯುತ್ತವೆ." ಯಾವಾಗಲೂ ಬರೀ ಯಶಸ್ಸುಗಳನ್ನು ಮಾತ್ರವೇ ಅನುಭವಿಸಿದವರು ಯಾರೂ ಇಲ್ಲ. ಬದುಕಿನಲ್ಲಿ ಇಂತಹ ಏರಿಳಿತಗಳನ್ನು ಅನುಭವಿಸುವವರು ಪ್ರಬುದ್ಧರಾಗುತ್ತಾರೆ. ದೊಡ್ಡ ಅಲೆ ಯಾವಾಗ ಬರುತ್ತದೆ ಎಂಬುದನ್ನು ಸರಿಯಾಗಿ ನೋಡಿ ತಿಳಿದುಕೊಂಡು ಅದನ್ನು ಹಿಡಿದುಕೊಳ್ಳುವುದರಲ್ಲೇ ಯಶಸ್ಸು ಅಡಗಿದೆ. ದೊಡ್ಡದಾಗಿ ಕನಸು ಕಾಣಿರಿ, ಕಷ್ಟಪಟ್ಟು ಕೆಲಸ ಮಾಡಿ!

ನಿಮಗೆ ರೂಢಿಯಿಲ್ಲ!

ಒಬ್ಬ ಯುವಕ ಸಂದರ್ಶನಕ್ಕೆ ಬಂದಿದ್ದ. ಆ ದಿನ ಅವನ ಜೊತೆ ಸ್ಪರ್ಧಿಸಿದ್ದ ಎಲ್ಲಾ ಅಭ್ಯರ್ಥಿಗಳಿಗಿಂತ ಅವನಿಗೆ ಹೆಚ್ಚಿನ ಅನುಭವವಿತ್ತು. ಅವನು ಒಂದು ಪ್ರತಿಷ್ಠಿತ ಕಂಪನಿಯಲ್ಲಿ 10 ವರ್ಷಗಳ ಕಾಲ ಕೆಲಸ ಮಾಡಿದ್ದ. ಅವನು ಇತರರಿಗಿಂತ ಹೆಚ್ಚು ಓದಿದ್ದ. ಆದ್ದರಿಂದ ಅವನು ಆ ಕೆಲಸ ತನಗೇ ಸಿಗುತ್ತದೆ ಎಂದು ನಂಬಿದ್ದ. ಆದರೆ ಅವನಿಗಿಂತ ಕಡಿಮೆ ಶಿಕ್ಷಣ ಮತ್ತು ಅನುಭವವಿರುವ ಬೇರೆಯವರಿಗೆ ಆ ಕೆಲಸ ಸಿಕ್ಕಿತು.

"ನನಗೆ ಕೆಲಸ ಸಿಗಲಿಲ್ಲ ಅಂತ ನನಗೆ ಬೇಸರವಾಗಿದೆ, ಸರಿ. ಆದರೆ ಒಂದು ವಿಷಯ ತಿಳಿದುಕೊಳ್ಳಬೇಕು. ನೀವು ನನ್ನನ್ನು ಏಕೆ ತಿರಸ್ಕರಿಸಿದಿರಿ?" ಎಂದು ಅವನು ಸಂದರ್ಶಕರನ್ನು ಕೇಳಿದ. ಕಂಪನಿಯ ವ್ಯವಸ್ಥಾಪಕರು ಅವನನ್ನು ಕೂರಿಸಿ ವಿವರಿಸಿದರು. "ನೀವು ಪ್ರತಿಭಾನ್ವಿತರು ಎಂಬುದರಲ್ಲಿ ನಮಗೆ ಯಾವುದೇ ಸಂದೇಹವಿಲ್ಲ. ನಿಮಗೆ ಅನುಭವವಿದೆ. ಆದರೆ ನೀವು ಯಶಸ್ಸನ್ನು ಮಾತ್ರ ಕಂಡಿದ್ದೀರಿ. ನೀವು ಯಾವುದೇ ಸಮಸ್ಯೆಗಳನ್ನು ಎದುರಿಸದೆ, ದೊಡ್ಡ ಕಂಪನಿಯಲ್ಲಿ ಕೆಲಸ ಮಾಡಿ ಯಶಸ್ಸುಗಳನ್ನು ಮಾತ್ರವೇ ನೋಡಿದ್ದೀರಿ. ನಮ್ಮದು ಒಂದು ಸಣ್ಣ ಕಂಪನಿ. ಬಿಕ್ಕಟ್ಟುಗಳನ್ನು ಸಂಧಿಸುತ್ತಾ, ವೈಫಲ್ಯಗಳಿಂದ ನಿರುತ್ಸಾಹಗೊಳ್ಳದೆ, ಪ್ರಾಯೋಗಿಕವಾಗಿ ಯೋಚಿಸುವ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಂಡು, ಕೆಲಸ ಮಾಡುವ ಅನುಭವ ನಿಮಗೆ ಬೇಕು ಎಂದು ನಾವು ಭಾವಿಸುತ್ತೇವೆ. ಅದಕ್ಕಾಗಿಯೇ ನಾವು ನಿಮ್ಮನ್ನು ಆಯ್ಕೆ ಮಾಡಲಿಲ್ಲ" ಎಂದು ಮ್ಯಾನೇಜರ್ ಹೇಳಿದರು,

ಮುಖವಾಡ ಅಗತ್ಯವಿಲ್ಲ!

ಹೆಚ್ಚಿನ ಜನರು ಒಳ್ಳೆಯ ಮತ್ತು ಕೆಟ್ಟ ಗುಣಗಳ ಮಿಶ್ರಣವನ್ನು ಹೊಂದಿರುತ್ತಾರೆ. ತಮ್ಮ ಕರಾಳ ಮುಖವನ್ನು ಮರೆಮಾಡಲು ಅನೇಕರು ಮುಖವಾಡಗಳನ್ನು ಧರಿಸುತ್ತಾರೆ. ಅವರನ್ನು ಪೂರ್ಣವಾಗಿ ತಿಳಿದಿಲ್ಲದ ಜನರು ಆ ಮುಖವಾಡವನ್ನು ನೋಡಿ ಆಶ್ಚರ್ಯಚಕಿತರಾಗುತ್ತಾರೆ. ನೀವು ಅವರನ್ನು ಹತ್ತಿರದಿಂದ ತಿಳಿದುಕೊಂಡಾಗ ಮಾತ್ರ ಅವರ ಮುಖವಾಡದ ಹಿಂದಿನ ವಾಸ್ತವವು ಸ್ಪಷ್ಟವಾಗುತ್ತದೆ.

ಪ್ರತಿಯೊಂದು ಮುಖವಾಡದ ಹಿಂದೆಯೂ ಒಂದು ಕಥೆ ಇರುತ್ತದೆ. ಅದು ಯಾವಾಗಲೂ ಕೆಟ್ಟ ಕಥೆಯೇ ಆಗಿರುತ್ತದೆ. ಕೆಲವರ ಜೀವನದಲ್ಲಿ ಆ ಮುಖವಾಡ ತಾನಾಗಿಯೇ ಕಳಚಿ ಬೀಳುತ್ತದೆ. ಕೆಲವರು ಅದನ್ನು ಕಳಚಲು ಹೆಣಗಾಡುತ್ತಾರೆ.

ತನಗೆ ಮತ್ತು ತನ್ನ ಮನಸ್ಸಾಕ್ಷಿಗೆ ಸತ್ಯವಾಗಿರುವುದು ಬಹಳ ಉನ್ನತ ಸದ್ಗುಣ. ಹಾಗೆ ಇರುವವರು ತಮ್ಮ ಹೃದಯ ಏನು ಹೇಳುತ್ತದೋ ಅದನ್ನು ಮಾಡುತ್ತಾರೆ. ಅವರಿಗೆ ಉನ್ನತವಾದ ಎಲ್ಲವೂ ಸಿಗುತ್ತವೆ.

ಉದ್ದೇಶವೇನು?

ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ರೋಗಿಯ ಹೊಟ್ಟೆಯನ್ನು ಸೀಳಿ ಒಬ್ಬ ವೈದ್ಯರು ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಅವರು ನುರಿತ ವೈದ್ಯರು. ಇದೇ ರೀತಿಯ ಶಸ್ತ್ರಚಿಕಿತ್ಸೆಯನ್ನು ನೂರಾರು ಬಾರಿ ಮಾಡಿದ ಅನುಭವ ಅವರಿಗೆ ಇದೆ. ಆದಾಗ್ಯೂ, ರೋಗಿಯ ಆರೋಗ್ಯ ತುಂಬಾ ದುರ್ಬಲವಾಗಿದ್ದುದರಿಂದ, ಶಸ್ತ್ರಚಿಕಿತ್ಸೆಯಿಂದ ಯಾವುದೇ ಪ್ರಯೋಜನವಿಲ್ಲದೆ ರೋಗಿ ಸಾಯುತ್ತಾನೆ. ವೈದ್ಯರು ಪರಿತಪಿಸುತ್ತಾರೆ.

ಇನ್ನೊಂದು ದೃಶ್ಯ... ಮನೆಯಲ್ಲಿ ಹಾಸಿಗೆಯಲ್ಲಿ ವ್ಯಕ್ತಿಯೊಬ್ಬ ಮಲಗಿದ್ದಾನೆ. ಕದಿಯಲು ಮನೆಗೆ ಪ್ರವೇಶಿಸಿದ ಕಳ್ಳನೊಬ್ಬ, ಕೈಯಲ್ಲಿದ್ದ ಚಾಕುವಿನಿಂದ ಅವನ ಹೊಟ್ಟೆಗೆ ಇರಿದು ಅವರನ್ನು ಸಾಯಿಸುತ್ತಾನೆ.

ನಾವು ಇವೆರಡನ್ನೂ ಕೇವಲ ಕ್ರಿಯೆಯಿಂದ ನೋಡುವುದಾದರೆ, ಇಬ್ಬರೂ ಒಂದೇ ರೀತಿಯ ಕೆಲಸವನ್ನೇ ಮಾಡಿರುವುದು! ಆದರೆ ಉದ್ದೇಶಗಳು ವಿಭಿನ್ನವಾಗಿವೆ. ಸಾವಿನತ್ತ ಸಾಗುತ್ತಿದ್ದ ವ್ಯಕ್ತಿಯನ್ನು ಉಳಿಸಲು ವೈದ್ಯರು ಪ್ರಯತ್ನಿಸುತ್ತಾರೆ. ಅವರ ಕ್ರಿಯೆಗಳು ಮಾನವೀಯತೆ, ದಯೆ ಮತ್ತು ಕಾಳಜಿಯಿಂದ ತುಂಬಿರುತ್ತವೆ. ಅವರನ್ನು ಉಳಿಸಲಾಗದ ಪರಿಸ್ಥಿತಿಗೆ ಅವರು ವಿಷಾದಿಸುತ್ತಾರೆ. ಆದರೆ ಕಳ್ಳನ ಉದ್ದೇಶ ಕೇವಲ ವಂಚನೆ ಮತ್ತು ದುರಾಸೆ! ಅವನ ಕಾರ್ಯಗಳಲ್ಲಿ ಕೇವಲ ಸ್ವಾರ್ಥವಿದೆ.

ಯಾವುದೇ ಕ್ರಿಯೆಯನ್ನು ಅದರ ಉದ್ದೇಶದೊಂದಿಗೆ ಸಂಪರ್ಕಿಸಲು ಕಲಿಯೋಣ. ನಮಗೆ ತೃಪ್ತಿ ಮತ್ತು ಶಾಂತಿಯನ್ನು ತರುವ ಕೆಲಸಗಳನ್ನು ಮಾತ್ರ ಮಾಡೋಣ!

ಆರೋಗ್ಯ ಕಾಪಾಡುವ ಸದ್ಗುಣಗಳು!

ನಾವು ನಮ್ಮ ದೈನಂದಿನ ಜೀವನದಲ್ಲಿ "ಇದು ನಮಗೆ ಅನುಕೂಲಕರವಾಗಿದೆ" ಮತ್ತು "ಇದು ತುಂಬಾ ಆರೋಗ್ಯಕರ..." ಎಂದೆಲ್ಲ ಯೋಚಿಸಿ ಅನೇಕ ಕೆಲಸಗಳನ್ನು ಮಾಡುತ್ತೇವೆ. ಆದರೆ ಅವು ನಮ್ಮ ದೇಹಕ್ಕೆ ಹಾನಿ ಮಾಡುವ ಅನಾರೋಗ್ಯಕರ ಅಭ್ಯಾಸಗಳೂ ಆಗಿರಬಹುದು. ನಾವು ಅಂತಹವುಗಳನ್ನು ಖಂಡಿತವಾಗಿ ತಪ್ಪಿಸಬೇಕು.

- ಇಂದಿನ ಕೆಲಸದ ವಾತಾವರಣದಲ್ಲಿ ಜನರು ಪ್ರತಿದಿನವೂ ಎಂಟು ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುತ್ತಾರೆ. ಗಂಟೆಗಟ್ಟಲೆ ಕುಳಿತುಕೊಂಡೇ ಕೆಲಸ ಮಾಡುವುದು ಅನೇಕ ಜನರಿಗೆ ಸಾಮಾನ್ಯವಾಗಿದೆ. ಇಂತಹ ನಿಷ್ಕ್ರಿಯತೆಯು ದೇಹದಲ್ಲಿ ಕೊಬ್ಬು ಮತ್ತು ಸಕ್ಕರೆಯನ್ನು ಹೆಚ್ಚಿಸುತ್ತದೆ. ಇದು ಅನೇಕ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುತ್ತದೆ. ನಿಯಮಿತವಾಗಿ ಎದ್ದು ನಡೆಯುವುದು, ಫೋನ್‌ನಲ್ಲಿ ಮಾತನಾಡುತ್ತಾ ನಡೆಯುವುದು ಮತ್ತು ಆಗಾಗ ನೀರು ಕುಡಿಯುವುದು ಇತ್ಯಾದಿಗಳು ನಿಮ್ಮ ದೇಹಕ್ಕೆ ಚಲನೆಯನ್ನು ನೀಡುತ್ತವೆ.

- ದೀರ್ಘಕಾಲ ಕುರ್ಚಿಯ ಮೇಲೆ ಕುಳಿತುಕೊಳ್ಳುವಾಗ, ಅನೇಕ ಜನರು ಕಾಲಿನ ಮೇಲೆ ಕಾಲು ಹಾಕಿ ಕುಳಿತುಕೊಳ್ಳುತ್ತಾರೆ. ಇದು ಕಾಲು ನೋವನ್ನು ಕಡಿಮೆ ಮಾಡುತ್ತದೆ ಮತ್ತು ಕೆಲವರು ಇದನ್ನು ಸ್ಟೈಲಿಶ್ ಎಂದು ಪರಿಗಣಿಸುತ್ತಾರೆ. ಆದಾಗ್ಯೂ ಈ ರೀತಿ ಕುಳಿತುಕೊಳ್ಳುವುದರಿಂದ ರಕ್ತದೊತ್ತಡವು ಶೇಕಡಾ 10 ರಷ್ಟು ಹೆಚ್ಚಾಗುತ್ತದೆ ಎಂದು ವೈದ್ಯಕೀಯ ಅಧ್ಯಯನಗಳು ತಿಳಿಸುತ್ತವೆ. ಅಷ್ಟೇ ಅಲ್ಲ, ಈ ರೀತಿ ಕುಳಿತುಕೊಳ್ಳುವುದರಿಂದ ಸೊಂಟದಲ್ಲಿರುವ ಕೀಲುಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಕಾಲುಗಳಲ್ಲಿನ ನರಗಳು ಸಂಕುಚಿತಗೊಳ್ಳುವುದರಿಂದ ರಕ್ತ ಹೆಪ್ಪುಗಟ್ಟುವಿಕೆಯ ಅಪಾಯ ಕೂಡ ಹೆಚ್ಚಾಗಿರುತ್ತದೆ. ಆದ್ದರಿಂದ, ಎರಡೂ ಪಾದಗಳನ್ನು ನೆಲದ ಮೇಲೆ ಊರಿ ನೇರವಾಗಿ ಕುಳಿತುಕೊಳ್ಳುವುದು ಆರೋಗ್ಯಕರ ಅಭ್ಯಾಸವಾಗಿದೆ.

- ಇತ್ತೀಚೆಗೆ ಬಿಗಿಯಾದ ಪ್ಯಾಂಟ್ ಧರಿಸುವುದು ಕೂಡ ಫ್ಯಾಷನ್ ಆಗಿ ಮಾರ್ಪಟ್ಟಿದೆ. ಪುರುಷರು ಮಾತ್ರವಲ್ಲ, ಮಹಿಳೆಯರು ಸಹ ಇವುಗಳನ್ನು ಧರಿಸುತ್ತಾರೆ. ಬಿಗಿಯಾದ ಲೆಗ್ಗಿಂಗ್ಸ್ ಧರಿಸುವುದು ಸಹ ಇತ್ತೀಚೆಗೆ ಹೆಚ್ಚಾಗಿದೆ. ಇವು ಕಾಲುಗಳನ್ನು ಬಿಗಿಗೊಳಿಸುವುದಲ್ಲದೆ, ಹೊಟ್ಟೆಯನ್ನೂ ಸಹ ಬಿಗಿಗೊಳಿಸುತ್ತವೆ. ಇದು ಜೀರ್ಣಕ್ರಿಯೆಯ ಅಸ್ವಸ್ಥತೆಗಳಿಗೆ ಕಾರಣವಾಗುತ್ತದೆ. ಆಹಾರವನ್ನು ಜೀರ್ಣಿಸಿಕೊಳ್ಳಲು ಹೊಟ್ಟೆಯಲ್ಲಿ ಸ್ರವಿಸುವ ಆಮ್ಲವು ಅನ್ನನಾಳಕ್ಕೆ ಬಂದು ಹೊಟ್ಟೆಯ ಹುಣ್ಣುಗಳಿಗೆ ಕಾರಣವಾಗುತ್ತದೆ. ಆಹಾರವು ಸರಿಯಾಗಿ ಜೀರ್ಣವಾಗುವುದಿಲ್ಲ. ಹೊಟ್ಟೆ ಮತ್ತು ಕಾಲುಗಳನ್ನು ಬಿಗಿಯಾಗಿ ಹಿಡಿದಿಟ್ಟುಕೊಳ್ಳದ ಸಡಿಲವಾದ ಬಟ್ಟೆಗಳು ಸ್ಟೈಲಿಶ್ ಆಗಿರದೆ ಇರಬಹುದು; ಆದರೆ ಅವು ಆರೋಗ್ಯಕರವಾಗಿರುತ್ತವೆ.

- ದಿನಕ್ಕೆ ಎರಡು ಬಾರಿ ಎರಡು ನಿಮಿಷಗಳ ಕಾಲ ಹಲ್ಲುಜ್ಜುವುದು ಆರೋಗ್ಯಕರ ಅಭ್ಯಾಸ. ಆದರೆ, ನಿಮ್ಮ ಹಲ್ಲುಗಳನ್ನು ಬಲವಾಗಿ ಉಜ್ಜುವುದು ಅಪಾಯಕಾರಿ. ಏಕೆಂದರೆ ಇದು ನಿಮ್ಮ ಹಲ್ಲುಗಳ ಹೊರ ಪದರವಾದ ದಂತಕವಚವನ್ನು ಹಾನಿಗೊಳಿಸುತ್ತದೆ. ಇದು ನಿಮ್ಮ ಒಸಡುಗಳಿಗೂ ಹಾನಿ ಮಾಡುತ್ತದೆ. ನಿಮ್ಮ ಬ್ರಷ್ ತುಂಬಾ ಗಟ್ಟಿಯಾಗಿದ್ದರೆ ಈ ಪರಿಣಾಮಗಳು ಇನ್ನೂ ಹೆಚ್ಚಾಗಿರುತ್ತವೆ. ಅದೇ ಸಮಯದಲ್ಲಿ ಅದು ತುಂಬಾ ಮೃದುವಾಗಿದ್ದರೆ, ನಿಮ್ಮ ಹಲ್ಲುಗಳು ಸರಿಯಾಗಿ ಸ್ವಚ್ಛಗೊಳಿಸಲ್ಪಡುವುದಿಲ್ಲ. ಆದ್ದರಿಂದ, ತುಂಬಾ ಗಟ್ಟಿಯಾದ ಅಥವಾ ತುಂಬಾ ಮೃದುವಲ್ಲದ ಬ್ರಷ್ ಅನ್ನು ಬಳಸಿ. ನೀವು ಪೆನ್ನು ಹಿಡಿದಿರುವಂತೆ ಬ್ರಷ್ ಅನ್ನು ನಿಮ್ಮ ಬೆರಳುಗಳಿಂದ ಹಿಡಿದುಕೊಳ್ಳಿ ಮತ್ತು ನಿಮ್ಮ ಮಣಿಕಟ್ಟನ್ನು ಮಾತ್ರ ಆಡಿಸುತ್ತಾ ಹಲ್ಲುಜ್ಜಿಕೊಳ್ಳಿ. ಇದು ಆರೋಗ್ಯಕರ.

- ಅನೇಕ ಜನರು ಕಚೇರಿಯಲ್ಲಿ ಕೆಲಸ ಮಾಡುವ ಮೇಜಿನ ಮೇಲೇ ಊಟ ಮಾಡುತ್ತಾರೆ. ಮಕ್ಕಳು ಓದುವ ಮೇಜಿನ ಮೇಲೆ ಊಟ ಮಾಡುತ್ತಾರೆ. ಅಲ್ಲಿ ಅವರು ಜಂಕ್ ಫುಡ್ ಸಹ ತಿನ್ನುತ್ತಾರೆ. ಇದರಿಂದ ಗಂಟೆಗಟ್ಟಲೆ ಕುಳಿತು ಕೆಲಸ ಮಾಡುವ ಅಥವಾ ಅಧ್ಯಯನ ಮಾಡುವ ಟೇಬಲ್ ಸೂಕ್ಷ್ಮಜೀವಿಗಳಿಗೆ ಸಂತಾನೋತ್ಪತ್ತಿ ಮಾಡುವ

ಸ್ಥಳವಾಗಬಹುದು. ಒಂದು ಅಧ್ಯಯನವು ಅಂತಹ ಟೇಬಲ್‌ಗಳು ಸ್ನಾನಗೃಹದಷ್ಟೇ ಸೂಕ್ಷ್ಮಜೀವಿಗಳನ್ನು ಹೊಂದಿರುತ್ತವೆ ಎಂದು ತಿಳಿಸುತ್ತದೆ. ನೀವು ಸ್ನಾನಗೃಹದಲ್ಲಿ ಏನನ್ನಾದರೂ ತಿನ್ನುತ್ತೀರಾ? ಇಲ್ಲವಲ್ಲ. ಹಾಗೆಯೇ ಇಲ್ಲಿಯೂ ತಿನ್ನಬೇಡಿ. ತಿನ್ನುವುದಕ್ಕಾಗಿಯೇ ಪ್ರತ್ಯೇಕ ಮೇಜನ್ನು ಬಳಸಿ.

- ಕೆಲವರು ಕಾಫಿ ಅಥವಾ ಟೀಯನ್ನು ನೇರವಾಗಿ ಒಲೆಯಿಂದ ಲೋಟಕ್ಕೆ ಹಾಕಿಕೊಂಡು ಬಿಸಿ ಬಿಸಿ ಇರುವಾಗಲೇ ಕುಡಿಯಲು ಇಷ್ಟಪಡುತ್ತಾರೆ. ಸ್ವಲ್ಪ ತಣ್ಣಗಾದರೂ ಅವರು ಅದನ್ನು ಕುಡಿಯಲು ಇಷ್ಟ ಪಡುವುದಿಲ್ಲ. ಆದರೆ ಈ ರೀತಿ ಕುಡಿಯುವುದು ಅಪಾಯಕಾರಿ. ನಮ್ಮ ಅನ್ನನಾಳಕ್ಕೆ ಈ ಶಾಖವನ್ನು ತಡೆದುಕೊಳ್ಳಲು ಸಾಧ್ಯವಿಲ್ಲ. ಇದು ಅನ್ನನಾಳದೊಳಗಿನ ಕೋಶಗಳನ್ನು ಹಾನಿಗೊಳಿಸುತ್ತದೆ. ಈ ಕಾರಣದಿಂದಾಗಿ ಅನ್ನನಾಳದ ಕ್ಯಾನ್ಸರ್ ಆಗುವ ಅಪಾಯವಿದೆ. ತುಂಬಾ ಬಿಸಿಬಿಸಿಯಾಗಿರುವ ಅಥವಾ ತುಂಬಾ ತಣ್ಣಗಿರುವ ಯಾವುದನ್ನೂ ತಿನ್ನಬೇಡಿ.

- ಅನೇಕ ಜನರು ಹೊರಗೆ ಹೋಗುವಾಗ ಸನ್‌ಸ್ಕ್ರೀನ್ ಬಳಸುತ್ತಾರೆ ಏಕೆಂದರೆ ಅವರ ಚರ್ಮವು ಕಂದು ಬಣ್ಣಕ್ಕೆ ತಿರುಗುವುದನ್ನು ಅದು ತಡೆಯುತ್ತದೆ. ಆದರೆ ನಮ್ಮ ಚರ್ಮವು ಸೂರ್ಯನ ಬೆಳಕಿಗೆ ಒಡ್ಡಿಕೊಂಡಾಗ, ನಮ್ಮ ದೇಹವು ನೈಸರ್ಗಿಕವಾಗಿ ವಿಟಮಿನ್ ಡಿ ಅನ್ನು ಪಡೆಯುತ್ತದೆ. ಹೊರಗೆ ಹೋಗುವಾಗ ಸನ್‌ಸ್ಕ್ರೀನ್ ಧರಿಸುವ ಜನರು ಇದನ್ನು ಕಳೆದುಕೊಳ್ಳುತ್ತಾರೆ. ಇದರಿಂದ ಚಿಕ್ಕ ವಯಸ್ಸಿನಲ್ಲಿಯೇ ಮೂಳೆ ಸವೆತ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಅತಿಯಾದ ಬಿಸಿಲಿನಲ್ಲಿ ಹೊರಗೆ ಹೋಗುವಾಗ ನೀವು ಸನ್‌ಸ್ಕ್ರೀನ್ ಹಚ್ಚಬಹುದು: ಪರವಾಗಿಲ್ಲ. ಆದರೆ, ಬೆಳಿಗ್ಗೆ ಮತ್ತು ಸಂಜೆ ಕನಿಷ್ಠ ಅರ್ಧ ಗಂಟೆ ನಿಮ್ಮ ಚರ್ಮವನ್ನು ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದು ಆರೋಗ್ಯಕರ.

- ಕೆಲವರು ಬೆನ್ನು ಮೇಲೆ ಮಾಡಿ ಮಲಗುತ್ತಾರೆ. ನೀವು ಹೀಗೆ ದಿಂಬಿನ ಮೇಲೆ ಮುಖ ಒತ್ತಿ ಮಲಗಿದರೆ, ನಿಮ್ಮ ಮುಖ ಊದಿಕೊಳ್ಳುತ್ತದೆ. ಇದರಿಂದ ಸುಕ್ಕುಗಳು ಬೇಗನೆ ಕಾಣಿಸಿಕೊಳ್ಳುತ್ತವೆ. ಒಂದು ಬದಿಯಲ್ಲಿ ತಿರುಗಿ ಮಲಗುವುದು ಅಥವಾ ಅಂಗಾತ ಮಲಗುವುದು ನಿಮ್ಮ ಮುಖದ ಸೌಂದರ್ಯವನ್ನು ಕಾಪಾಡುತ್ತದೆ. ಬೆನ್ನು ಮೇಲೆ ಮಾಡಿ ಮಲಗುವ ಅಭ್ಯಾಸವನ್ನು ಬದಲಾಯಿಸಲು ಸಾಧ್ಯವಾಗದವರು ತಮ್ಮ ದಿಂಬಿನ ಮೇಲೆ ಸ್ಯಾಟಿನ್ ಬಟ್ಟೆಯನ್ನು ಹಾಕಿಕೊಂಡು ಮಲಗುವುದರಿಂದ ಈ ಪರಿಣಾಮವನ್ನು ಕಡಿಮೆ ಮಾಡಬಹುದು.

- ಪ್ರತಿದಿನ ಗಂಟೆಗಟ್ಟಲೆ ಸೆಲ್ ಫೋನ್‌ನಲ್ಲಿ ಮಾತನಾಡುವುದು ಅನೇಕ ಜನರಿಗೆ ಅಭ್ಯಾಸವಾಗಿದೆ. ಇದು ಕಿವಿಗಳ ಮೇಲೆ ಮಾತ್ರವಲ್ಲದೆ ನಿಮ್ಮ ಮುಖದ ಮೇಲೂ ಪರಿಣಾಮ ಬೀರುತ್ತದೆ. ನಾವು ನಮ್ಮ ಸೆಲ್ ಫೋನ್‌ಗಳನ್ನು ಎಲ್ಲೆಲ್ಲೋ ಇಡುತ್ತೇವೆ. ಅನೇಕ ಮಹಿಳೆಯರು ತಮ್ಮ ಸೆಲ್ ಫೋನ್‌ಗಳನ್ನು ತಮ್ಮ ಕೈಚೀಲಗಳಲ್ಲಿ ಇಡುತ್ತಾರೆ. ಅವರು ಆ ಬ್ಯಾಗ್‌ಗಳನ್ನು ಸ್ವಚ್ಛಗೊಳಿಸಿ ತುಂಬಾ ದಿನಗಳಾಗಿರಬಹುದು. ಅಲ್ಲೆಲ್ಲ ಇರುವ ಸೂಕ್ಷ್ಮಜೀವಿಗಳು ಫೋನ್‌ಗೆ ಬರುತ್ತವೆ ಮತ್ತು ನೀವು ಅದನ್ನು ನಿಮ್ಮ ಕೆನ್ನೆಗೆ ಹಿಡಿದು ಮಾತನಾಡುವಾಗ ಆ ಸೂಕ್ಷ್ಮಜೀವಿಗಳು ಚರ್ಮ ರೋಗಗಳಿಗೆ ಕಾರಣವಾಗುತ್ತವೆ. ನಿಮ್ಮ ಫೋನ್ ಅನ್ನು ಸ್ವಚ್ಛವಾದ ಸ್ಥಳದಲ್ಲಿ ಇಡುವುದು ಮತ್ತು ಅದನ್ನು ನಿಯಮಿತವಾಗಿ ಒರೆಸುವುದು ಆರೋಗ್ಯಕರ ಅಭ್ಯಾಸಗಳಾಗಿವೆ. ●

ಬಿಳುಪು ಚಂದಾ...

ಮಹಿಳಾ ದಿನಾಚರಣೆಯ ವಿಶೇಷ ರಿಯಾಯಿತಿ!

ಮಾರ್ಚ್ 8ನೇ ದಿನದಂದು ಆಚರಿಸಲಾಗುವ, ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ 'ಬಿಳುಪು ಭಾವನೆಗಳು' ಸಂಚಿಕೆಯ ವಾರ್ಷಿಕ ಚಂದಾ ಸಲ್ಲಿಸುವ ಮಹಿಳೆಯರಿಗಾಗಿ ವಿಶೇಷ ರಿಯಾಯಿತಿಯನ್ನು ನೀಡಲಾಗುತ್ತದೆ.

ಒಂದು ವರ್ಷದ ಚಂದಾ : ರೂ. ~~200~~/–
ಮಹಿಳೆಯರಿಗಾಗಿ ರಿಯಾಯಿತಿ ಚಂದಾ : ರೂ. 150/–

ಎರಡು ವರ್ಷಗಳ ಚಂದಾ : ರೂ. ~~380~~/–
ಮಹಿಳೆಯರಿಗಾಗಿ ರಿಯಾಯಿತಿ ಚಂದಾ : 300/–

ಈ ರಿಯಾಯಿತಿಯನ್ನು ಸಂಪೂರ್ಣವಾಗಿ ಬಳಸಿಕೊಂಡು, ಮಹಿಳೆಯರು ತಮ್ಮನ್ನೂ, ತಮ್ಮ ಕುಟುಂಬವನ್ನೂ, ತಮ್ಮ ಪರಿಸರವನ್ನೂ ಇನ್ನೂ ವಿಶೇಷವಾಗಿ ಅರಿತು, ಒಳಿತನ್ನು ಗಳಿಸಲಿ ಎಂದು ಬಯಸುತ್ತೇವೆ. (ಚಂದಾ ಸಲ್ಲಿಸುವ ವಿಧಾನಗಳಿಗಾಗಿ 23ನೇ ಪುಟವನ್ನು ಗಮನಿಸಿ).

ಟೀನ್ ಏಜ್‌ನಲ್ಲೇ ಸದ್ಗುಣಗಳನ್ನು ಬೆಳೆಸಿಕೊಳ್ಳಿ!

"ಅಕ್ಕ ಅಂಗಡಿಗೆ ಹೋಗುತ್ತಿದ್ದಾಳೆ. ನೀನೂ ಅವಳ ಜೊತೆಗೆ ಹೋಗಿ ಬಾ" ಎಂದು ಅಮ್ಮ ಮಗನಿಗೆ ತಾಕೀತು ಮಾಡಿದಳು. ತಾಯಿ ತನ್ನ 15 ವರ್ಷದ ಮಗನನ್ನು, 19 ವರ್ಷದ ಮಗಳೊಂದಿಗೆ ಹೋಗಲು ಹೇಳಿದರು. ಅವನು ಮೊದಲಿಗೆ ನಿರಾಕರಿಸಿದರೂ ಅನಿವಾರ್ಯವಾಗಿ ಹೋಗಲೇಬೇಕಾಯಿತು.

ಅಕ್ಕ ಸ್ಕೂಟರ್ ಓಡಿಸುತ್ತಿದ್ದಳು. ತಮ್ಮ ಗಾಡಿಯಲ್ಲಿ ಹಿಂದೆ ಕುಳಿತಿದ್ದ. ಅವರು ಎರಡು ಅಥವಾ ಮೂರು ಅಂಗಡಿಗಳಲ್ಲಿ ಹತ್ತಿ ಇಳಿದು ಅನೇಕ ವಸ್ತುಗಳನ್ನು ಖರೀದಿಸಿ, ರಾತ್ರಿ ಎಂಟು ಗಂಟೆಯ ಸುಮಾರಿಗೆ ಮನೆಗೆ ಮರಳಿದರು. ಕಡಿಮೆ ಜನದಟ್ಟಣೆ ಇರುವ ರಸ್ತೆಯಲ್ಲಿ ಅವರು ಬರುತ್ತಿದ್ದಾಗ, ಬೈಕ್‌ನಲ್ಲಿ ಬಂದ ಮೂವರು ಅಸಭ್ಯ ಯುವಕರು ಇವರ ಸ್ಕೂಟರ್ ಸಮೀಪಕ್ಕೇ ಡಿಕ್ಕಿ ಹೊಡೆಯುವಂತೆ ಬಂದರು. ಅಕ್ಕನನ್ನು ನೋಡಿ ನಗುತ್ತಾ ಅಸಭ್ಯಕರವಾದ ಕೆಲವು ನುಡಿಗಳನ್ನು ಹೇಳಿ, ತಕ್ಷಣವೇ ಜೋರಾಗಿ ಬೈಕ್ ಓಡಿಸಿಕೊಂಡು ಅಲ್ಲಿಂದ ಕಣ್ಮರೆಯಾದರು.

ತಮ್ಮನ ದೇಹ ನಡುಗುತ್ತಿತ್ತು. ಆ ಪರಿಸ್ಥಿತಿಯಲ್ಲಿ ಅಕ್ಕನಿಗೆ ಬೆಂಬಲವಾಗಿ ತನ್ನಿಂದ ಏನೂ ಮಾಡಲು ಸಾಧ್ಯವಾಗಲಿಲ್ಲವಲ್ಲ ಎಂದು ಅವನು ಚಿಂತಿತನಾದನು. ಆ ಸಮಯದಲ್ಲಿ ಅವನು ತನ್ನನ್ನು ದುರ್ಬಲನೆಂದು ಭಾವಿಸಿದನು. ಅವನ ಸಹೋದರಿ "ಕೆಲವು ಪುಂಡುಪೋಕರಿಗಳು ಹೀಗೇ ನಡೆದುಕೊಳ್ಳುವುದು ಬಿಡು" ಅಕ್ಕ ಅದನ್ನು ಸಾಮಾನ್ಯ ವಿಷಯವೆಂಬಂತೆ ತೆಗೆದುಕೊಂಡರೂ ಅವನಿಂದ ಹಾಗೆ ಸುಮ್ಮನಿರಲು ಸಾಧ್ಯವಾಗಲಿಲ್ಲ. ಮನೆಗೆ ಹಿಂದಿರುಗಿದ ನಂತರ ಅವನ ತಾಯಿ ಅವನ ಮುಖವನ್ನು ನೋಡಿ ಏನಾಯಿತು? ಏಕೆ ಹೀಗಿದ್ದೀಯಾ? ಎಂದು ಪ್ರಶ್ನಿಸಿದಳು. ನಡೆದದ್ದನ್ನೆಲ್ಲ ಅವನು ಅವಳಿಗೆ ಹೇಳಿದ.

ಅಮ್ಮ ಅವನ ಭುಜ ಹಿಡಿದುಕೊಂಡು ಹೇಳಿದಳು: "ಈ ವಯಸ್ಸಿನಲ್ಲಿ ನೀನು ನನ್ನ ಅಕ್ಕನಿಗೆ ರಕ್ಷಕನಾಗಿರಬೇಕೆಂದೇನೂ ನಾನು ನಿರೀಕ್ಷಿಸುವುದಿಲ್ಲ. ಆದರೆ ಇವತ್ತು ಏನಾಯಿತು ಎಂಬುದನ್ನು ನೀನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ನೀನು ಬೆಳೆದು ಬೇಗ ದೊಡ್ಡವನಾಗಿ ಬಿಡುವೆ. ಆಗ ನಿನ್ನ ಸ್ನೇಹಿತರು ಎಷ್ಟೇ ಒತ್ತಾಯಿಸಿದರೂ ಕೂಡ, ಯಾವುದೇ ಹುಡುಗಿಯ ಜೊತೆಯೂ ನೀನು ಹೀಗೆ ಕಿಡಿಗೇಡಿಯಂತೆ ವರ್ತಿಸಬಾರದು. ಅದನ್ನು ನೆನಪಿನಲ್ಲಿಟ್ಟುಕೋ!" ಎಂದರು.

ಅವನು ದೊಡ್ಡವನಾದ ನಂತರವೂ ಅದನ್ನು ಮರೆಯಲಿಲ್ಲ. ಹೆಣ್ಣು ಮಕ್ಕಳನ್ನು ಗೇಲಿ ಮಾಡುವ, ಅನೇಕ ಸ್ನೇಹಿತರೊಂದಿಗಿನ ಸ್ನೇಹವನ್ನು ಅವನು ಮುರಿದುಕೊಂಡು, ಸದ್ಗುಣಗಳಿಂದ ಮಿಂಚಿದನು.

ಇದು ಎರಡನೇ ಘಟನೆ... ಮನೆಯಲ್ಲಿ ಇಬ್ಬರು ಹುಡುಗರ ನಡುವೆ ಜಗಳವಾಯಿತು. ತಾಯಿ ಬಂದು ಸಮಾಧಾನ ಮಾಡಿ ವಿಚಾರಿಸಿದಳು. "ಅಣ್ಣ ಫ್ರಿಡ್ಜ್‌ನಿಂದ ಚಾಕೊಲೇಟ್ ತೆಗೆದು–ಕೊಂಡು ತಿಂದಿದ್ದಾನೆ. ನಾನು ಕೇಳಿದರೆ, ನಾನೇನೂ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾನೆ" ಎಂದು ಕಿರಿಯ ಸಹೋದರ ದೂರಿದ. "ನಾನು ಚಾಕೊಲೇಟ್ ತೆಗೆದುಕೊಂಡಿಲ್ಲ" ಎಂದು ಅಣ್ಣ ಉತ್ತರಿಸಿದ. ಮೊದಲು ತಾಯಿ ತಮ್ಮನನ್ನು ನೋಡಿ, "ಅವನು ನಿನ್ನ ಅಣ್ಣ. ಅವನು

ನಿನಗಿಂತ ದೊಡ್ಡವನು. ಅವನು ಏನೇ ಹೇಳಿದರೂ, ಮೊದಲು ನೀನು ಅದನ್ನು ನಂಬಬೇಕು ಮತ್ತು ಅವನನ್ನು ಅನುಮಾನಿಸಬಾರದು. ನಿನಗೆ ಅರ್ಥವಾಯಿತೇ?" ಎಂದು ಹೇಳಿದಳು ಪುಟ್ಟ ಮಗ ತಲೆ ಬಾಗಿ, "ಸಾರಿ ಅಮ್ಮ!" ಎಂದ.

ಅವನನ್ನು ಅಲ್ಲಿಂದ ಹೋಗಲು ಹೇಳಿದ ನಂತರ, ತಾಯಿ ಹಿರಿಯವನ ಬಳಿ ಕೇಳಿದಳು. "ನೀನು ಚಾಕೊಲೇಟ್ ತೆಗೆದುಕೊಂಡು ತಿಂದೆಯಾ?" ಅವನು ನಾಚಿಕೆಯಿಂದ, "ಹೌದು, ಅಮ್ಮ! ನಾನು ಅದನ್ನು ತೆಗೆದುಕೊಂಡು ತಿಂದೆ" ಎಂದ. "ನೋಡು ಅದನ್ನು ತಿಂದಿದ್ದು ನಿನ್ನ ತಪ್ಪಲ್ಲ. ಆದರೆ ಸುಳ್ಳು ಹೇಳಿದ್ದು ನಿನ್ನ ತಪ್ಪೇ. ನೀನು ಯಾರ ಬಳಿ ಬೇಕಾದರೂ ಸತ್ಯವನ್ನು ಮರೆಮಾಚಬಹುದು. ಆದರೆ ಯಾವಾಗಲೂ ನಿನ್ನ ತಮ್ಮನ ಬಳಿ ಮಾತ್ರ ಸತ್ಯವನ್ನೇ ಹೇಳಬೇಕು" ಎಂದು ಹೇಳಿದಳು.

ಇದರ ನಂತರ ಆ ಸಹೋದರರು ದೊಡ್ಡವರಾದ ನಂತರವೂ ಅವರ ನಡುವಿನ ಪ್ರೀತಿ ಕಡಿಮೆಯಾಗಲಿಲ್ಲ.

ಮೂರನೆಯ ಘಟನೆ... ಅದು ಹೆಚ್ಚಾಗಿ ಶ್ರೀಮಂತ ವಿದ್ಯಾರ್ಥಿಗಳೇ ಓದುತ್ತಿದ್ದ ಕಾಲೇಜಾಗಿದ್ದು, ಅಲ್ಲಿಗೆ ಒಂದು ದತ್ತಿ ಸಂಸ್ಥೆಯ ಸಹಾಯದಿಂದ ಸೇರಿಕೊಂಡ ಮಹೇಶ್. ಓದುತ್ತಿರುವಾಗಲೇ ಕಾಲೇಜು ಗ್ರಂಥಾಲಯದಲ್ಲಿ ಅರೆಕಾಲಿಕ ಕೆಲಸ ಮಾಡುತ್ತಿದ್ದ. ಕೆಲವು ವಿದ್ಯಾರ್ಥಿಗಳು ಅವನನ್ನು 'ಅಟೆಂಡರ್' ಎಂದು ಕೀಟಲೆ ಮಾಡುತ್ತಿದ್ದರು. ಅವನು ಅದನ್ನು ಒಂದು ಮುಗುಳ್ನಗೆಯಿಂದ ನಿಭಾಯಿಸುತ್ತಿದ್ದ.

ಕಾಲೇಜು ಮುಗಿದು ಕೆಲವು ವಾರಗಳ ನಂತರ, ಪದವಿ ಪ್ರದಾನ ಸಮಾರಂಭಕ್ಕಾಗಿ ಎಲ್ಲರೂ ಮತ್ತೆ ಕಾಲೇಜಿನಲ್ಲಿ ಒಟ್ಟುಗೂಡಿದ ದಿನದಂದು ಮಹೇಶ್ ಬಹಳಷ್ಟು ಸಿಹಿತಿಂಡಿಗಳೊಂದಿಗೆ ಬಂದ. ಅವನು ಸಂತೋಷದಿಂದ ಅವುಗಳನ್ನು ತನ್ನ ಸಹಪಾಠಿಗಳಿಗೆ ಕೊಟ್ಟ. "ಏನು ಅಟೆಂಡರ್? ಇದಕ್ಕಿಂತ ದೊಡ್ಡ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಜೋಡಿಸುವ ಕೆಲಸ ಸಿಕ್ಕಿದೆಯಾ?" ಒಬ್ಬ ಸಹಪಾಠಿ ಕೀಟಲೆ ಮಾಡಿದ. ಅದನ್ನು ಕೇಳಿ ಅನೇಕರು ನಕ್ಕರು. "ಇಲ್ಲ, ನನಗೆ ಕೆಲಸ ಸಿಕ್ಕಿದೆ. ನಾನು ಆದಾಯ ತೆರಿಗೆ ಇಲಾಖೆಯಲ್ಲಿ ಮೇಲಧಿಕಾರಿಯಾಗಿ ಕೆಲಸಕ್ಕೆ ಸೇರಿಕೊಂಡಿದ್ದೇನೆ" ಎಂದು ಅವನು ಹೇಳಿದ.

ಅವನ ಸಹಪಾಠಿಗಳು ದಿಗ್ಭ್ರಮೆಗೊಂಡರು. ಅವರಲ್ಲಿ ಕೆಲವರು ಉನ್ನತ ವ್ಯಾಸಂಗಕ್ಕೆ ಸೇರಿಕೊಂಡಿದ್ದರು. ಹಲವರಿಗೆ ಇನ್ನೂ ಕೆಲಸವೇ ಸಿಕ್ಕಿರಲಿಲ್ಲ. ಮಹೇಶನಿಂದ ಮಾತ್ರ ಇದು ಹೇಗೆ ಸಾಧ್ಯವಾಯಿತು? ಒಬ್ಬ ಸಂದೇಹದಿಂದ ಕೇಳಿದ. "ನಾನು ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿದ್ದೆ, ಅಲ್ಲವೇ? ನನಗೆ ಅಲ್ಲಿ ಅಧ್ಯಯನ ಮಾಡಲು ಸಾಕಷ್ಟು ಸಮಯ ಸಿಕ್ಕಿತು. ನನಗೆ ಅಲ್ಲಿ ಸಾಕಷ್ಟು ಪುಸ್ತಕಗಳೂ ಸಿಕ್ಕವು. ಹಾಗಾಗಿ ನಾನು ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಮತ್ತು ಅದರಲ್ಲಿ ಸುಲಭವಾಗಿ ಉತ್ತೀರ್ಣನಾಗಿ ಕೆಲಸಕ್ಕೆ ಸೇರಲು ಸಾಧ್ಯವಾಯಿತು" ಎಂದು ಮಹೇಶ್ ಹೇಳಿದ. ಅವನ ಒಳ್ಳೆಯ ಸ್ವಭಾವ ಅವನಿಗೆ ಅವಕಾಶಗಳನ್ನು ಹುಡುಕಿ ಕೊಟ್ಟಿತು!

ನಾಲ್ಕನೇ ಘಟನೆ... ಸುರೇಶನನ್ನು ಅವನ ಪೋಷಕರು ತುಂಬಾ ಚಿಂತೆಯಿಂದ ಒಬ್ಬ ಸನ್ಯಾಸಿಯ ಬಳಿಗೆ ಕರೆತಂದರು. "ಇವನು ತನ್ನ ಅಧ್ಯಯನವನ್ನು ಪೂರ್ಣಗೊಳಿಸಿದ ಮೂರು ವರ್ಷಗಳಲ್ಲಿ, ಐದು ವ್ಯವಹಾರಗಳನ್ನು ಪ್ರಾರಂಭಿಸಿ ಎಲ್ಲವನ್ನೂ ಅರ್ಧದಲ್ಲಿಯೇ ಮುಚ್ಚಿದ್ದಾನೆ. ಇವನು ಯಾವುದರಲ್ಲೂ ಸ್ಥಿರವಾಗಿ ನಿಲ್ಲುತ್ತಿಲ್ಲ" ಎಂದು ಅವರು ದೂರಿದರು.

ಸನ್ಯಾಸಿ ಏನೂ ಮಾತನಾಡದೆ ಸುರೇಶನನ್ನು ಆಶ್ರಮದ ಹಿಂದಿದ್ದ ತೋಟಕ್ಕೆ ಕರದುಕೊಂಡು ಹೋದರು. ಅವರು ಅವನ ಕೈಗೆ ಒಂದು ಮಾವಿನ ಬೀಜವನ್ನು ಕೊಟ್ಟು ಗುಂಡಿ ತೋಡಿ ನೆಡಲು ಹೇಳಿದರು. ಅವನು ಹಳ್ಳ ತೋಡಿ ಬೀಜ ಹೂಣಿ, ಮಣ್ಣು ಹಾಕಿ ಮುಚ್ಚಿದ ನಂತರ ಅವನನ್ನು ಅಲ್ಲಿಂದ ಕರೆದುಕೊಂಡು ಹೋದರು. ಇಬ್ಬರೂ ತುಂಬಾ ಹೊತ್ತು ಮಾತನಾಡಿದರು. ಒಟ್ಟಿಗೆ ಊಟ ಮಾಡಿದರು. ಹೀಗೇ ತುಂಬಾ ಸಮಯ ಕಳೆಯಿತು. ಈಗ ಮತ್ತೆ ಅವನೊಂದಿಗೆ ತೋಟಕ್ಕೆ ಹಿಂತಿರುಗಿ ಬಂದ ಸನ್ಯಾಸಿ, "ಓಹ್, ಇಲ್ಲಿ ಇನ್ನೂ ಮಾವಿನ ಮರ ಬೆಳೆದೇ ಇಲ್ಲ. ಅದನ್ನು ಅಗೆದು ತೆಗೆದು ಬೇರೆಡೆ ನೆಡು" ಎಂದು ಹೇಳಿದರು.

ಅವನಿಗೆ, "ಎರಡು ಗಂಟೆಗಳಲ್ಲಿ ಅದು ಹೇಗೆ ಗಿಡ ಬೆಳೆಯುತ್ತದೆ? ನಿಮಗೇನು ಹುಚ್ಚು ಹಿಡಿದಿದೆಯೇ?" ಎಂದು ಕೇಳಬೇಕೆನಿಸತು. ಆದರೆ, ಅವರ ಮೇಲೆ ಗೌರವ ಭಾವ ಇದ್ದುದರಿಂದ ಏನೂ ಮಾತನಾಡದೆ ಸುಮ್ಮನೆ ಅವರು ಹೇಳಿದಂತೆ ಅದನ್ನು ಅಗೆದು ತೆಗೆದು ಬೇರೆ ಸ್ಥಳದಲ್ಲಿ ನೆಟ್ಟ.

ಇಬ್ಬರೂ ಮತ್ತೆ ಆಶ್ರಮದೊಳಗೆ ಹೋದರು. ಸನ್ಯಾಸಿ ಅಲ್ಲಿಗೆ ಬಂದಿದ್ದ ಭಕ್ತರಿಗೆ ಉಪನ್ಯಾಸ ನೀಡಿದರು. ಸುರೇಶ್ ಕೂಡ ಮೌನವಾಗಿ ಆಲಿಸಿದ. ಅಷ್ಟು ಹೊತ್ತಿಗೆ ಸಂಜೆಯಾಗಿತ್ತು. ಮತ್ತೆ ಇಬ್ಬರು ತೋಟಕ್ಕೆ ಹಿಂತಿರುಗಿದರು. "ಇದು ಏನು? ಈ ಮಾವಿನ ಮರ ಇನ್ನೂ ಬೆಳೆದಿಲ್ಲ ಮತ್ತು ಫಲ ನೀಡಿಲ್ಲ! ನಾವು ಅದನ್ನು ಅಗೆದು ಬೇರೆ ಸ್ಥಳದಲ್ಲಿ ನೆಡೋಣವೇ?" ಎಂದು ಸನ್ಯಾಸಿ ಕೇಳಿದಾಗ ಸುರೇಶನಿಗೆ ನಿಜವಾಗಿಯೂ ಕೋಪ ಬಂತು. "ನೀವು ಯಾಕೆ ಇಷ್ಟು ಆತುರದಲ್ಲಿದ್ದೀರಿ? ಒಂದು ಮಾವಿನ ಮರವು ಒಂದೇ ದಿನದಲ್ಲಿ ಮೊಳಕೆಯೊಡೆದು ಫಲ ನೀಡುವುದು ಸಾಧ್ಯವೇ?" ಎಂದು ಅವನು ಕೇಳಿದ.

"ಹೌದು. ಹಾಗೆಯೇ ನೀವು ಒಂದು ವ್ಯವಹಾರವನ್ನು ಪ್ರಾರಂಭಿಸಿದರೆ, ಅದನ್ನು ಚೆನ್ನಾಗಿ ಅಭಿವೃದ್ಧಿಪಡಿಸಬೇಕು. ಅದರಲ್ಲಿರುವ ಎಲ್ಲಾ ಅವಕಾಶಗಳನ್ನೂ ನೀವು ಹುಡುಕಬೇಕು. ಅದು ಬೆಳೆಯಲು ಅಗತ್ಯವಾದ ವಾತಾವರಣವನ್ನು ನೀವು ಸೃಷ್ಟಿಸಬೇಕು. ಅದನ್ನೆಲ್ಲಾ ಮಾಡದೆ, ಆತುರಪಟ್ಟು ಅಸಹನೆಯಿಂದ ಅದನ್ನು ಮುಚ್ಚಿ ಬೇರೊಂದು ವ್ಯವಹಾರವನ್ನು ಪ್ರಾರಂಭಿಸುವ ಯೋಚನೆಯನ್ನು ಮಾಡುವುದು ಸರಿಯೇ?" ಎಂದು ಸನ್ಯಾಸಿ ಕೇಳಿದರು.

ಸುರೇಶ್ ತನ್ನ ತಪ್ಪನ್ನು ಅರಿತುಕೊಂಡು ಸನ್ಯಾಸಿಗೆ ನಮಸ್ಕರಿಸಿ ಬೀಳ್ಕೊಟ್ಟ.

ಸದ್ಗುಣಗಳನ್ನು ಪಡೆಯಲು ಸರಳ ಮಾರ್ಗಗಳು!

- ನೀವು ಸಂವಹನ ನಡೆಸುವ ಎಲ್ಲ ಜನರೊಂದಿಗೆ ಪ್ರಾಮಾಣಿಕರಾಗಿರಿ. ಅವರು ನಿಮ್ಮ ಸ್ನೇಹಿತರಾಗಿರಲಿ, ಸಂಬಂಧಿಕರಾಗಿರಲಿ ಅಥವಾ ನಿಮ್ಮ ಸುತ್ತಮುತ್ತಲಿನವರಾಗಿರಲಿ. ಎಲ್ಲಾ ಸಂದರ್ಭಗಳಲ್ಲಿಯೂ ಅವರೊಂದಿಗೆ ಒಂದೇ ರೀತಿ ವರ್ತಿಸಿ.

- ನೀವು ಇತರರಲ್ಲಿ ಒಳ್ಳೆಯ ಗುಣಗಳನ್ನು ಮತ್ತು ಅವರು ಮಾಡುವ ಒಳ್ಳೆಯ ಕಾರ್ಯಗಳನ್ನು ನೋಡಿದಾಗ ಮುಕ್ತವಾಗಿ ಅವರನ್ನು ಪ್ರಶಂಸಿಸಿ. ಇತರರ ಯಶಸ್ಸನ್ನು ನೀವೂ ಸಂಭ್ರಮಿಸಿ.

- ನಿಮ್ಮ ಪೋಷಕರಿಂದ ಹಿಡಿದು, ನಿಮ್ಮ ಎಲ್ಲಾ ಆಪ್ತ ಸಂಬಂಧಿಕರೊಂದಿಗೆ ಯಾವಾಗಲೂ ಸಂಪರ್ಕದಲ್ಲಿರಿ. ಅವರನ್ನು ಗೌರವ ಮತ್ತು ಕೃತಜ್ಞತೆಯಿಂದ ನೋಡಿಕೊಳ್ಳಿ.

- ಎಲ್ಲರನ್ನೂ ಪ್ರೀತಿ ಮತ್ತು ದಯೆಯಿಂದ ನಡೆಸಿಕೊಳ್ಳಿ. ನೀವು ಎಷ್ಟು ದಯಾಳುಗಳಾಗಿದ್ದೀರಿ ಎಂಬುದರ ಮೇಲೆ ನಿಮ್ಮ ಮೌಲ್ಯ ಮತ್ತು ಗೌರವ ಹೆಚ್ಚಾಗುತ್ತದೆ.

- ಉದಾರರಾಗಿರಿ. ನೀವು ಅನೇಕ ಜನರಿಗೆ ಆರ್ಥಿಕವಾಗಿ ಸಹಾಯ ಮಾಡುವಷ್ಟು ಶ್ರೀಮಂತರಾಗಿಲ್ಲದಿರಬಹುದು, ಆದರೆ ನಿಮ್ಮ ಕಾರ್ಯಗಳು ಅವರಿಗೆ ಸಹಾಯಕವಾಗಿರಲಿ.

- ಸಾರ್ವಜನಿಕ ಸ್ಥಳಗಳಲ್ಲಿ ನೀವು ಹೇಗೆ ವರ್ತಿಸುತ್ತೀರಿ ಎಂಬುದು ಸಹ ನಿಮ್ಮ ಉತ್ತಮ ನಡವಳಿಕೆಯ ಭಾಗವಾಗಿದೆ. ಎಲ್ಲೋ ಯಾವಾಗಲೋ ನಿಮಗೆ ಸಹಾಯ ಮಾಡಿದ ಅಪರಿಚಿತರ ಮುಖ ಕೂಡ ನಿಮಗೆ ಒಮ್ಮೊಮ್ಮೆ ನೆನಪಾಗುತ್ತದೆ ತಾನೇ! ಹಾಗೆಯೇ ಇತರರು ಕೂಡ ನಿಮ್ಮ ಮುಖವನ್ನು ನೆನಪಿಸಿಕೊಳ್ಳುವ ರೀತಿಯಲ್ಲಿ ವರ್ತಿಸಿ. ಯಾವುದೇ ಪರಿಸ್ಥಿತಿಯನ್ನಾಗಿರಲಿ, ಇನ್ನೊಬ್ಬರ ಕಣ್ಣುಗಳ ಮೂಲಕ ನೋಡಿ, ಯೋಚಿಸಿ. ಯಾರಾದರೂ ನಿಮ್ಮನ್ನು ಕೆರಳಿಸಿದರೂ, ಅವರು ಆ ಪರಿಸ್ಥಿತಿಯಲ್ಲಿ ಏಕೆ ಹಾಗೆ ವರ್ತಿಸುತ್ತಿದ್ದಾರೆಂದು ನೀವು ಯೋಚಿಸಿ ನೋಡಿದರೆ, ನಂತರ ನೀವು ಪ್ರತಿಯಾಗಿ ಕಿರಿಕಿರಿಗೊಳ್ಳುವುದಿಲ್ಲ.

- "ಇದು ನನ್ನ ಕೆಲಸವಲ್ಲ" ಅಥವಾ "ನನಗೆ ಸಮಯವಿಲ್ಲ" ಎಂದು ಓಡಿಹೋಗುವ ಬದಲು, ಕೆಲಸವನ್ನು ಪೂರ್ಣಗೊಳಿಸಲು ಹೆಚ್ಚುವರಿ ಪ್ರಯತ್ನ ಮಾಡುವ ಅಭ್ಯಾಸವು ನಿಮ್ಮನ್ನು ಉನ್ನತೀಕರಿಸುತ್ತದೆ.

- ಒಂದು ಸನ್ನಿವೇಶ ಕೆಲವರನ್ನು ಸುಸ್ತಾಗಿಸಬಹುದು. ಒಂದು ಸಮಸ್ಯೆ ಕೆಲವರನ್ನು ನಿರಾಶೆಗೊಳಿಸಬಹುದು. ಒಂದು ವೈಫಲ್ಯ ಕೆಲವರನ್ನು ಕುಗ್ಗಿಸಬಹುದು. ಆದರೆ. ಪ್ರತಿಯೊಂದರಲ್ಲೂ ಏನಾದರೂ ಸಕಾರಾತ್ಮಕತೆಯನ್ನು ನೋಡಲು ಕಲಿಯಿರಿ.

- ಎಲ್ಲಾ ಸಮಯದಲ್ಲೂ ಎಲ್ಲಾ ಕೆಲಸವನ್ನೂ ನಿಮ್ಮ ಸಂಪೂರ್ಣ ಸಾಮರ್ಥ್ಯವನ್ನು ಉಪಯೋಗಿಸಿ ಚೆನ್ನಾಗಿ ಮಾಡಿ ಒಂದು ದಿನ ಚೆನ್ನಾಗಿ ಮಾಡುವುದು, ಇನ್ನೊಂದು ದಿನ ಹೇಗೋ ಮಾಡಿದರಾಯಿತು ಎಂಬ ಬೇಧಭಾವ ನಿಮ್ಮಲ್ಲಿ ಇರಬಾರದು.

- ಬಿಕ್ಕಟ್ಟಿನ ಸಮಯದಲ್ಲಿ ನೀವು ತೋರಿಸುವ ಧೈರ್ಯ ಮತ್ತು ನಿಮ್ಮ ದೃಢಸಂಕಲ್ಪವೇ ನೀವು ಯಾರೆಂದು ಜಗತ್ತಿಗೆ ತೋರಿಸುತ್ತದೆ. ಯಾವುದೇ ಸಮಸ್ಯೆಯಿರಲಿ, ದೃಢಸಂಕಲ್ಪದಿಂದ ಅದರಿಂದ ಹೊರಬನ್ನಿ.

- ಸಮಾಜವನ್ನು ವಿನ್ಯಾಸಗೊಳಿಸಿರುವುದೇ ಎಲ್ಲರೂ ಇತರರೊಂದಿಗೆ ಒಟ್ಟಾಗಿ ಸೇರಿ ಕೆಲಸ ಮಾಡಲು ಅನುಕೂಲವಾಗಲಿ ಎಂಬ ದೃಷ್ಟಿಯಿಂದ. ಆದರೆ ಕೆಲವೊಮ್ಮೆ ನಾವು ನಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಕಲಿಯಬೇಕಾಗುತ್ತದೆ. ನೀವು ಇತರರಿಂದ ಹೆಚ್ಚು ಸ್ವತಂತ್ರರಾದಷ್ಟೂ, ನೀವು ಹೆಚ್ಚು ಯಶಸ್ವಿಯಾಗುತ್ತೀರಿ.

- ನಿಮಗೆ ತಾಳ್ಮೆ ಮತ್ತು ಸಮರ್ಪಣೆ ಇರಬೇಕು. ನೀವು ಒಂದು ಕೆಲಸವನ್ನು ಪ್ರಾರಂಭಿಸಿದರೆ ಮತ್ತೆ ನೀವು ವಿಚಲಿತರಾಗಬಾರದು. ಅದನ್ನು ಪೂರ್ಣಗೊಳಿಸುವವರೆಗೆ ಸಮರ್ಪಣಾಭಾವದಿಂದ ಕೆಲಸ ಮಾಡಬೇಕು. ಅದೇ ರೀತಿ, ನೀವು "ನಾನು ಇದನ್ನು ಮಾಡುತ್ತೇನೆ" ಎಂದು ಭರವಸೆ ನೀಡಿದರೆ, ಖಂಡಿತವಾಗಿಯೂ ನಿಮ್ಮ ಮಾತಿನಂತೆ ನಡೆದುಕೊಳ್ಳಿ.

Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL

ACTIVE FIT
VEST
RAMRAJ
VESTS
BRIEFS • TRUNKS
Inners for Winners!

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-07-2026 Posted at Tirupur BPC on 5th of every month.